ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

JSS VARTHAPATHRA

Monthly Magazine

ಸಂಪುಟ 11 ಸಂಚಿಕೆ 10 ಅಕ್ಟೋಬರ್ 2026



ಮೈಸೂರಿನ ರಾಮಕೃಷ್ಣನಗರದ ವಾಸು ಬಡಾವಣೆಯಲ್ಲಿ ನಿರ್ಮಿಸಿರುವ ಜೆಎಸ್‌ಎಸ್ ಹಿರಿಯರ ಮನೆ ಹಾಗೂ ಶಿವ ದೇವಾಲಯವನ್ನು ಸುತ್ತೂರು ಮತ್ತು ಶ್ರೀ ಅವಧೂತ ದತ್ತ ಪೀಠದ ಜಗದ್ಗುರುದ್ವಯರ ದಿವ್ಯ ಸಾನ್ನಿಧ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿದರು. ಶ್ರೀ ವಿ. ಮಹೇಂದ್ರ, ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಶ್ರೀಮತಿ ರಾಣಿ ಸತೀಶ್, ಶ್ರೀ ಜಿ.ಟಿ. ದೇವೇಗೌಡ, ಕನಕಪುರ ಮತ್ತು ರಾಮಕೃಷ್ಣ ಆಶ್ರಮದ ಶ್ರೀಗಳು, ಶ್ರೀ ಹೆಚ್.ಎನ್. ಶಿವಕುಮಾರ್, ಶ್ರೀ ಹೆಚ್.ಎಸ್. ರಾಘವೇಂದ್ರರಾವ್‌ರವರುಗಳಿದ್ದಾರೆ. (9 ಸೆಪ್ಟೆಂಬರ್ 2026)



ಮೈಸೂರಿನ ಹೂಟಗಳ್ಳಿಯಲ್ಲಿ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ನೂತನ ಕಟ್ಟಡ ಹಾಗೂ ಶ್ರೀ ಘನಲಿಂಗ ಶಿವಯೋಗಿ ಸಭಾಭವನದ ಉದ್ಘಾಟನೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಎಸ್. ಮಧು ಬಂಗಾರಪ್ಪ ನೆರವೇರಿಸಿದರು. ಶ್ರೀ ಕೆ. ವಿವೇಕಾನಂದ, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಹಾಗೂ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳಿದ್ದಾರೆ. (17 ಸೆಪ್ಟೆಂಬರ್ 2026)



ಮೈಸೂರಿನ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ರಜತ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಪ್ರೊ. ಎಸ್.ಆರ್. ನಿರಂಜನ, ಡಾ. ಸಿ.ಜಿ. ಬೆಟಸೂರಮಠ, ಶ್ರೀಮತಿ ಆಶಾ ರಾಯರೆಡ್ಡಿ, ಶ್ರೀ ಬಸವರಾಜ ರಾಯರೆಡ್ಡಿ, ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಪ್ರೊ. ಎನ್.ಕೆ. ಲೋಕನಾಥ್, ಪ್ರೊ. ಎ.ಪಿ. ಜ್ಞಾನಪ್ರಕಾಶ್, ಡಾ. ಪುಷ್ಪಾವತಿ, ಪ್ರೊ. ಎಸ್.ಪಿ. ಮಂಜುನಾಥ್ ಹಾಗೂ ಡಾ. ಆರ್. ಸುಮಾರವರುಗಳಿದ್ದಾರೆ (15 ಸೆಪ್ಟೆಂಬರ್ 2026)

ಪ್ರಕೃತಿಯು ಸಂಭ್ರಮಿಸುವ ಮಾಸ ಶ್ರಾವಣ



ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀಮತಿ ನಿರ್ಮಲಾ ಮಠಪತಿಯವರು ಸಮಾರೋಪ ಭಾಷಣ ಮಾಡಿದರು. ಶ್ರೀ ಎನ್.ಪಿ. ಚಂದ್ರಶೇಖರ, ಶ್ರೀಮತಿ ರಶ್ಮಿ ಕೋಟಿ ಹಾಗೂ ಶ್ರೀ ಷಡಕ್ಷರಿ ಸ್ವಾಮಿಗಳವರು ಉಪಸ್ಥಿತರಿದ್ದರು. (10 ಸೆಪ್ಟೆಂಬರ್ 2026)

'ಪ್ರಕೃತಿಯು ಸಂಭ್ರಮಿಸುವ ಮಾಸ ಶ್ರಾವಣ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀಮತಿ ನಿರ್ಮಲಾ ಮಠಪತಿಯವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 10.9.2026ರಂದು ಜರುಗಿದ ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಭಾರತೀಯ ಪರಂಪರೆಯಲ್ಲಿ ಶ್ರಾವಣಮಾಸಕ್ಕೆ ವಿಶೇಷ ಮಹತ್ವವಿದೆ. ಶಿವನ ಆರಾಧನೆಗೆ ಶ್ರೇಷ್ಠವಾದದ್ದು ಈ ಮಾಸ. ಸಾಲು ಸಾಲು ಹಬ್ಬಗಳು, ವ್ರತಗಳು ಎಲ್ಲ ವಯೋಮಾನದವರಿಗೂ ಸಂಭ್ರಮವನ್ನು ತರುತ್ತವೆ. ಉತ್ತಮ ಮಳೆಯಿಂದ ಧರೆಯು ಹಸಿರಾಗುವಂತೆ ಜ್ಞಾನಿಗಳ ನುಡಿಗಳನ್ನು ಶ್ರವಣ ಮಾಡುವುದರಿಂದ ಮನಸ್ಸಿನ ಬುದ್ಧಿಯು ಹಸಿರಾಗುವುದು. ಮನದಲ್ಲಿ ಬೆಳೆಯುವ ಕಳೆಯನ್ನು ತೆಗೆಯಲು ಪುರಾಣ, ಪ್ರವಚನಗಳನ್ನು ಆಲಿಸಬೇಕು. ಪಾರಮಾರ್ಥ ಜ್ಞಾನವನ್ನು ಶ್ರವಣ ಮಾಡಿಸಿ ಬದುಕಿನಲ್ಲಿ ಪ್ರೀತಿ, ವಿಶ್ವಾಸ, ತ್ಯಾಗ ಮೊದಲಾದ ಮೌಲ್ಯಗಳನ್ನು ಬಿತ್ತುವಂತಹ ಕಾರ್ಯಕ್ರಮವನ್ನು ಶ್ರೀಮಠದಿಂದ ಆಯೋಜಿಸಿರುವುದು ಎಂದರು.

ಆಂದೋಲನ ದಿನಪತ್ರಿಕೆಯ ಶ್ರೀಮತಿ ರಶ್ಮಿ ಕೋಟಿಯವರು, ಶುದ್ಧ ಮನಸ್ಸಿನ ಭಕ್ತಿಗೆದೇವನೊಲಿಯುತ್ತಾನೆ. ಮಾಡುವ ಕಾಯಕದಲ್ಲಿ ಶ್ರದ್ಧೆ ಇದ್ದರೆ ಗುರಿ ಸಾಧಿಸುವುದು ಸುಲಭವಾಗುತ್ತದೆ. ಒಳ್ಳೆಯ

ವಿಷಯಗಳನ್ನು ಶ್ರವಣ ಮಾಡುವುದರಿಂದ ಅಂತರಂಗ ಶುದ್ಧಿಯಾಗಿ ಉತ್ತಮ ಸಮಾಜದ ಸೃಷ್ಟಿಗೆ ನೆರವಾಗುತ್ತದೆ. ಈ ನಿಟ್ಟಿನಲ್ಲಿ ಸುತ್ತೂರು ಶ್ರೀಮಠವು ಆಧುನಿಕ ಶಿಕ್ಷಣ ಹಾಗೂ ಪಾರಂಪರಿಕ ಸಂಸ್ಕೃತಿಗಳೆರಡನ್ನೂ ಒಟ್ಟಿಗೆ ಕೊಂಡೊಯ್ದು ಜನರ ಮನಸ್ಸನ್ನು ಬೆಸೆಯುವ ಕಾರ್ಯದಲ್ಲಿ ತೊಡಗಿದೆ ಎಂದು ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀಎನ್.ಪಿ. ಚಂದ್ರಶೇಖರರವರು, 'ಹದಿವಯಸ್ಸಿನಲ್ಲಿ ಕಲಿತ ಬುದ್ಧಿ, ಮುದಿವಯಸ್ಸಿನ ತನಕ' ಎನ್ನುವಂತೆ ಚಿಕ್ಕ ವಯಸ್ಸಿನಲ್ಲಿ ಕಲಿತ ಸಂಸ್ಕಾರದಿಂದ ಭವಿಷ್ಯದ ಬದುಕು ಹಸನಾಗುತ್ತದೆ. ಮಕ್ಕಳಲ್ಲಿ ಆತ್ಮವಿಶ್ವಾಸ, ಶ್ರದ್ಧೆ ಹಾಗೂ ಕಲಿಕಾ ನಿಷ್ಠೆ ಇದ್ದರೆ ಯಶಸ್ಸುತಾನಾಗಿಯೇ ಲಭಿಸುತ್ತದೆ. ಶರಣರೆಲ್ಲರೂ ಕಾಯಕದಿಂದ ಬಂದ ಸಂಪತ್ತಿನಿಂದ ಜಂಗಮರ ಸೇವೆ ಮಾಡಿದರು. ಅದೇ ದಾರಿಯಲ್ಲಿ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡು ನಡೆಯಬೇಕು. ಉಳಿ ಪೆಟ್ಟು ತಿಂದ ಕಲ್ಲು ಮೂರ್ತಿಯಾಗುವಂತೆ ಕಷ್ಟಪಟ್ಟು ಶ್ರದ್ಧೆಯಿಂದ ಕಲಿತು, ಸಾಧನೆಯ ಮಾರ್ಗವನ್ನು ಕಂಡುಕೊಳ್ಳಬೇಕು. ಪರಮಪೂಜ್ಯ ಜಗದ್ಗುರುಗಳವರು ಭಾರತೀಯ ಸಂಸ್ಕೃತಿ ಪರಂಪರೆಯನ್ನು ಸಪ್ತಸಾಗರದಾಚೆಗೂ ವಿಸ್ತರಿಸಿರುವುದು ಪ್ರಶಂಸನೀಯ ಎಂದರು.

ಹಲಸಹಳ್ಳಿ ಗವಿಮಠದ ಶ್ರೀ ಷಡಕ್ಷರಿ ಸ್ವಾಮಿಗಳು, ಶ್ರಾವಣ ಮಾಸದಲ್ಲಿ ಯತಿಗಳು ಚತುರ್ಮಾಸ ವ್ರತವನ್ನು ಆಚರಿಸುತ್ತಾರೆ. ಆಧ್ಯಾತ್ಮಿಕ ವಿಚಾರಗಳನ್ನು ಆಲಿಸಿ ಮನನ ಮಾಡುವುದರಿಂದ ಲೌಕಿಕ ಬದುಕಿನ ಜಂಜಾಟಗಳಿಂದ ಹೊರಬಂದು ಮುಕ್ತಿ ಮಾರ್ಗವನ್ನು ಪಡೆಯಬಹುದು. ಶಾಸ್ತ್ರ, ಪುರಾಣ, ರಾಮಾಯಣ, ಮಹಾಭಾರತ ಹಾಗೂ ವಚನ ಸಾಹಿತ್ಯವನ್ನು ಆಲಿಸಲು ಶ್ರಾವಣ ಮಾಸವು ಯೋಗ್ಯವಾಗಿದೆ. ಇಂತಹ ಅವಕಾಶವನ್ನು ಸುತ್ತೂರು ಶ್ರೀಮಠವು ಕಲ್ಪಿಸಿ ಭಾರತೀಯ ಗುರುಕುಲ ಪರಂಪರೆಯನ್ನು ಪುನರುತ್ಥಾನಗೊಳಿಸಿದೆ ಎಂದು ತಿಳಿಸಿದರು.

ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಪ್ರವಚನವನ್ನು ಜೆಎಸ್ಎಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಹೆಚ್.ಬಿ. ದೇವಣ್ಣನವರು ನಡೆಸಿಕೊಟ್ಟರು. ಪ್ರವಚನವನ್ನು ಆಲಿಸಿ ಪ್ರಬಂಧಗಳನ್ನು ರಚಿಸಿದ ಶ್ರೋತೃಗಳು ಹಾಗೂ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ಶ್ರೀ ಜಯರಾಜೇಂದ್ರರು, ಹರಗುರು ಚರಮೂರ್ತಿಗಳು, ಮಂಡಿಕೇರಿಯ ಉದ್ಯಮಿಗಳಾದ ಶ್ರೀ ಸಿದ್ದಲಿಂಗೇಶ್, ಶ್ರೀ ಜೆ.ಪಿ. ಕೋಟಿ ಹಾಗೂ ಜೆಎಸ್ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್‌ರವರು ಉಪಸ್ಥಿತರಿದ್ದರು.

ಸುತ್ತೂರಿನ ಶಾಲಾ ಮಕ್ಕಳು ಪ್ರಾರ್ಥಿಸಿದರು. ಶ್ರೀಮತಿ ಜಗದಾಂಬಿಕ ಸ್ವಾಗತಿಸಿದರು. ಶ್ರೀಮತಿ ಎಸ್. ಜೆ. ಸೌಜನ್ಯ ವಂದಿಸಿದರು. ಶ್ರೀ ಹೆಚ್.ಎಂ. ಗಿರೀಶ್ ನಿರೂಪಿಸಿದರು. ಗುರುಕುಲದ ಸಾಧಕರು, ಜೆಎಸ್ಎಸ್ ಸಂಸ್ಥೆಗಳ ಅಧಿಕಾರಿ ವರ್ಗದವರು, ಸುತ್ತೂರು ಹಾಗೂ ಸುತ್ತಮುತ್ತಲ ಗ್ರಾಮದ ಸದ್ಭಕ್ತರು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.

ಉರಿಗೆ ರಸ ನಿಂದಾಗವೆ ರಸಸಿದ್ಧಿ ಎಂದೆ
ಅಸಿಗೆ ಶರೀರ ನಿಂದಲ್ಲಿಯೆ ಕಾಯಸಿದ್ಧಿ ಎಂದೆ
ಲಿಂಗವಿಡಿದ ತನುವಿಂಗೆ ಅಂಗವ್ಯಾಪಾರವ ಬಿಟ್ಟಾಗವೆ
ಲಿಂಗಸಿದ್ಧಿ ಎಂಬೆ
ಇದರಂಗ ಒಂದೂ ಇಲ್ಲದಿರ್ದಡೆ
ತ್ರಿಭಂಗಿಯಂ ತಿಂದು ಅಂದಗೆಡುವನಿಗೇಕೆ, ಲಿಂಗದ ಶುದ್ಧಿ
ನಿಃಕಳಂಕ ಮಲ್ಲಿಕಾರ್ಜುನಾ

– ಮೋಳಿಗೆ ಮಾರಯ್ಯ

ಯುವಜನರಿಗೆ ತಂತ್ರಜ್ಞಾನ – ಸಂಸ್ಕಾರ ಎರಡೂ ಅಗತ್ಯ



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪದಲ್ಲಿ ಬೇಬಿಬೆಟ್ಟದ ಶ್ರೀಗಳು ಮಾತನಾಡುತ್ತಿರುವುದು. ಡಾ. ಕೆ. ಅನಂತರಾಮು, ಶ್ರೀ ಟಿ. ಜವರೇಗೌಡ ಮತ್ತು ಶ್ರೀ ಗಣೇಶ್‌ರವರುಗಳಿದ್ದಾರೆ. (11 ಸೆಪ್ಟೆಂಬರ್ 2026)

ಯುವಜನರಿಗೆ ತಂತ್ರಜ್ಞಾನ–ಸಂಸ್ಕಾರ ಎರಡೂ ಅಗತ್ಯ ಎಂದು ಬೇಬಿಬೆಟ್ಟದ ಶ್ರೀ ರಾಮಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮಿಗಳು ಹೇಳಿದರು.

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 11.9.2026 ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪದಲ್ಲಿ ಅವರು ಮಾತನಾಡಿದರು. ಇಂದು ತಂತ್ರಜ್ಞಾನ ಸಾಕಷ್ಟು ಬೆಳವಣಿಗೆ ಹೊಂದಿದೆ. ಆದರೆ ಸಂಸ್ಕೃತಿ, ಸಂಸ್ಕಾರಗಳು ಯುವಜನರಲ್ಲಿ ಕಡಿಮೆಯಾಗುತ್ತಿವೆ. ಪೈಪೋಟಿ ಮತ್ತು ಹೋಲಿಕೆಯ ಜೀವನ ನಡೆಸಲಾಗುತ್ತಿದೆ. ಸಲ್ಲದ ವಿಚಾರಗಳಿಗೆ ಸಮಯ ವ್ಯರ್ಥ ಮಾಡಲಾಗುತ್ತಿದೆ. ಆಡಂಬರ ಮತ್ತು ತೋರಿಕೆಯ ಜೀವನಕ್ಕೆ ಜನ ಸೀಮಿತರಾಗುತ್ತಿದ್ದಾರೆ. ಅವುಗಳಿಂದ ಹೊರಬರಬೇಕಾದರೆ ಇಂತಹ ಆಧ್ಯಾತ್ಮಿಕ ಪ್ರವಚನಗಳಲ್ಲಿ ಪಾಲ್ಗೊಳ್ಳಬೇಕು. ಸದ್ವಿಚಾರಗಳ ಕಡೆಗೆ ಹೆಚ್ಚಿನ ಮಹತ್ವ ನೀಡಬೇಕು. ಇದರಿಂದ ಮನಸ್ಸಿಗೆ ಹೊಸ ಚೈತನ್ಯ ದೊರಕುತ್ತದೆ. ನಿರಂತರವಾಗಿ ಇಂತಹ ಕಾರ್ಯಕ್ರಮಗಳನ್ನು ಸುತ್ತೂರು ಶ್ರೀಮಠ ಹಮ್ಮಿಕೊಂಡು ಬರುತ್ತಿದೆ. ಪರಮಪೂಜ್ಯ ಜಗದ್ಗುರವರು ನಮ್ಮಂತಹ ಅನೇಕ ಮಠಾಧೀಶರುಗಳಿಗೆ ಆದರ್ಶ ಪ್ರಾಯರಾಗಿದ್ದಾರೆ ಎಂದು ಹೇಳಿದರು.

ಚಾಮರಾಜನಗರ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಟಿ. ಜವರೇಗೌಡರವರು, ಶ್ರೀಮಠದಿಂದ ಜೀವನಕ್ಕೆ ಪೂರಕವಾದ ಇಂತಹ ಅರ್ಥಪೂರ್ಣವಾದ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಇಲ್ಲಿ ಪ್ರಚುರಪಡಿಸುವ ಆಧ್ಯಾತ್ಮಿಕ ಮತ್ತು ದೈವಿಕ ಚಿಂತನೆಗಳು ಸಮಾಜದಲ್ಲಿ ಶಾಂತಿ, ಸಹಬಾಳ್ವೆ ನಡೆಸಲು ಸಹಕಾರಿಯಾಗುತ್ತವೆ. ಇಂತಹ ಕ್ಷಣಗಳು ಜೀವನವನ್ನು ಪವಿತ್ರವಾಗಿಸುತ್ತವೆ. ನಮ್ಮ ಚಿಂತನೆಗಳು ವ್ಯಕ್ತಿತ್ವವನ್ನು ರೂಪಿಸುತ್ತವೆ. ಉತ್ತಮ ನಾಗರಿಕ ಸಮಾಜ ನಿರ್ಮಾಣ

ಮಾಡುವಲ್ಲಿ ಪೂಜ್ಯರು ಶ್ರಮಿಸುತ್ತಿರುವುದು ಹೆಮ್ಮೆಯ ವಿಚಾರವಾಗಿದೆ ಎಂದರು.

ಡಾ. ಕೆ. ಅನಂತರಾಮುರವರು, ಲಕ್ಷಣ್ಣದಂಡೇಶನು ಶಿವತತ್ತ್ವ ಚಿಂತಾಮಣಿಯಒಂದೊಂದು ಪದ್ಯದಲ್ಲಿಯೂ ಒಬ್ಬೊಬ್ಬ ವ್ಯಕ್ತಿಯ ಮಹತ್ವಪೂರ್ಣವಾದ ಜೀವನವನ್ನೇ ಅಡಕಗೊಳಿಸಿದ್ದಾನೆ. ಅವರ ಜೀವನದ ಗಾಥೆಯನ್ನು ಕೇಳಿಸಿಕೊಳ್ಳಲು ಸಾಧ್ಯವಾಗಿದ್ದು ಎಲ್ಲರ ಸೌಭಾಗ್ಯ. ಇಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. ಪೂಜ್ಯರು ಸಂಸ್ಕೃತಿಮತ್ತು ಸಂಸ್ಕಾರಗಳನ್ನು ಪೋಷಿಸುವ ಮಹಾಪೋಷಕರು. ಸಾಂಸ್ಕೃತಿಕ ಪುನರುತ್ಥಾನಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ದಶ ದಾಸೋಹಗಳ ಮೂಲಕ ರಾಜೇಂದ್ರ ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದು ಶ್ರೀಮಠವನ್ನು ಹೆಮ್ಮರವಾಗಿ ಬೆಳೆಸಿದ್ದಾರೆ. ಶ್ರೀಮಠದ ಪುಣ್ಯದ ಬೇರುಗಳು ಸುತ್ತೂರಿನಲ್ಲಿವೆ, ಅದರ ಫಲ ಜಗತ್ತಿನೆಲ್ಲೆಡೆ ವ್ಯಾಪಿಸಿದೆ ಎಂದರು.

ಜಲಸಂಪನ್ಮೂಲ ಇಲಾಖೆಯ ಮುಖ್ಯ ಇಂಜಿನಿಯರ್ ಶ್ರೀ ಗಣೇಶ್‌ರವರು, ಶ್ರಾವಣಮಾಸ ಜೀವನಕ್ಕೆ ಹೊಸಚೈತನ್ಯವನ್ನು ನೀಡುವ ಪವಿತ್ರವಾದ ತಿಂಗಳು. ಪೂಜ್ಯರು ಇಂತಹ ಅನೇಕ ಪವಿತ್ರ ಕಾರ್ಯಗಳನ್ನು ಆಯೋಜಿಸುವ ಮೂಲಕ ಜನರಜೀವನಕ್ಕೆ ಬೆಳಕಾಗಿದ್ದಾರೆ. ಸ್ವತಃ ನನ್ನ ಇಡೀ ಕುಟುಂಬದವರೆಲ್ಲ ಪೂಜ್ಯರ ಆಶೀರ್ವಾದ ಬಲದಿಂದ ಉತ್ತಮ ಶಿಕ್ಷಣವನ್ನು ಪಡೆದು ನೆಮ್ಮದಿಯಜೀವನ ನಡೆಸುತ್ತಿದ್ದೇವೆ ಎಂದರು.

ಶ್ರೀ ವಸಂತಕುಮಾರಯ್ಯ, ಶ್ರೀಮತಿ ಜ್ಯೋತೀಶ್ವರಿ ಓಂಪ್ರಕಾಶ್, ಶ್ರೀ ಕೃಷ್ಣಪ್ಪ ಮತ್ತು ಶ್ರೀಮತಿ ಉಮಾ ನಾಗೇಶ್‌ರವರುಗಳು ಅನಿಸಿಕೆಗಳನ್ನು ಹಂಚಿಕೊಂಡರು. ಪ್ರವಚನ ಆಲಿಸಿ ಉತ್ತಮ ಪ್ರಬಂಧ ರಚಿಸಿದವರಿಗೆ ಬಹುಮಾನ ವಿತರಿಸಲಾಯಿತು. ಶ್ರೀ ಕೆ.ಬಿ. ಸೋಮಶೇಖರಮೂರ್ತಿ, ಡಾ. ಡಿ.ಎಸ್. ವಿನೋದ್, ಶ್ರೀಮತಿ ಕೆ.ಜಿ. ಗಾಯತ್ರಿ ಮತ್ತು ಶ್ರೀ ಆರ್.ಎಸ್. ಪೂರ್ಣಾನಂದ ಕುಟುಂಬದವರು ಸೇವಾರ್ಥ ನೆರವೇರಿಸಿದರು. ಜೆಎಸ್ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಶ್ರೀ ಬಿ. ನಿರಂಜನಮೂರ್ತಿ ಸ್ವಾಗತಿಸಿದರು. ಶ್ರೀ ನಂದೀಶ ದೇವರು ವಂದಿಸಿದರು. ಶ್ರೀ ವೀರಭದ್ರಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಭಕ್ತಾದಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

ಶ್ರೀ ವೀರಭದ್ರಸ್ವಾಮಿ ಜಯಂತ್ಯುತ್ಸವ

ಭಾದ್ರಪದ ಮಾಸದ ಸೆಪ್ಟೆಂಬರ್ 22ರಂದು ಶ್ರೀ ವೀರಭದ್ರಸ್ವಾಮಿ ಜಯಂತೋತ್ಸವವನ್ನು ಸುತ್ತೂರು ಶ್ರೀಕ್ಷೇತ್ರದಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನ (ಗುಡ್ಡ) ಹಾಗೂ ಶ್ರೀಮಠದ ಆವರಣದಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನಗಳಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರಸ್ವಾಮಿಗೆ ಪ್ರಾಕಾರೋತ್ಸವ, ವಿಶೇಷ ಅಲಂಕಾರ, ರಾಜೋಪಚಾರ, ಮಹಾಮಂಗಳಾರತಿ, ವೀರಗಾಸೆ ಕುಣಿತ ಹಾಗೂ ಮಂಗಳವಾದ್ಯಗಳೊಂದಿಗೆ ಜಯಂತ್ಯುತ್ಸವವನ್ನು ನೆರವೇರಿಸಲಾಯಿತು. ಸುತ್ತಮುತ್ತಲಿನ ಗ್ರಾಮಸ್ಥರು, ಭಕ್ತಾದಿಗಳು ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿ ಶ್ರೀ ವೀರಭದ್ರೇಶ್ವರಸ್ವಾಮಿ ಕೃಪೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಲಕ್ಷಾಂತರ ಜನರ ಜೀವನ ಬೆಳಗುತ್ತಿರುವ ಸುತ್ತೂರು ಶ್ರೀಮಠ



ಮೈಸೂರಿನ ರಾಮಕೃಷ್ಣನಗರದ ವಾಸು ಬಡಾವಣೆಯಲ್ಲಿ ನಿರ್ಮಿಸಿರುವ ಜೆಎಸ್‌ಎಸ್ ಹಿರಿಯರ ಮನೆ ಆವರಣದಲ್ಲಿ ಶಿವ ದೇವಾಲಯವನ್ನು ಸುತ್ತೂರು ಮತ್ತು ಶ್ರೀ ಅವಧೂತದತ್ತ ಪೀಠದ ಜಗದ್ಗುರುದ್ವಯರ ದಿವ್ಯ ಸಾನ್ನಿಧ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿದ ಸಂದರ್ಭದಲ್ಲಿ. ಶ್ರೀಮತಿ ಬಬಿತಾ ವಿಜಯಶಂಕರ್, ಶ್ರೀ ಎಲ್. ನಾಗೇಂದ್ರ, ಡಾ. ಸಿ.ಜಿ. ಬೆಟಸೂರಮಠ, ಶ್ರೀಮತಿ ರಾಣಿ ಸತೀಶ್, ಶ್ರೀ ಜಿ.ಟಿ. ದೇವೇಗೌಡ ಹಾಗೂ ಶ್ರೀ ಜಿ. ಮರಿಸ್ವಾಮಿ ಮೊದಲಾದವರುಗಳಿದ್ದಾರೆ. (8 ಸೆಪ್ಟೆಂಬರ್ 2026)

ಸುತ್ತೂರು ಶ್ರೀಮಠವು ಸೇವಾಕಾರ್ಯಗಳ ಮೂಲಕ ಲಕ್ಷಾಂತರ ಜನರ ಜೀವನಕ್ಕೆ ನೆರಳಾಗಿರುವ ಬೃಹತ್ ಆಲದಮರವಾಗಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹೇಳಿದರು.

ಮೈಸೂರಿನ ರಾಮಕೃಷ್ಣನಗರದ ವಾಸು ಬಡಾವಣೆಯಲ್ಲಿ ನಿರ್ಮಿಸಿರುವ ಜೆಎಸ್‌ಎಸ್ ಹಿರಿಯರ ಮನೆ ಹಾಗೂ ಶಿವ ದೇವಾಲಯವನ್ನು ದಿನಾಂಕ 8.9.2026ರಂದು ಅವರು ಉದ್ಘಾಟಿಸಿ ಅವರು ಮಾತನಾಡಿದರು. ಧಾರ್ಮಿಕ, ಆಧ್ಯಾತ್ಮಿಕ ಕಾರ್ಯಗಳ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಶಕ್ತಿಪೀಠ ಸುತ್ತೂರು ಶ್ರೀಮಠ. ರಾಜೇಂದ್ರ ಶ್ರೀಗಳು ಬಿತ್ತಿದ ಬೀಜ ಇಂದು ಹೆಮ್ಮರವಾಗಿ ಬೆಳೆದು ದೇಶವಿದೇಶಗಳಿಗೂ ತನ್ನ ಸೇವಾಕಾರ್ಯವನ್ನು ವಿಸ್ತರಿಸಿದೆ. ಹಿರಿಯ ನಾಗರಿಕರು ಸಮಾಜದ ಆಸ್ತಿ. ಶ್ರೀಮಠ ನಿರ್ಮಿಸಿರುವ ಈ ಹಿರಿಯರ ಮನೆಯು ಅವರಿಗೆ ನೆಮ್ಮದಿ

ನೀಡುವ ಆಶ್ರಯತಾಣವಾಗಲಿದೆ. ಜೀವನದ ಸಂಧ್ಯಾಕಾಲದಲ್ಲಿ ಆರೋಗ್ಯಯುತವಾದ ಜೀವನ ನಡೆಸಲು ಸಹಕಾರಿಯಾಗಲಿದೆ. ಆರ್ಥಿಕವಾಗಿ ಅನುಕೂಲವಿದ್ದವರಿಗೆ ಮಾತ್ರವಲ್ಲದೇ ಬಡವರಿಗೂ ಸಂತೋಷದ ಜೀವನ ಸಾಗಿಸಲು ಪೂಜ್ಯರು ಅವಕಾಶ ಮಾಡಿಕೊಟ್ಟಿದ್ದಾರೆ. ಇಂತಹ ಸಾವಿರಾರು ಸಮಾಜಮುಖಿ ಕಾರ್ಯಗಳ ಮೂಲಕ ಪೂಜ್ಯರು ಒಂದು ಸರ್ಕಾರ ಮಾಡಬೇಕಾದ ಕೆಲಸವನ್ನು ಶ್ರೀಮಠದ ಮೂಲಕ ನಿರಂತರವಾಗಿ ಮಾಡುತ್ತಿದ್ದಾರೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ರಾಜೇಂದ್ರ ಶ್ರೀಗಳು ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸ್ಥಾಪಿಸುವುದರ ಮೂಲಕ ಶ್ರೀಮಠದ ಸೇವಾಕ್ಷೇತ್ರವನ್ನು ವಿಸ್ತರಿಸಿದರು. ವೃದ್ಧಾಶ್ರಮಗಳ ಕುರಿತು ಸಮಾಜದಲ್ಲಿ ನಿರಂತರವಾಗಿ ಪರ–ವಿರೋಧ ಚರ್ಚೆಗಳು ನಡೆಯುತ್ತಲೇ ಇವೆ. ಇನ್ನೊಬ್ಬರ ಆಶ್ರಯವನ್ನು ಬಯಸದೇ ಸ್ವತಂತ್ರವಾಗಿ ಬದುಕಲು ಹಿರಿಯರು ಬಯಸುತ್ತಾರೆ. ಹಿರಿಯರಿಗಾಗಿಯೇ ನಿರ್ಮಿಸಿರುವ ಈ ಕಟ್ಟಡ ಅವರದೇ ಮನೆ ಇದ್ದಂತೆ. ಅದಕ್ಕಾಗಿಯೇ ಇದಕ್ಕೇ "ಹಿರಿಯರ ಮನೆ" ಎಂದು ಕರೆಯಲಾಗಿದೆ. ಉಳ್ಳವರಿಗೂ ಮತ್ತು ಇಲ್ಲದವರಿಗೂ ಇಲ್ಲಿ ಒಂದೇ ರೀತಿಯ ಸೌಲಭ್ಯವಿರುತ್ತದೆ. ವೆಚ್ಚ ಭರಿಸಲು ಸಾಧ್ಯವಾಗದವರಿಗೆ ಉಚಿತವಾದ ಸೌಲಭ್ಯವನ್ನು ನೀಡಲಾಗುತ್ತದೆ. ಮನೆಯಲ್ಲಿರುವ ಎಲ್ಲ ಸೌಕರ್ಯಗಳೂ ಇಲ್ಲಿರುತ್ತವೆ ಎಂದು ತಿಳಿಸಿದರು.

ಶ್ರೀ ಅವಧೂತ ದತ್ತಪೀಠದ ಜಗದ್ಗುರು ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳವರು, ಮಾಧವ ಸೇವೆಗಿಂತಲೂ ಮುಖ್ಯವಾದುದ್ದು ಮಾನವಸೇವೆ. ಶಿಕ್ಷಣ, ಆರೋಗ್ಯ, ಅನ್ನ ದಾಸೋಹಗಳ ಮೂಲಕ ಸುತ್ತೂರು ಶ್ರೀಮಠ ನಾಡಿನ ತುಂಬೆಲ್ಲಾ ತನ್ನ ಸೇವಾಕಾರ್ಯವನ್ನು ವಿಸ್ತರಿಸಿದೆ. ಎಲ್ಲವೂ ಭಗವಂತನ ಇಚ್ಛೆಯಂತೆ ನಡೆಯುತ್ತಿರುತ್ತದೆ. ಹಿರಿಯ ಜೀವಗಳಿಗಾಗಿ ಸುತ್ತೂರು ಶ್ರೀಮಠ ಅದ್ಭುತವಾದ ಕಾರ್ಯವನ್ನು ಮಾಡಿದೆ. ಇದರಿಂದ ಇಳಿವಯಸ್ಸಿನಲ್ಲಿ ಅವರು ಸುಖವಾಗಿ ಜೀವನ ಸಾಗಿಸಬಹುದು. ನಮಗೆ ರಾಜೇಂದ್ರ ಶ್ರೀಗಳೊಂದಿಗೆ ಅನ್ಯೋನ್ಯವಾದ ಸಂಬಂಧವಿತ್ತು ಎಂದು ಸ್ಮರಿಸಿದರು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್‌ರವರು ಸುತ್ತೂರು ಶ್ರೀಮಠದಿಂದ ನಿರ್ಮಿಸಿರುವ ಹಿರಿಯರ ಮನೆಯು ಒಂದು ಮಾದರಿ ಕಾರ್ಯವಾಗಿದೆ. ಇಲ್ಲಿಂಯೇ ಶಿವ ದೇವಾಲಯವನ್ನು ನಿರ್ಮಿಸಿರುವುದು ಔಚಿತ್ಯಪೂರ್ಣವಾಗಿದೆ. ಕಾಶಿಯ ಪರಿಸರ ಇಲ್ಲೇ ನಿರ್ಮಾಣವಾಗಿದೆ ಎಂದರು.

ಕನಕಪುರ ಶ್ರೀ ದೇಗುಲಮಠದ ಡಾ. ಶ್ರೀ ಚನ್ನಬಸವ ಸ್ವಾಮಿಗಳವರು, ಸುತ್ತೂರು ಶ್ರೀಮಠ ಸಮಾಜ ಬಯಸುವ ಎಲ್ಲ ಸೇವೆಗಳನ್ನು ನಿರಂತರವಾಗಿ ಮಾಡುತ್ತಾ ಬರುತ್ತಿದೆ. ಇದಕ್ಕೆಲ್ಲ ರಾಜೇಂದ್ರ ಶ್ರೀಗಳ ಪ್ರೇರಣೆ ಜೊತೆಗೆ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ವಾತ್ಸಲ್ಯಪೂರ್ಣ ಮಮತೆಯುಳ್ಳ ಅಂತಃಕರಣವೂ ಕಾರಣವಾಗಿದೆ ಎಂದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಜಿ.ಟಿ. ದೇವೇಗೌಡರು ಸುತ್ತೂರು ಶ್ರೀಮಠ ಜಾತಿಮತ ಪಂಥಗಳ ಭೇದಮಾಡದೇ ಎಲ್ಲರಿಗೂ ನಿರಂತರವಾದ ಸೇವೆಯನ್ನು ಸಲ್ಲಿಸುತ್ತಿದೆ. ಈ ಹಿರಿಯರ ಮನೆಯು ಪ್ರೀತಿ, ವಿಶ್ವಾಸ ಮತ್ತು ವಾತ್ಸಲ್ಯ ನೀಡುವ ತಾಣವಾಗಲಿದೆ ಎಂದು ತಿಳಿಸಿದರು.

ಮಾಜಿ ಸಚಿವರಾದ ಶ್ರೀಮತಿ ರಾಣಿ ಸತೀಶ್‌ರವರು, ಕೊಡುಗೆ ನೀಡಿರುವವರ ಭಾವಚಿತ್ರಗಳನ್ನು ಅನಾವರಣಗೊಳಿಸಿ ಸುತ್ತೂರು ಶ್ರೀಮಠ ಈ ಹಿರಿಯರ ಮನೆಯು ಅವರ ಬದುಕಿಗೆ ಹೊಸ ಬೆಳಕು ನೆಮ್ಮದಿ ಮತ್ತು ಶಾಂತಿ ನೀಡುವ ತಾಣವಾಗಲಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕೊಡುಗೆ ನೀಡಿದವರಿಗೆ, ಆರ್ಕಿಟೆಕ್ಟ್ ಹಾಗೂ ಗುತ್ತಿಗೆದಾರರುಗಳಿಗೆ ಸನ್ಮಾನಿಸಲಾಯಿತು.

ಡಾ. ಸಿ.ಜಿ. ಬೆಟಸೂರಮಠ ಸ್ವಾಗತಿಸಿದರು. ಶ್ರೀ ಎಸ್.ಪಿ. ಮಂಜುನಾಥ್‌ರವರು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರ ಸಂದೇಶವನ್ನು ವಾಚನ ಮಾಡಿದರು. ಜೆಎಸ್ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಶ್ರೀ ಎಸ್. ಬಸವರಾಜು ವಂದಿಸಿದರು. ಶ್ರೀಮತಿ ಎಂ.ಪಿ. ಪುಷ್ಪಲತ ಕಾರ್ಯಕ್ರಮ ನಿರೂಪಿಸಿದರು. □

ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ



ಸಕಲೇಶಪುರ ತಾಲೂಕಿನ ಬಾಗೆಯ ಜೆಎಸ್ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಕು. ವೈ.ಎಸ್. ಜಿಷ್ಣುರವರು ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ 4ನೇ ಅಥ್ಲೆಟ್ಸ್‌ಚಾಂಪ್ಸ್ ಹಾಗೂ ಹಾಸನ ಜಿಲ್ಲಾ ಅಮೆಚೂರ್ ಅಥ್ಲೆಟಿಕ್ ಅಸೋಸಿಯೇಷನ್ ಸಹಯೋಗದೊಂದಿಗೆ ದಿನಾಂಕ 6.9.2026ರಂದು ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಮಕ್ಕಳ ಕ್ರೀಡಾಕೂಟದ 16 ವರ್ಷದೊಳಗಿನವರ ವಿಭಾಗದ ಉದ್ದಜಿಗಿತ ಸ್ಪರ್ಧೆಯಲ್ಲಿ ಭಾಗವಹಿಸಿ 5.64 ಮೀಟರ್ ದೂರ ಜಿಗಿಯುವ ಮೂಲಕ ದ್ವಿತೀಯ ಸ್ಥಾನವನ್ನು ಪಡೆದುಕೊಂಡು ಬೆಳ್ಳಿ ಪದಕ ಹಾಗೂ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಯ ಸಾಧನೆಗೆ ಶಾಲೆಯ ಪ್ರಾಂಶುಪಾಲರು, ಆಡಳಿತ ಮಂಡಳಿ, ಕ್ರೀಡಾ ತರಬೇತುದಾರರು, ಶಿಕ್ಷಕವೃಂದ ಹಾಗೂ ಸಿಬ್ಬಂದಿ ವರ್ಗದವರು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ವಿದ್ಯಾರ್ಥಿಯ ಕ್ರೀಡಾ ಆಸಕ್ತಿ, ಶ್ರದ್ಧೆ ಮತ್ತು ನಿರಂತರ ಪರಿಶ್ರಮವೇ ಈ ಸಾಧನೆಗೆ ಕಾರಣವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನು ಎತ್ತರಕ್ಕೆ ಬೆಳೆದು ರಾಷ್ಟ್ರ ಮಟ್ಟದಲ್ಲಿಯೂ ಕೀರ್ತಿತರಲಿ ಎಂದು ಹಾರೈಸಿದ್ದಾರೆ.

ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಅತ್ಯುತ್ತಮ ಸಾಧನೆ ಮಾಡಿದ
ಕು. ವೈ.ಎಸ್. ಜಿಷ್ಣುರವರಿಗೆ ಅಭಿನಂದನೆಗಳು.

ಶಿಕ್ಷಣ ಕ್ಷೇತ್ರಕ್ಕೆ ಜೆಎಸ್‌ಎಸ್ ಸಂಸ್ಥೆಗಳ ಕೊಡುಗೆ ಅನನ್ಯ



ಮೈಸೂರಿನ ಹೂಟಗಳ್ಳಿಯಲ್ಲಿ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ನೂತನ ಕಟ್ಟಡ ಹಾಗೂ ಶ್ರೀ ಘನಲಿಂಗ ಶಿವಯೋಗಿ ಸಭಾಭವನದ ಉದ್ಘಾಟನೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಎಸ್. ಮಧು ಬಂಗಾರಪ್ಪನವರು ನೆರವೇರಿಸಿ ಮಾತನಾಡುತ್ತಿರುವುದು. (17 ಸೆಪ್ಟೆಂಬರ್ 2026)

ಶಿಕ್ಷಣ ಕ್ಷೇತ್ರಕ್ಕೆ ಜೆಎಸ್‌ಎಸ್ ಸಂಸ್ಥೆಗಳ ಕೊಡುಗೆ ಅನನ್ಯ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಶ್ರೀ ಎಸ್. ಮಧು ಬಂಗಾರಪ್ಪನವರು ಹೇಳಿದರು.

ಮೈಸೂರಿನ ಹೂಟಗಳ್ಳಿಯಲ್ಲಿ ದಿನಾಂಕ 17.9.2026 ರಂದು ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಹಾಗೂ ಸಭಾಭವನ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು. ನಮ್ಮ ತಂದೆಯವರ ಕಾಲದಿಂದಲೂ ನಮಗೆ ಸುತ್ತೂರು ಮಠದೊಂದಿಗೆ ಅವಿನಾಭಾವ ಸಂಬಂಧವಿದೆ. ಈ ಸಮಾರಂಭದಲ್ಲಿ ಭಾಗವಹಿಸಿರುವುದು ನನ್ನ ಸೌಭಾಗ್ಯ ಎಂದು ಭಾವಿಸುತ್ತೇನೆ. ಸರ್ಕಾರವೇ ಎಲ್ಲರಿಗೂ ಶಿಕ್ಷಣವನ್ನು ನೀಡಲು ಸಾಧ್ಯವಾಗುವುದಿಲ್ಲ. ಈ ಕೆಲಸವನ್ನು ಮಠಮಾನ್ಯಗಳು ಮಾಡುತ್ತಾ ಬರುತ್ತಿವೆ. ಜೆಎಸ್‌ಎಸ್ ಸಂಸ್ಥೆ ಕರ್ನಾಟಕವಲ್ಲದೆ ತಮಿಳುನಾಡು, ನೊಯಿಡಾ, ದೆಹಲಿ, ಜಮ್ಮು ರಾಜ್ಯಗಳಲ್ಲಿ, ಅಲ್ಲದೆ ಮಾರಿಷಸ್, ಅಮೆರಿಕ, ದುಬೈಗಳಲ್ಲೂ ಸಂಸ್ಥೆಗಳನ್ನು ಸ್ಥಾಪಿಸಿ ವಿಶ್ವದಾದ್ಯಂತ ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಅಪಾರ ಸೇವೆಯನ್ನು ಸಲ್ಲಿಸುತ್ತಿದೆ ಎಂದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿ, ಇದೊಂದು ಜ್ಞಾನದೇಗುಲ, ಮನಸ್ಸನ್ನು ವಿಕಾಸ ಮಾಡಿಕೊಳ್ಳುವ ಮಂದಿರ. ಸಂಪಾದಿಸುವ ಜ್ಞಾನವನ್ನು ಯಾರಿಂದಲೂ ಅಪಹರಿಸಲಾಗದು. ಅದಕ್ಕೆ ಯಾವ ಪರಿಧಿಯೂ ಇರುವುದಿಲ್ಲ. ರಾಜೇಂದ್ರ ಶ್ರೀಗಳ ಕೃಪೆಯಿಂದ ಇಂದು ಜೆಎಸ್‌ಎಸ್ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ ಎಂದರು

ಕಂಪ್ಯೂಟರ್ ಲ್ಯಾಬನ್ನು ಉದ್ಘಾಟಿಸಿದ ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ. ವಿವೇಕಾನಂದರವರು ಸುತ್ತೂರು ಮಠವು

ಬಡವರು, ನಿರಾಶ್ರಿತರು ಹಾಗೂ ದೀನದಲಿತರ ಮಕ್ಕಳಿಗೆ ಆಶ್ರಯವನ್ನು ನೀಡಿ ವಿದ್ಯಾವಂತರನ್ನಾಗಿ ಮಾಡುತ್ತಿದೆ. ಲಕ್ಷಾಂತರ ವಿದ್ಯಾರ್ಥಿಗಳು ಜ್ಞಾನಾರ್ಜನೆಯನ್ನು ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸಿ ಬದುಕನ್ನು ರೂಪಿಸಿಕೊಂಡಿದ್ದಾರೆ. ಸೂರ್ಯಚಂದ್ರರಿರುವವರೆಗೂ ಸುತ್ತೂರು ಶ್ರೀಮಠ ಹಾಗೂ ಜೆಎಸ್‌ಎಸ್ ಸಂಸ್ಥೆ ಇರಲೆಂದು ನುಡಿದರು.

ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ.ಎಸ್. ನವೀನ್‌ರವರು ಗ್ರಂಥಾಲಯ ಉದ್ಘಾಟಿಸಿ ಜೆಎಸ್‌ಎಸ್ ಸಂಸ್ಥೆ ಎಂಬುದೇ ಒಂದು ಬ್ರ್ಯಾಂಡ್ ಆಗಿದೆ. ಈ ಸಂಸ್ಥೆಯಲ್ಲಿ ಶಿಕ್ಷಣವನ್ನು ಪೂರೈಸಿದ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಯುತ್ತಾರೆ ಎಂದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಜಿ.ಟಿ. ದೇವೇಗೌಡರವರು ನನ್ನ ಕ್ಷೇತ್ರದಲ್ಲಿ ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಉದ್ಘಾಟನೆಗೊಂಡಿರುವುದು ತುಂಬಾ ಸಂತೋಷವಾಗಿದೆ. ಬಡ ವಿದ್ಯಾರ್ಥಿಗಳಿಗೆ ಸುತ್ತೂರು ಮಠವು ಕಾಮಧೇನುವಾಗಿ ಸಮಾಜಕ್ಕೆ ಸತ್ತ್ವಜೆಗಳನ್ನು ನೀಡುತ್ತಿದೆ. ಶಿಕ್ಷಣವು ಕಟ್ಟ ಕಡೆಯ ವ್ಯಕ್ತಿಗೂ ತಲುಪಬೇಕು ಎಂಬುದು ಜೆಎಸ್‌ಎಸ್ ಸಂಸ್ಥೆಯ ಧ್ಯೇಯವಾಗಿದೆ. ಮೈಸೂರಿನಲ್ಲಿ ಅನೇಕ ಶಾಲೆಗಳ ಕಟ್ಟಡಗಳು ಶಿಥಿಲವಾಗಿವೆ. ಮೂಲಸೌಲಭ್ಯಗಳ ಕೊರತೆಯಿದೆ. ಅವುಗಳ ಜೀರ್ಣೋದ್ಧಾರ ಅಥವಾ ಪುನರ್‌ನಿರ್ಮಾಣ ಕಾರ್ಯವನ್ನು ಸರ್ಕಾರದಿಂದ ಕೂಡಲೇ ಪ್ರಾರಂಭಿಸಬೇಕು ಎದರು.


ಶ್ರೀ ಸಾಲೂರು ಬೃಹನ್ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ದಶಕಗಳ ಹಿಂದೆ ಸಾಕ್ಷರತೆಯ ಪ್ರಮಾಣ ಕಡಿಮೆ ಇತ್ತು. ಆದರೆ ಇಂದು ಶೇ.75 ಸಾಕ್ಷರತೆ ಇದೆ. ಇದರ ಹಿಂದೆ ಮಠಮಾನ್ಯಗಳು ನಡೆಸುವ ಶಿಕ್ಷಣ ಸಂಸ್ಥೆಗಳ ಕೊಡುಗೆಯನ್ನು ಮರೆಯುವಂತಿಲ್ಲ. ಸುತ್ತೂರು ಶ್ರೀಮಠದ ರಾಜೇಂದ್ರ ಶ್ರೀಗಳ ದೂರದರ್ಶಿತ್ವದಿಂದ ಸುತ್ತೂರು ಮಠವು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿದೆ. ವಿದ್ಯಾರ್ಥಿಗಳು ನಿರಂತರ ಶ್ರದ್ಧೆ, ಪರಿಶ್ರಮ ಮತ್ತು ಕಲಿಕೆಯಿಂದ ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಬಹುದು. ಶಿಕ್ಷಣವು ಇಂದಿನ ಜೀವನಕ್ಕೆ ಬಹಳ ಮುಖ್ಯವಾಗಿದೆ ಎಂದು ನುಡಿದರು.

ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳು ವೀರಶೈವ ಲಿಂಗಾಯತ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಕೊಡುಗೆಯನ್ನು ನೀಡುತ್ತಿವೆ. ಶಿಕ್ಷಣದ ಜೊತೆಗೆ ಸಂಸ್ಕೃತಿಯನ್ನೂ ಬೆಳೆಸುತ್ತಿವೆ. ಮಠಗಳು ಅನ್ನ, ಶಿಕ್ಷಣ, ಆಶ್ರಯ, ಆರೋಗ್ಯ ಹಾಗೂ ಅರಿವಿನ ದಾಸೋಹಗಳ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರ ನೀಡಿ ಪ್ರಜ್ಞಾವಂತರನ್ನಾಗಿಸುತ್ತಿವೆ. ಮಠಮಾನ್ಯಗಳು ಸೋಹಂ ಎಂದೆನಿಸದೇ ದಾಸೋಹಂ ಎಂಬ ತತ್ವದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸುತ್ತೂರು ಮಠವು ಲಕ್ಷಾಂತರ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯನ್ನು ನೀಡುತ್ತಿದೆ ಎಂದರು.

ಶಿಕ್ಷಣ ಇಲಾಖೆಯ ಅಧಿಕಾರಿಗಳು, ಹೂಟಗಳ್ಳಿ ನಗರಸಭೆಯ ಅಧಿಕಾರಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿವರ್ಗದವರು, ಪೋಷಕರು, ಬಡಾವಣೆಯ ನಾಗರಿಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಜೆಎಸ್‌ಎಸ್ ಕಲಾ ವೃಂದದ ಕು. ಭಾರತಿ ಮತ್ತು ಕು. ಭಾನುಮತಿ ಪ್ರಾರ್ಥನೆ ಸಲ್ಲಿಸಿದರು. ಶ್ರೀಮತಿ ಎಂ. ದೇವಿಕಾರವರು ಸ್ವಾಗತಿಸಿದರು. ಶ್ರೀ ಎಸ್.ಸಿ. ಚನ್ನಬಸಪ್ಪ ವಂದಿಸಿದರು. ಶ್ರೀ ಎಂ. ವಿಜಯಕುಮಾರ್ ಕಾರ್ಯಕ್ರಮ ನಿರೂಪಿಸಿದರು.

□

ದೇವಾಲಯ ಕಟ್ಟದಿದ್ದರೂ ವಿದ್ಯಾಲಯ ಕಟ್ಟಬೇಕು



ಸುತ್ತೂರು ಶ್ರೀಕ್ಷೇತ್ರಕ್ಕೆ ಆಗಮಿಸಿದ್ದ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದ ಒನ್ ವರ್ಲ್ಡ್ ಒನ್ ಫ್ಯಾಮಿಲಿ ಸಂಸ್ಥಾಪಕರಾದ ಪೂಜ್ಯ ಸದ್ಗುರು ಶ್ರೀ ಮಧುಸೂಧನ ಸಾಯಿಯವರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಆಶೀರ್ವಚನ ನೀಡಿದರು (22 ಸೆಪ್ಟೆಂಬರ್ 2026)

ದೇವಾಲಯ ಕಟ್ಟದಿದ್ದರೂ ಪರವಾಗಿಲ್ಲ ವಿದ್ಯಾಲಯಗಳನ್ನು ಕಟ್ಟಬೇಕು ಎಂದು ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದ ಒನ್ ವರ್ಲ್ಡ್ ಒನ್ ಫ್ಯಾಮಿಲಿ ಸಂಸ್ಥಾಪಕರಾದ ಪೂಜ್ಯ ಸದ್ಗುರು ಶ್ರೀ ಮಧುಸೂಧನ ಸಾಯಿಯವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 22.9.2026ರಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು. ಮಾನವನಾಗಿ ಹುಟ್ಟಿದ ಮೇಲೆ ಸದ್ಗುರುವಿನ ಸಾನ್ನಿಧ್ಯದಿಂದ ಮೋಕ್ಷ ಪಡೆಯುವುದು ಜೀವನದ ಮಹಾಭಾಗ್ಯವಾಗಿದೆ. ಸುತ್ತೂರಿನ ಪರಮಪೂಜ್ಯ ಶ್ರೀಗಳವರು ಮಾತೃ ಹೃದಯಿಗಳು. ಪೂಜ್ಯರ ಆಶೀರ್ವಾದ ಪಡೆದಿರುವ ನೀವುಗಳೇ ಧನ್ಯರು, ಅದನ್ನು ಸಮರ್ಪಕವಾಗಿ ಬಳಸಿಕೊಂಡು ಬದುಕಿನಲ್ಲಿ ಸಾಧನೆಯೆಡೆಗೆ ನಡೆಯಬೇಕು. ಅಲ್ಲಮಪ್ರಭುಗಳು ಹೇಳಿದಂತೆ ದೀಪ, ಬತ್ತಿಯಿದ್ದರೂ, ತೈಲವಿಲ್ಲದೆ ಹಣತೆಯು ಹೇಗೆ ಪ್ರಕಾಶಿಸುವುದಿಲ್ಲವೋ, ಹಾಗೆ ಅಂತರಂಗದ ಭಕ್ತಿ ಜಾಗೃತವಾಗದಿದ್ದರೆ ಸಾಧನೆಯ ಮಾರ್ಗ ಕಠಿಣವಾಗುತ್ತದೆ. ಶ್ರೀಮಠವು ನಾಡಿನ ಸಂಸ್ಕೃತಿ, ಸಾಹಿತ್ಯ ಹಾಗೂ ಆಧ್ಯಾತ್ಮಿಕತೆಯ ಪ್ರಸಾರಕ್ಕಾಗಿ ಶ್ರಮಿಸುತ್ತಿದೆ. ದೇಶದಾದ್ಯಂತ ಹಲವಾರು ಸಂಸ್ಥೆಗಳನ್ನು ತೆರೆದು ಶಿಕ್ಷಣ, ಆರೋಗ್ಯ ಹಾಗೂ ಸಾಮಾಜಿಕ ಸೇವೆಗಳನ್ನು ಒದಗಿಸುತ್ತಿರುವುದು ಪ್ರಶಂಸನೀಯ ಎಂದು ಹೇಳಿದರು.

ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಪರಮಪೂಜ್ಯ ಜಗದ್ಗುರುಗಳವರು ಧಾರ್ಮಿಕ, ಸಾಂಸ್ಕೃತಿಕ ವಿಚಾರಗಳಲ್ಲಿ ನಮ್ಮ ದೇಶವು ಜಗತ್ತಿನಲ್ಲಿಯೇ ಹಿರಿದಾದ ಸ್ಥಾನವನ್ನು ಪಡೆದಿದೆ. ಸಾಧುಸಂತರು, ಋಷಿ ಮುನಿಗಳ ತಪಸ್ಸಿನ ಫಲದಿಂದ ಶಾಂತಿಯ ನೆಲೆಬೀಡಾಗಿದೆ. ಸದ್ಗುರು

ಶ್ರೀ ಮಧುಸೂದನ ಸಾಯಿಯವರ 'ಒಂದೇ ಜಗತ್ತು ಒಂದೇ ಕುಟುಂಬ' ಎನ್ನುವ ಧ್ಯೇಯವಾಕ್ಯವನ್ನು ಅಳವಡಿಸಿಕೊಂಡರೆ ಯುದ್ಧಮುಕ್ತ ಪ್ರಪಂಚವನ್ನು ಕಾಣಬಹುದು. ಜಗತ್ತಿನಲ್ಲಿ ಜನರು ಶಾಂತಿ, ಸೌಹಾರ್ದತೆಯಿಂದ ಬದುಕಬೇಕು. ಈ ನಿಟ್ಟಿನಲ್ಲಿ ಅವರ ಸೇವೆಯು ಅನನ್ಯ. ಆರೋಗ್ಯ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಸಮಾಜಕ್ಕೆ ಅಗತ್ಯವಾದ ಇತರ ಎಲ್ಲ ಕ್ಷೇತ್ರಗಳಿಗೂ ಅವರು ನೀಡುತ್ತಿರುವ ಕೊಡುಗೆಗಳು ಶ್ಲಾಘನೀಯವಾಗಿದೆ ಎಂದು ತಿಳಿಸಿದರು.

ಸುತ್ತೂರಿನ ಉಚಿತ ವಸತಿ ಶಾಲೆಯಲ್ಲಿ ವಿವಿಧ ವಿಷಯಗಳಲ್ಲಿ ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಡಿಸಿಎಕ್ಸ್ ಸಿಸ್ಟಮ್ಸ್ ಲಿಮಿಟೆಡ್‌ನ ಸಂಸ್ಥಾಪಕ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಹೆಚ್.ಎಸ್. ರಾಘವೇಂದ್ರರಾವ್‌ರವರು ನೀಡುವ ಪ್ರತಿಭಾ ಪುರಸ್ಕಾರವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ವಿಶ್ರಾಂತ ಕುಲಪತಿಗಳಾದ ಡಾ. ಜೆ. ಶಶಿಧರ ಪ್ರಸಾದ್, ಸತ್ಯಸಾಯಿ ಸಂಸ್ಥೆಯ ಶ್ರೀ ಗೋವಿಂದ ರೆಡ್ಡಿ, ಶ್ರೀ ಗಿರಿಧರ್ ನಾಯಕ್, ಶ್ರೀ ಜಯರಾಮ್ ರೆಡ್ಡಿ, ಶ್ರೀ ಸುನೀಲ್, ಪತ್ರಕರ್ತರಾದ ಶ್ರೀ ಮೋಹನ್, ಜೆಎಸ್ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ಸತ್ಯಸಾಯಿ ಸಂಸ್ಥೆಯ ಕಾರ್ಯಕರ್ತರುಗಳು, ಸುತ್ತೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ಹಾಗು ಸಾರ್ವಜನಿಕರು ಭಾಗವಹಿಸಿದ್ದರು.

ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಜೆಎಸ್ಎಸ್ ಸಂಸ್ಥೆಗಳ ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಮ.ಗು. ಬಸವಣ್ಣ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪಟ್ಟಿ ಮಂಡಿಸಿದರು.

ಮಾಡುವಲ್ಲಿ ಎನ್ನ ನಾನರಿದು ಮಾಡಿದೆನಾದಡೆ
ನೀಡುವಲ್ಲಿ ಎನ್ನ ನಾನರಿದು ನೀಡಿದೆನಾದಡೆ
ನೀಡುವಲ್ಲಿ ರುಚಿಗೆ ಮನವೆಳೆಸಿ ಹಾರೈಸಿದೆನಾದಡೆ
ನಿಮಗಂದೆ ದ್ರೋಹವಯ್ಯಾ
ಮಾಡುವಲ್ಲಿ ನೀಡುವಲ್ಲಿ ಕೂಡೆ ಶುದ್ಧನಲ್ಲದಿರ್ದಡೆ
ನೀನಂದೆ ಮೂಗ ಕೊಯ್ಯಿ ಕೂಡಲಸಂಗಮದೇವಾ

– ಬಸವಣ್ಣ

ಕುಮಾರಸ್ವಾಮಿ ವಿರಕ್ತಮಠಕೆ ಪಿಹೆಚ್.ಡಿ. ಪದವಿ



ಜೆಎಸ್ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ **ಶ್ರೀ ಕುಮಾರಸ್ವಾಮಿ ವಿರಕ್ತಮಠರವರು** ಪ್ರೊ. ಸಿ.ಕೆ. ಪುಟ್ಟಸ್ವಾಮಿಯವರ ಮಾರ್ಗದರ್ಶನದಲ್ಲಿ 'ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆಗಳಲ್ಲಿ ನವ ಮಾಧ್ಯಮಗಳ ಪಾತ್ರ–ಒಂದು ಅಧ್ಯಯನ' ವಿಷಯ ಕುರಿತು ಸಂಶೋಧನೆ ನಡೆಸಿ ಮಂಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದಲ್ಲಿ ಪಿಎಚ್.ಡಿ. ಪದವಿ ನೀಡಿದೆ. ಶ್ರೀ ಕುಮಾರಸ್ವಾಮಿ ವಿರಕ್ತಮಠ ಮೂಲತಃ ಹಾವೇರಿ ಜಿಲ್ಲೆ ಕಬ್ಬೂರು ಗ್ರಾಮದವರಾಗಿದ್ದಾರೆ.

ಸಾಹಿತ್ಯವು ಮೂಲಭೂತ ಮೌಲ್ಯಗಳ ವಾಹಕವಾಗಿದೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಪ್ರೊ. ಲಿಂಗರಾಜ ಗಾಂಧಿಯವರು ಉದ್ಘಾಟಿಸುತ್ತಿರುವುದು. (1 ಸೆಪ್ಟೆಂಬರ್ 2026)

ಸಾಹಿತ್ಯವು ಮೂಲಭೂತ ಮೌಲ್ಯಗಳ ವಾಹಕವಾಗಿದೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಲಿಂಗರಾಜ ಗಾಂಧಿಯವರು ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಂಗ್ಲ ವಿಭಾಗದ ವತಿಯಿಂದ ದಿನಾಂಕ 1.9.2026ರಂದು ನಡೆದ "ಲ್ಯಾಂಡ್‌ಸ್ಕೇಪ್ ಅಂಡ್ ಎಕಾಲಾಜಿಕಲ್ ಕಾನ್ಸಿಯಿಸ್‌ನೆಸ್ ಇನ್ ನಿವ್ ಲಿಟರೇಚರ್ಸ್" ವಿಷಯ ಕುರಿತ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ತಂತ್ರಜ್ಞಾನ ಯುಗದಲ್ಲಿ ನೈತಿಕ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಪ್ರಸ್ತುತ ಸಂದರ್ಭದಲ್ಲಿ ಮಾನವೀಯ ನೈತಿಕತೆಯನ್ನು ವಿಸ್ತರಿಸುವುದೇ ನಿಜವಾದ ಶಿಕ್ಷಣವಾಗಿದೆ. ಮಾನವನನ್ನು ಪ್ರಕೃತಿಯೊಂದಿಗೆ ನೈಸರ್ಗಿಕವಾಗಿ ಮರು ಸಂಪರ್ಕಿಸುವಲ್ಲಿ ಹೊಸ ಸಾಹಿತ್ಯಗಳು ಪ್ರಧಾನ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಸಿ. ನಾಗಣ್ಣನವರು ತಂತ್ರಜ್ಞಾನವು ಮನುಷ್ಯನ ಮೇಲೆ ಪ್ರಾಬಲ್ಯ ಸಾಧಿಸಲು ಬಿಡದೆ ಅದು ಮಾನವನ ಸೇವೆಗೆ ಪೂರಕವಾಗಿರುವಂತೆ ಪಳಗಿಸಬೇಕು. ಭಾರತವು ಅತ್ಯಂತ ಶ್ರೀಮಂತ ನೈತಿಕ ಪರಂಪರೆಯನ್ನು ಹೊಂದಿದೆ. ಮೌಲ್ಯಗಳನ್ನು ಉಳಿಸಿಕೊಳ್ಳಲು ಪಾಶ್ಚಿಮಾತ್ಯ ಪ್ರಭಾವದಿಂದ ಹೊರಬರಬೇಕಾಗಿದೆ. ಮನುಷ್ಯ ನಿರಂತರವಾಗಿ ಪ್ರಕೃತಿಯ ಮೇಲೆ ದೌರ್ಜನ್ಯ ಎಸಗಿದರೆ ಪ್ರಕೃತಿಯು ವಿಕೋಪಗಳ ಮೂಲಕ ಪಾಠ ಕಲಿಸುತ್ತದೆ. ಲೇಖಕರು ಸಮಾಜದ

ದಾರಿದೀಪಗಳಾಗಿದ್ದು, ಶ್ರೇಷ್ಠ ಸಾಹಿತಿಗಳ ಕೃತಿಗಳು ಸಾರ್ವತ್ರಿಕ ಪ್ರೀತಿ ಮತ್ತು ಸೌಹಾರ್ದತೆಯನ್ನು ಬೋಧಿಸುತ್ತವೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಪ್ರಾಂಶುಪಾಲರಾದ ಡಾ. ರೇಚಣ್ಣ, ಆಂಗ್ಲ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಪಿ. ವಸುಮತಿ ಉಪಸ್ಥಿತರಿದ್ದರು. ಅಧ್ಯಾಪಕರು ಮತ್ತು ಅಧ್ಯಾಪಕೇತರ ವರ್ಗದವರು ಪಾಲ್ಗೊಂಡಿದ್ದರು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಎಂ.ಬಿ. ಲಲಿತಾಂಬ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಕು. ಕೆ.ಎಂ. ಲಿಖಿತ ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಎಂ.ವಿ. ನಿಮಿಷಾಂಬ ಕಾರ್ಯಕ್ರಮ ನಿರೂಪಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಮೂರು ತಾಂತ್ರಿಕ ಗೋಷ್ಠಿಗಳು ನಡೆದವು. ಮೊದಲ ತಾಂತ್ರಿಕ ಗೋಷ್ಠಿಯಲ್ಲಿ ತುಮಕೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಎಚ್. ಕೆ. ಶಿವಲಿಂಗಸ್ವಾಮಿಯವರು 'ರೀಥಿಂಕಿಂಗ್ ಲ್ಯಾಂಡ್ ಆಸ್ ಆನ್ ಎಕಲಾಜಿಲ್ ಕಮ್ಯೂನಿಟಿ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು. ಎರಡನೇ ತಾಂತ್ರಿಕ ಗೋಷ್ಠಿಯಲ್ಲಿ ಮೈಸೂರಿನ ಮಹಾರಾಜ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕರಾದ ಡಾ. ಪಿ. ವೆಂಕಟೇಶ್ವರವರು 'ಲ್ಯಾಂಡ್‌ಸ್ಕೇಪ್ ಆ್ಯಸ್ ಸ್ಕಾಫೋಲ್ಡಿಂಗ್ ಅಂಡ್ ಎಡಿಫೈಸ್ ಇನ್ ಮಾಡ್ರನಿಸ್ಟ್ ಇಂಡಿಯನ್ ಇಂಗ್ಲಿಷ್ ಪೊಯಿಟ್ರಿ' ಎಂಬ ವಿಷಯ ಕುರಿತು ಮಾತನಾಡಿದರು. ಅಂತಿಮ ತಾಂತ್ರಿಕ ಗೋಷ್ಠಿಯಲ್ಲಿ ಹುಣಸೂರಿನ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ಸಹ ಪ್ರಾಧ್ಯಾಪಕರಾದ ಡಾ. ಎ. ಸೌಮ್ಯರವರು "ಫ್ರ್ಯಾಕ್ಚರ್ಡ್ ಲ್ಯಾಂಡ್‌ಸ್ಕೇಪ್ಸ್ ಆಫ್ ವಾರ್ ಇನ್ ಸೌತ್ ಏಷಿಯನ್ ವಾರ್ ಪಿಕ್ಷನ್' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

□

ವಿಜ್ಞಾನ ಸಂಚಾರಿ ವಾಹನಕ್ಕೆ ಚಾಲನೆ

ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ವಿಜ್ಞಾನ ಶಿಕ್ಷಣ ಹಾಗೂ ಪ್ರಾಯೋಗಿಕ ಕಲಿಕೆಯ ಅವಕಾಶಗಳನ್ನು ಒದಗಿಸುವ ಮಹತ್ವದ ಉದ್ದೇಶದೊಂದಿಗೆ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ರೂಪಿಸಿರುವ 'ಜೆಎಸ್ಎಸ್ ಸೈನ್ಸ್ ಆನ್ ವ್ಹೀಲ್ಸ್' ವಿಜ್ಞಾನ ಸಂಚಾರಿ ವಾಹನಕ್ಕೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಚಾಲನೆ ನೀಡಲಾಯಿತು. ಜೆಎಸ್ಎಸ್ ಶಿಕ್ಷಣಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್‌ರವರು ವಾಹನವನ್ನು ಉದ್ಘಾಟಿಸಿ, ಅದರಲ್ಲಿರುವ ವಿವಿಧ ವೈಜ್ಞಾನಿಕ ಮಾದರಿಗಳು, ಪ್ರಯೋಗ ಉಪಕರಣಗಳು ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ವೀಕ್ಷಿಸಿದರು.

ಮೈಸೂರಿನ ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯವರ ಮಾರ್ಗದರ್ಶನ ಹಾಗೂ ಪರಿಣಿತಿಯನ್ನು ಆಧರಿಸಿ ಈ ವಿಜ್ಞಾನ ಸಂಚಾರಿ ಪ್ರಯೋಗಾಲಯವನ್ನು ರೂಪಿಸಲಾಗಿದೆ. ವಿದ್ಯಾರ್ಥಿಗಳಿಗೆ ವಿಜ್ಞಾನವನ್ನು ಕೇವಲ ಪಠ್ಯಪುಸ್ತಕದ ಮೂಲಕ ಕಲಿಸುವ ಬದಲು, ನೇರ ಪ್ರಯೋಗ, ವೀಕ್ಷಣೆ ಮತ್ತು ಅನುಭವದ ಮೂಲಕ ಕಲಿಯುವ ಅವಕಾಶ ಕಲ್ಪಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

ಗ್ರಾಮೀಣ ವಿದ್ಯಾರ್ಥಿಗಳಿಗೆ ವಿಜ್ಞಾನ ಶಿಕ್ಷಣದ ಕಲಿಕೆಗಾಗಿ ಗ್ರಾಮೀಣ ಪ್ರದೇಶಗಳಲ್ಲಿರುವ ಅನೇಕ ಶಾಲೆಗಳಲ್ಲಿ ಆಧುನಿಕ ವಿಜ್ಞಾನ ಪ್ರಯೋಗಾಲಯಗಳು ಹಾಗೂ ವಿವಿಧ ಪ್ರಯೋಗ



ಉಪಕರಣಗಳ ಸೌಲಭ್ಯಗಳು ಸೀಮಿತವಾಗಿರುತ್ತವೆ. ಇಂತಹ ಸಂದರ್ಭದಲ್ಲಿ ವಿಜ್ಞಾನ ಸಂಚಾರಿ ವಾಹನ ಗ್ರಾಮೀಣ ಪ್ರದೇಶಗಳ ಶಾಲೆಗಳ ಬಳಿಗೆ ತೆರಳಿ, ವಿದ್ಯಾರ್ಥಿಗಳಿಗೆ ವಿವಿಧ ವಿಜ್ಞಾನ ಪ್ರಯೋಗಗಳು ಮತ್ತು ಮಾದರಿಗಳನ್ನು ನೇರವಾಗಿ ಪರಿಚಯಿಸಲಿದೆ. ಇದರಿಂದ ನಗರ ಪ್ರದೇಶಗಳ ಮಕ್ಕಳಿಗೆ ದೊರೆಯುವಂತಹ ಪ್ರಾಯೋಗಿಕ ವಿಜ್ಞಾನ ಕಲಿಕೆಯ ಅನುಭವವನ್ನು ಗ್ರಾಮೀಣ ಪ್ರದೇಶದ ಮಕ್ಕಳಿಗೂ ತಮ್ಮದೇ ಪರಿಸರದಲ್ಲಿ ಪಡೆಯಲು ಅವಕಾಶ ದೊರೆಯಲಿದೆ.

ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಇರುವ ಭಯವನ್ನು ನಿವಾರಿಸಿ, ನೋಡಿ, ಪ್ರಯೋಗಿಸಿ ಮತ್ತು ಕಲಿಯಿರಿ ಎಂಬ ಕಲಿಕಾ ವಿಧಾನವನ್ನು ಉತ್ತೇಜಿಸುವುದು ಈ ಯೋಜನೆಯ ಪ್ರಮುಖ ವಿಶೇಷತೆಯಾಗಿದೆ. ಪ್ರಯೋಗದ ಮೂಲಕ ವಿಜ್ಞಾನ ಕಲಿಕೆ ಜೆಎಸ್ಎಸ್ ವಿಜ್ಞಾನ ಸಂಚಾರಿ ವಾಹನವು ವಿದ್ಯಾರ್ಥಿಗಳ ವಯಸ್ಸು ಮತ್ತು ಕಲಿಕಾ ಮಟ್ಟಕ್ಕೆ ಅನುಗುಣವಾಗಿ ವಿವಿಧ ವೈಜ್ಞಾನಿಕ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುವಂಥ ಮಾದರಿಗಳು, ಪ್ರಯೋಗ ಉಪಕರಣಗಳು ಹಾಗೂ ಪ್ರದರ್ಶನ ಸಾಮಗ್ರಿಗಳನ್ನು ಅಳವಡಿಸಲಾಗಿದೆ. ಈ ಸೇವೆಯನ್ನು ಬಯಸುವವರು ಮೊಬೈಲ್ಸಂಖ್ಯೆ: 8618979650 ಸಂಪರ್ಕಿಸಬಹುದು.

ಮಾಸಿಕ ಸಾಮೂಹಿಕ ವಿವಾಹ 2026

ಸುತ್ತೂರು ಶ್ರೀಕ್ಷೇತ್ರ

ನವೆಂಬರ್ 19 ಗುರುವಾರ





ವಿವರಗಳಿಗೆ ಸಂಪರ್ಕಿಸಿ :
ಆಡಳಿತಾಧಿಕಾರಿಗಳು
ಜೆಎಸ್ಎಸ್ ಸಂಸ್ಥೆಗಳು, ಸುತ್ತೂರು
ದೂರವಾಣಿ : 08221–232223, 232224

ವಿಶ್ವ ತೆಂಗು ದಿನಾಚರಣೆ



ಸುತ್ತೂರಿನ ಐಸಿಎಆರ್–ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮೈಸೂರಿನ ಕೃಷಿ ತಂತ್ರಜ್ಞರ ಸಂಸ್ಥೆ ಹಾಗೂ ಕೆನ್ಯಾಳು ಶೋಭಿತ ನಂಜೇಗೌಡ ಫಾರ್ಮ್‌ಗಳ ಸಹಯೋಗದಲ್ಲಿ 'ತೆಂಗು ಆಧಾರಿತ ಸಮಗ್ರ ಕೃಷಿ : ಅಂತರ ಬೆಳೆಗಳಿಂದ ಮೌಲ್ಯವರ್ಧನೆಯವರೆಗೆ' ಕಾರ್ಯಕ್ರಮವನ್ನು ದಿನಾಂಕ 2.9.2026ರಂದು ಆಯೋಜಿಸಲಾಗಿತ್ತು.

ಮೈಸೂರಿನ ತೋಟಗಾರಿಕಾ ಮಹಾವಿದ್ಯಾಲಯದ ಡೀನ್ ಡಾ. ಹಂಚಿನಮನಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ, ತೆಂಗು ವಿಶ್ವದ ಪ್ರಮುಖ ತೋಟಗಾರಿಕಾ ಬೆಳೆಗಳಲ್ಲಿ ಒಂದಾಗಿದ್ದು, ಕರ್ನಾಟಕದಲ್ಲಿ ಪ್ರಮುಖ ಆರ್ಥಿಕ ಬೆಳೆಯಾಗಿದೆ. ತೆಂಗು ಕೇವಲ ರೈತರಿಗೆ ಆದಾಯ ನೀಡುವ ಬೆಳೆಯಷ್ಟೇ ಅಲ್ಲದೆ, ಮಾನವನ ದೇಹಕ್ಕೆ ಅಗತ್ಯವಾದ ಪೌಷ್ಟಿಕಾಂಶಗಳನ್ನು ಒದಗಿಸುವ ಪ್ರಮುಖ ಆಹಾರದ ಮೂಲವಾಗಿದೆ. ತೆಂಗಿನ ವಿವಿಧ ಉತ್ಪನ್ನಗಳು ಆಹಾರ, ಇಂಧನ ಹಾಗೂ ಜೀವನೋಪಾಯದ ಭದ್ರತೆಗೆ ಮಹತ್ವದ ಕೊಡುಗೆ ನೀಡುತ್ತಿವೆ. ತೆಂಗಿನಲ್ಲಿ ವೈಜ್ಞಾನಿಕ ನಿರ್ವಹಣೆ ಹಾಗೂ ಮೌಲ್ಯವರ್ಧನೆಯ ಮೂಲಕ ರೈತರು ನಿರಂತರ ಆದಾಯ ಗಳಿಸಬೇಕು. ಪ್ರಸ್ತುತ ಹವಾಮಾನ ಬದಲಾವಣೆ, ಮಳೆಯ ಅನಿಶ್ಚಿತತೆ ಮತ್ತು ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತೆಂಗಿನ ತೋಟಗಳ ಉತ್ಪಾದಕತೆ ಹಾಗೂ ರೈತರ ಆದಾಯವನ್ನು ಸ್ಥಿರಗೊಳಿಸುವುದು ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ತೆಂಗಿನ ತೋಟಗಳಲ್ಲಿ ಅಂತರಬೆಳೆ ಪದ್ಧತಿ ಮತ್ತು ಮೌಲ್ಯವರ್ಧನೆ ಪ್ರಮುಖ ಪಾತ್ರ ವಹಿಸುತ್ತವೆ ಎಂದು ತಿಳಿಸಿದರು.

ತೆಂಗಿನ ತೋಟಗಳಲ್ಲಿ ಬಾಳೆ, ಕೋಕೋ, ತರಕಾರಿ, ಸಾಂಬಾರ ಬೆಳೆಗಳು, ಹೂವಿನ ಬೆಳೆಗಳು ಸೇರಿದಂತೆ ವಿವಿಧ ಅಂತರ ಬೆಳೆಗಳನ್ನು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಬೆಳೆಸಬಹುದು. ಇದರಿಂದ ಭೂಮಿ, ನೀರು ಮತ್ತು ಬೆಳಕಿನ

ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ರೈತರು ಹೆಚ್ಚುವರಿ ಆದಾಯ ಗಳಿಸುವ ಅವಕಾಶ ಪಡೆಯಬಹುದು. ತೆಂಗಿನಕಾಯಿಯನ್ನು ಕೇವಲ ಕಚ್ಚಾ ಉತ್ಪನ್ನವಾಗಿ ಮಾರಾಟ ಮಾಡುವ ಬದಲು, ತೆಂಗಿನೆಣ್ಣೆ, ಚಿಪ್ಸ್ ಹಾಗೂ ಇತರೆ ಮೌಲ್ಯವರ್ಧಿತ ಉತ್ಪನ್ನಗಳಾಗಿ ಸಂಸ್ಕರಿಸಿ ಮಾರುಕಟ್ಟೆ ಮಾಡುವುದರಿಂದ ರೈತರಿಗೆ ಹೆಚ್ಚಿನ ಆದಾಯ ದೊರೆಯುತ್ತದೆ. ಆದ್ದರಿಂದ ತೆಂಗಿನ ಉತ್ಪಾದನೆಯೊಂದಿಗೆ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಸಂಪರ್ಕಕ್ಕೂ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಬಿ.ಎನ್. ಜ್ಞಾನೇಶ್‌ರವರು, ರೈತರು ತಮ್ಮ ತೆಂಗಿನ ತೋಟದಲ್ಲಿರುವ ನೀರಿನ ಲಭ್ಯತೆಯನ್ನು ಮೊದಲು ಗಮನಿಸಬೇಕು, ವಿಶೇಷವಾಗಿ ತೆಂಗಿನ ತೋಟದ ಆರಂಭಿಕ ಹಂತದಲ್ಲಿ ಉತ್ತಮ ನಿರ್ವಹಣೆ ಅತ್ಯಂತ ಮುಖ್ಯವಾಗಿದ್ದು, ಸಮರ್ಪಕ ನೀರಾವರಿ, ಪೋಷಕಾಂಶ ನಿರ್ವಹಣೆ, ಕಳೆ ನಿಯಂತ್ರಣ ಮತ್ತು ಕೀಟ–ರೋಗ ನಿರ್ವಹಣೆಗೆ ಆದ್ಯತೆ ನೀಡಬೇಕು. ಆರಂಭಿಕ ವರ್ಷಗಳಲ್ಲಿ ಉತ್ತಮ ನಿರ್ವಹಣೆ ಮಾಡಿದರೆ ಮುಂದಿನ ಹಂತದಲ್ಲಿ ತೆಂಗಿನ ಗಿಡಗಳು ಉತ್ತಮ ಬೆಳವಣಿಗೆ ಹೊಂದಿ ಉತ್ತಮ ಇಳುವರಿ ಹಾಗೂ ನಿರಂತರ ಆದಾಯ ನೀಡುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಸಿದ್ದಪ್ಪನವರು "ತೆಂಗು ಆಧಾರಿತ ಅಂತರಬೆಳೆ ಹಾಗೂ ತೆಂಗಿನಲ್ಲಿ ಸಮಗ್ರ ಬೆಳೆ ನಿರ್ವಹಣೆ" ಕುರಿತು ರೈತರಿಗೆ ತಾಂತ್ರಿಕ ಮಾಹಿತಿ ನೀಡಿದರು. ತುಮಕೂರು ನಿಸರ್ಗ ನ್ಯಾಚುರಲ್ಸ್‌ನ ಶ್ರೀ ನಾಗೇಶ್ ಬಾಬುರವರು ತೆಂಗಿನ ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ಮಾರುಕಟ್ಟೆ ಕುರಿತು ಪ್ರಾಯೋಗಿಕ ತರಬೇತಿ ನೀಡಿದರು. ತೆಂಗಿನೆಣ್ಣೆ, ಚಿಪ್ಸ್ ಹಾಗೂ ಇತರೆ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ, ಸಂಸ್ಕರಣೆ, ಮಾರುಕಟ್ಟೆ ಅವಕಾಶಗಳು ಮತ್ತು ಹೆಚ್ಚುವರಿ ಆದಾಯದ ಕುರಿತು ವಿವರಿಸಿದರು. ಡಾ. ರಾಮೇಗೌಡರವರು ತೆಂಗಿನಲ್ಲಿ ಕಂಡುಬರುವ ಪ್ರಮುಖ ಕೀಟಗಳು ಹಾಗೂ ಅವುಗಳ ಸಮಗ್ರ ನಿರ್ವಹಣೆಯ ಕುರಿತು, ನಂಜೇಗೌಡ ಫಾರ್ಮ್‌ನ ಶ್ರೀ ಚಂದ್ರಶೇಖರ್‌ರವರು ತೆಂಗಿನ ಸಸಿಗಳ ಲಭ್ಯತೆ ಹಾಗೂ ನರ್ಸರಿ ನಿರ್ವಹಣಾ ತಂತ್ರಜ್ಞಾನಗಳ ಕುರಿತು ರೈತರಿಗೆ ಮಾಹಿತಿ ನೀಡಿದರು.

ರೈತ–ವಿಜ್ಞಾನಿ ಸಂವಾದದಲ್ಲಿ ಡಾ. ರವೀಂದ್ರ, ಡಾ. ಜಿ.ಎಂ. ವಿನಯ್, ಡಾ. ವೈ.ಪಿ. ಪ್ರಸಾದ್, ಡಾ. ದೀಪಕ್, ಶ್ರೀಮತಿ ಎಚ್.ವಿ. ದಿವ್ಯಾ ಹಾಗೂ ಶ್ರೀ ಶಾಮರಾಜ್ ಸೇರಿದಂತೆ ಕೆವಿಕೆಯ ವಿಜ್ಞಾನಿಗಳು ಭಾಗವಹಿಸಿ ರೈತರ ವಿವಿಧ ಪ್ರಶ್ನೆಗಳಿಗೆ ತಾಂತ್ರಿಕ ಸಲಹೆಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಕೃಷಿ ತಂತ್ರಜ್ಞರ ಸಂಸ್ಥೆಯ ಸದಸ್ಯರು, ಕೆವಿಕೆ ಸಿಬ್ಬಂದಿ ಹಾಗೂ ತೆಂಗು ಬೆಳೆಗಾರರು ಸೇರಿದಂತೆ 120ಕ್ಕೂ ಹೆಚ್ಚು ರೈತರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.

□

ವಿಶೇಷಚೇತನರಿಗೆ ಕೃಷಿ ಆಧಾರಿತ ತರಬೇತಿ ಹಾಗೂ ವಿಶ್ವ ರೇಬಿಸ್ ದಿನಾಚರಣೆ

ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹೆಚ್.ಡಿ. ಕೋಟೆ ತಾಲ್ಲೂಕಿನ ಕೆಂಚನಹಳ್ಳಿಯ ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್, ಎಸ್‌ಬಿಐ ಹಾಗೂ ನಯಾರ ಸಂಸ್ಥೆಯ ಸಹಯೋಗದೊಂದಿಗೆ ಮೈಸೂರು ಜಿಲ್ಲೆಯ ವಿಶೇಷ ಚೇತನರಿಗೆ ದಿನಾಂಕ 28.9.2026 ರಿಂದ 1.10.2026ರವರೆಗೆ 4 ದಿನಗಳ ಕೃಷಿ ಆಧಾರಿತ ತರಬೇತಿಯನ್ನು ಹಾಗೂ ವಿಶ್ವ ರೇಬಿಸ್ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.



ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್‌ನ ನಿರ್ದೇಶಕರಾದ ಶ್ರೀ ಕೆ.ಆರ್. ಶಂಕರ್‌ರವರು, ಸಾಮಾನ್ಯವಾಗಿ ಗಾಮೀಣ ಜನರಿಗೆ ಪಶು ಸಂಗೋಪನೆ, ಕೋಳಿ–ಕುರಿ ಸಾಕಾಣಿಕೆ ಪರಿಚಯವಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಪಶು ಸಂಗೋಪನೆ ಹಾಗೂ ಇನ್ನಿತರೆ ಕೃಷಿ ವಲಯದಲ್ಲಿ ಆಗಿರುವ ಆವಿಷ್ಕಾರಗಳನ್ನು ಪರಿಚಯ ಮಾಡಿಕೊಳ್ಳುವುದಕ್ಕೆ ಈ ತರಬೇತಿಯನ್ನು ಆಯೋಜಿಸಲಾಗಿದೆ. ಈ ತರಬೇತಿಯನ್ನು ಪಡೆದವರು ತಮ್ಮ ಸುತ್ತಮುತ್ತಲಿನ ಗ್ರಾಮಗಳಲ್ಲಿ ಟೆಕ್ನೋ ಏಜೆಂಟ್‌ಗಳಾಗಿ ಕಾರ್ಯನಿರ್ವಹಿಸಬೇಕೆಂದರು.

ಸಿಎಫ್‌ಟಿಆರ್‌ಐನ ವಿಜ್ಞಾನಿಗಳಾದ ಡಾ. ರಮೇಶ್‌ರವರು, ವಿಶೇಷಚೇತನರು ಯಾವುದಾದರೂ ಸಾಧನೆಯನ್ನು ಮಾಡಬೇಕೆಂಬ ಛಲದಿಂದ ಕೆಲಸವನ್ನು ಕೈಗೊಂಡರೆ, ನೂರಾರು ದಾರಿಗಳು ಕಾಣ ಸಿಗುತ್ತದೆ. ಕೃಷಿ, ಪಶು ಸಂಗೋಪನೆ ಜೊತೆಗೆ ಮೌಲ್ಯವರ್ಧನೆಯನ್ನು ತಮ್ಮ ವೃತ್ತಿಯಲ್ಲಿ ಅಳವಡಿಸಿಕೊಂಡರೆ ಹೆಚ್ಚಿನ ಲಾಭ ಗಳಿಸಬಹುದೆಂದು ಹೇಳಿದರು.

ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಬಿ.ಎನ್. ಜ್ಞಾನೇಶ್‌ರವರು ನಮ್ಮ ಸಂಸ್ಥೆಯಲ್ಲಿ ಪ್ರಪ್ರಥಮ ಬಾರಿಗೆ ವಿಶೇಷ ಚೇತನರಿಗೆ ಪಶು ಸಂಗೋಪನೆ ಹಾಗೂ ತೋಟಗಾರಿಕೆ ತರಬೇತಿಯನ್ನು ಹಮ್ಮಿಕೊಂಡಿರುವುದು ಸಂತಸ ತಂದಿದೆ ಎಂದರು.

ಇದೇ ಸಂದರ್ಭದಲ್ಲಿ ನಗರ್ಲೆ ಪಶು ಇಲಾಖೆಯ ಹಿರಿಯ ಪಶುವೈದ್ಯಾಧಿಕಾರಿಗಳಾದ ಡಾ. ವಿಜೇತ್‌ರವರು ವಿಶ್ವ ರೇಬಿಸ್ ದಿನಾಚರಣೆ ಅಂಗವಾಗಿ ಮಾತನಾಡಿ, ರೇಬಿಸ್ ರೋಗದ ಬಗ್ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಹಾಗೂ ತಡೆಗಟ್ಟುವ ಬಗ್ಗೆ ಮಾಹಿತಿ ನೀಡಿದರು.

ಶ್ರೀ ಎನ್. ಮಹೇಂದ್ರರವರು ಸ್ವಾಗತಿಸಿದರು. ಶ್ರೀ ಎಂ.ಜಿ. ರಮೇಶ್‌ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಎಂ.ಪಿ. ರಮೇಶ್‌ರವರು ಕಾರ್ಯಕ್ರಮ ನಿರೂಪಿಸಿದರು. ಕು. ಕವಿತಾ ವಂದಿಸಿದರು. ಡಾ. ಅಕ್ಷತಾ, ಡಾ. ಯು.ಎಂ. ರಕ್ಷಿತ್‌ರಾಜ್‌ರವರು ಉಪಸ್ಥಿತರಿದ್ದರು. ತರಬೇತಿ ಕಾರ್ಯಕ್ರಮದಲ್ಲಿ 35ಕ್ಕೂ ಹೆಚ್ಚು ವಿಶೇಷ ಚೇತನರು ಭಾಗವಹಿಸಿದ್ದರು.

□

ಆಲ್ಝೈಮರ್ಸ್ ಬೇಗನೆ ಗುರುತಿಸಿ ತಜ್ಞರ ಸಲಹೆ ಪಡೆಯಬೇಕು



'ಮರೆವು ಕೇವಲ ವಯಸ್ಸಿನ ಸಹಜ ಲಕ್ಷಣವಲ್ಲ, ಆರಂಭದಲ್ಲೇ ಆಲ್ಝೈಮರ್ಸ್ ಗುರುತಿಸಿ, ತಜ್ಞರ ಸಲಹೆ ಪಡೆಯಿರಿ' ಎಂದು ಮೈಸೂರಿನ ಶಾರದಾವಿಲಾಸ ಕಾಲೇಜ್ ಆಫ್ ಫಾರ್ಮಸಿಯ ಪ್ರಾಂಶುಪಾಲರು ಹಾಗೂ ಆಲ್ಝೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾದ ಮೈಸೂರು ಚಾಪ್ಟರ್‌ನ ಅಧ್ಯಕ್ಷರಾದ ಡಾ. ಹನುಮಂತಾಚಾರ್ ಜೋಶಿಯವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದಿನಾಂಕ 8.9.2026ರಂದು ಆಯೋಜಿಸಿದ್ದ ವಿಶ್ವ ಆಲ್ಝೈಮರ್ಸ್ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮರೆವು ಹಾಗೂ ಜ್ಞಾಪಕಶಕ್ತಿ ಕುಸಿತವು ಹಿರಿಯರ ದೈನಂದಿನ ಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ವ್ಯಕ್ತಿಗೆ ಇರುವಿಕೆಯೇ ನೆನಪಿಲ್ಲದಂತಹ ಸ್ಥಿತಿ ಎದುರಾದರೆ ಜೀವನ ಕಷ್ಟಕರವಾಗುತ್ತದೆ. ಭಾರತದಲ್ಲಿ ಆಲ್ಝೈಮರ್ಸ್ (ಮರೆವಿನ ಕಾಯಿಲೆ) ಪ್ರಕರಣಗಳು ವೇಗವಾಗಿ ಹೆಚ್ಚುತ್ತಿವೆ. ಇತ್ತೀಚಿನ ರಾಷ್ಟ್ರೀಯ ಮತ್ತು ವೈದ್ಯಕೀಯ ವರದಿಗಳ ಪ್ರಕಾರ, 60 ವರ್ಷ ಮೇಲ್ಪಟ್ಟ ಸುಮಾರು 88 ಲಕ್ಷ ಜನರು ಡಿಮೆನ್ಶಿಯಾ ಅಥವಾ ಆಲ್ಝೈಮರ್ಸ್‌ನಿಂದ ಬಳಲುತ್ತಿದ್ದಾರೆ. ಆದ್ದರಿಂದ ಈ ಖಾಯಿಲೆಯ ಬಗ್ಗೆ ಅರಿವು ಮೂಡಿಸುವುದು ಮತ್ತು ಆರಂಭಿಕ ಚಿಕಿತ್ಸೆ ನೀಡುವುದು ಮುಖ್ಯ ಎಂದು ನುಡಿದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಈ ದಿನದ ಉದ್ದೇಶ ಆಲ್ಝೈಮರ್ಸ್ ಬಗ್ಗೆ ಅರಿವು ಮೂಡಿಸುವುದು. ಸಾಮಾನ್ಯವಾಗಿ ವಯಸ್ಸಾದಂತೆ ಸಣ್ಣಪುಟ್ಟ ವಿಷಯಗಳನ್ನು ಮರೆಯುವುದು ಸ್ವಾಭಾವಿಕ. ಉದಾಹರಣೆಗೆ ಹೋದ ಜಾಗದ ಹೆಸರು ತಕ್ಷಣ ನೆನಪಾಗದಿರುವುದು, ಅಥವಾ ಲೆಕ್ಕಾಚಾರ ಮಾಡುವಾಗ ಸಣ್ಣಪುಟ್ಟ ತಪ್ಪುಗಳಾಗುವುದು ವಯೋಸಹಜ ಮರೆವಿನ ಲಕ್ಷಣಗಳಾಗಿವೆ. ಆದರೆ ನೆನಪಿನ ಶಕ್ತಿ ಹಂತಹಂತವಾಗಿ ಕ್ಷೀಣಿಸುತ್ತಾ ಹೋಗುವುದು ಆಲ್ಝೈಮರ್ಸ್ ಕಾಯಿಲೆಯ ಮುನ್ಸೂಚನೆಯಾಗಿರುತ್ತದೆ. ಆದ್ದರಿಂದ ಈ ಸಮಸ್ಯೆಯನ್ನು

ಆರಂಭಿಕ ಹಂತದಲ್ಲೇ ಗುರುತಿಸಿ ಇದನ್ನು ಪತ್ತೆಹಚ್ಚುವುದರಿಂದ ರೋಗದ ತೀವ್ರತೆಯನ್ನು ಕಡಿಮೆ ಮಾಡಲು ಮತ್ತು ರೋಗಿಯ ಜೀವನದ ಗುಣಮಟ್ಟವನ್ನು ಉತ್ತಮಗೊಳಿಸಲು ಸಾಧ್ಯವಾಗುತ್ತದೆ ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ಮನೋವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಕಿಶೋರ್‌ರವರು, ವಿನಾಕಾರಣ ಭಯ ಪಡುವುದು, ಆತಂಕ, ಖಿನ್ನತೆ ಅಥವಾ ಬೇಗನೆ ಕೋಪಗೊಳ್ಳುವುದು ಆಲ್ಝೈಮರ್ಸ್ ಲಕ್ಷಣವಾಗಿದೆ. ಇದನ್ನು ನಿರ್ಲಕ್ಷ ಮಾಡದೆ ವೈದ್ಯರನ್ನು ಭೇಟಿ ಮಾಡಿ ಸೂಕ್ತ ಚಿಕಿತ್ಸೆ ಮತ್ತು ಸಮಾಲೋಚನೆ ಪಡೆಯಿರಿ ಎಂದರು.

ನರವಿಜ್ಞಾನ ವಿಭಾಗದ ವೈದ್ಯರಾದ ಡಾ. ಪಿ. ಶಾಸ್ತಾರರವರು, ಆಲ್ಝೈಮರ್ಸ್ ಹೆಚ್ಚಾದಂತೆ ರೋಗಿಗಳಲ್ಲಿ ಖಿನ್ನತೆ, ಆತಂಕ, ನಿದ್ರಾಹೀನತೆ ಮತ್ತು ಕಿರಿಕಿರಿ ಅಥವಾ ಆಕ್ರೋಶದಂತಹ ನಡವಳಿಕೆಯ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಇವುಗಳನ್ನು ನಿಯಂತ್ರಿಸಿ ಸೂಕ್ತ ಚಿಕಿತ್ಸೆ ನೀಡಲು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನರವಿಜ್ಞಾನ ವಿಭಾಗ, ವೃದ್ಧಾರೋಗ ವಿಭಾಗ ಮತ್ತು ಮನೋವಿಜ್ಞಾನ ವಿಭಾಗಗಳಲ್ಲಿ ನುರಿತ ವೈದ್ಯರುಗಳು ಒಂದೇ ಕಡೆ ಲಭ್ಯವಿದ್ದು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವೃದ್ಧಾರೋಗ್ಯ ವಿಭಾಗದ ಮುಖ್ಯಸ್ಥರಾದ ಡಾ. ಪ್ರತಿಭಾ ಪೆರೇರಾ ಹಾಗೂ ವೈದ್ಯರುಗಳಾದ ಡಾ. ತೇಜಸ್ವಿನಿ, ಡಾ. ಶಿಲ್ಪಾ ಅವರೇಬೀಳ, ಡಾ. ಕ್ಷಮಾ ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ರ‍್ಯಾಗಿಂಗ್‌ನಿಂದ ದೂರವಿರದಿದ್ದರೆ ಭವಿಷ್ಯ ಹಾಳಾಗುತ್ತದೆ

ರ‍್ಯಾಗಿಂಗ್ ಒಂದು ಪಿಡುಗಾಗಿದ್ದು ಅದರಿಂದ ದೂರವಿರಬೇಕು, ಇಲ್ಲವಾದಲ್ಲಿ ಕಾಲೇಜಿನಲ್ಲಿ ಓದುವ ವಾತಾವರಣವೇ ಹಾಳಾಗುತ್ತದೆ. ಭವಿಷ್ಯದಲ್ಲಿ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಎಂದು ವಕೀಲರಾದ ಶ್ರೀ ಬಿ.ಜಿ. ಪ್ರಸಾದ್‌ರವರು ಹೇಳಿದರು.

ಮೈಸೂರು ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 19.9.2026ರಂದು ನಡೆದ 'ರ‍್ಯಾಗಿಂಗ್ ವಿರೋಧಿ ಕ್ರಮಗಳು, ಸುರಕ್ಷಿತ ಕ್ಯಾಂಪಸ್ ಸಂಸ್ಕೃತಿ, ಮಾನಸಿಕ ಆರೋಗ್ಯ ಮತ್ತು ವಿದ್ಯಾರ್ಥಿಗಳ ಜವಾಬ್ದಾರಿಗಳು' ಎಂಬ ವಿಷಯ ಕುರಿತು ಅವರು ಮಾತನಾಡುತ್ತಾ ತಿಳಿಸಿದರು. ವಿದ್ಯಾರ್ಥಿಗಳು ರ‍್ಯಾಗಿಂಗ್‌ನಿಂದ ದೂರವಿರಬೇಕು. ಅರಿತೋ ಅರಿಯದೆಯೋ ಅದರಲ್ಲಿ ತೊಡಗಿದರೆ ವಿದ್ಯಾರ್ಥಿಗಳ ಪ್ರವೇಶಾತಿ ರದ್ದಾಗುತ್ತದೆ. ಸರ್ಕಾರಿ ಮತ್ತು ಅರೆ ಸರ್ಕಾರಿ ಕೆಲಸದಿಂದ ದೂರವಿರಿಸಲಾಗುತ್ತದೆ. ವಿದೇಶಗಳಿಗೂ ಕೂಡ ಹೋಗಲು ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಕಾನೂನಿನ ಅರಿವಿರಬೇಕು. ವಿದ್ಯಾರ್ಥಿಯ ಭವಿಷ್ಯ ಹಾಳಾಗಲು ಕಾರಣವಾಗುತ್ತದೆ. ಇದು ಸಮಾಜದ ಮೇಲೂ ದುಷ್ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮನೋವೈದ್ಯರಾದ ಡಾ. ಪಿ.ಸಿ. ಪ್ರದೀಪ್‌ಕುಮಾರ್, ಪ್ರಸ್ತುತ ಯುವ ಪೀಳಿಗೆ ಮಾನಸಿಕ ಒತ್ತಡದ ಕಾರಣದಿಂದಾಗಿ ದುಡುಕಿನ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೆ ಧೂಮಪಾನ, ಮದ್ಯಪಾನ ಹಾಗೂ ಇತರೆ ದುಶ್ಚಟಗಳಿಗೆ ಗುರಿಯಾಗುತ್ತಿದ್ದಾರೆ. ಇದು ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ. ಇಂದು ಶೇಕಡ 15 ರಿಂದ 20 ರಷ್ಟು ವಿದ್ಯಾರ್ಥಿಗಳು ಚಟಗಳಿಗೆ ಗುರಿಯಾಗಿ ತಮ್ಮ



ಮೈಸೂರು ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ 'ರ್ಯಾಗಿಂಗ್ ವಿರೋಧಿ ಕ್ರಮಗಳು, ಸುರಕ್ಷಿತ ಕ್ಯಾಂಪಸ್ ಸಂಸ್ಕೃತಿ, ಮಾನಸಿಕ ಆರೋಗ್ಯ ಮತ್ತು ವಿದ್ಯಾರ್ಥಿಗಳ ಜವಾಬ್ದಾರಿಗಳು' ಎಂಬ ವಿಷಯ ಕುರಿತ ಕಾರ್ಯಕ್ರಮವನ್ನು ಡಾ. ಪಿ.ಸಿ. ಪ್ರದೀಪ್‌ಕುಮಾರ್‌ರವರು ಉದ್ಘಾಟಿಸುತ್ತಿರುವುದು. (19 ಸೆಪ್ಟೆಂಬರ್ 2026)

ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಗೂ ಒತ್ತಡವಿರುತ್ತದೆ. ಮನುಷ್ಯ ಇದರಿಂದ ಹೊರತಲ್ಲ. ಯುವ ಪೀಳಿಗೆಗೆ ಇದರ ಅರಿವಿರಬೇಕು. ಕಾಲೇಜಿನ ಆವರಣದಲ್ಲಿ ಶಿಸ್ತನ್ನು ಪಾಲಿಸಬೇಕು. ಬದುಕಿನಲ್ಲಿ ಬರುವ ಎಲ್ಲಾ ಸಮಸ್ಯೆ ಮತ್ತು ಸನ್ನಿವೇಶಗಳನ್ನು ಧೈರ್ಯವಾಗಿ ಎದುರಿಸುವ ಸಾಮರ್ಥ್ಯವನ್ನು ಹೊಂದಬೇಕು. ಮಾನಸಿಕ ಒತ್ತಡಕ್ಕೆ ಕಾರಣವಾಗುವ ವಿಷಯಗಳಿಂದ ದೂರವಿರಬೇಕು ಎಂದು ತಿಳಿಸಿದರು.

ಪ್ರಾಚಾರ್ಯರಾದ ಪ್ರೊ. ಬಿ.ವಿ ಸಾಂಬಶಿವಯ್ಯನವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರ್ಯಾಗಿಂಗ್ ತಡೆ ಸಮಿತಿ ಸಂಚಾಲಕರಾದ ಶ್ರೀಮತಿ ಎಲ್.ಎನ್. ಶುಭ ಉಪಸ್ಥಿತರಿದ್ದರು. ಡಾ. ಹೆಚ್.ಪಿ. ಸ್ಫೂರ್ತಿ ಕಾರ್ಯಕ್ರಮ ನಿರೂಪಿಸಿದರು. ಡಾ. ಕುಮುದಿನಿ ಅಚ್ಚಿ ಸ್ವಾಗತಿಸಿದರು ಮತ್ತು ಶ್ರೀಮತಿ ಎಲ್. ಆಶಾ ವಂದಿಸಿದರು. □

ನಂಜನಗೂಡು ಜೆಎಸ್ಎಸ್ ಕಾಲೇಜಿಗೆ ಕ್ರೀಡಾಕೂಟ ಸಮಗ್ರ ಪ್ರಶಸ್ತಿ

ನಂಜನಗೂಡಿನ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ 23.9.2026ರಿಂದ 25.9.2026ರವರೆಗೆ ನಡೆದ ಅಂತರ ಕಾಲೇಜುಗಳ ವಿವಿಧ ಕ್ರೀಡಾಸ್ಪರ್ಧೆಗಳಲ್ಲಿ ಭಾಗವಹಿಸಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಪುರುಷರ ಕುಸ್ತಿ, ಪುರುಷರ ಕಿಕ್ ಬಾಕ್ಸಿಂಗ್, ಮಹಿಳೆಯರ ಕಿಕ್ ಬಾಕ್ಸಿಂಗ್ ಹಾಗೂ ಪುರುಷರ ಯೋಗ ವಿಭಾಗಗಳಲ್ಲಿ ಸಮಗ್ರ ಪ್ರಶಸ್ತಿ ಪಡೆದುಕೊಂಡು ಕಾಲೇಜಿಗೆ ಕೀರ್ತಿ ತಂದಿದ್ದಾರೆ.



ಪುರುಷರ ಕುಸ್ತಿಯಲ್ಲಿ ಡಿ.ಕೆ. ವಿಶ್ವಾಸ್ 55 ಕೆ.ಜಿ. ವಿಭಾಗದಲ್ಲಿ ಪ್ರಥಮ, ಸಂಜಯ್ 75 ಕೆ.ಜಿ. ವಿಭಾಗದಲ್ಲಿ ದ್ವಿತೀಯ, ಸಿ.ಕಿರಣ್ 65 ಕೆ.ಜಿ. ವಿಭಾಗದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ಪುರುಷರ ಕಿಕ್ ಬಾಕ್ಸಿಂಗ್‌ನಲ್ಲಿ ಪ್ರೀತಮ್ 51 ಕೆ.ಜಿ. ವಿಭಾಗದಲ್ಲಿ ತೃತೀಯ, ಡಿ.ಕೆ.ವಿಶ್ವಾಸ್ 57 ಕೆ.ಜಿ. ವಿಭಾಗದಲ್ಲಿ ದ್ವಿತೀಯ, ಆರ್. ಹೃತಿಕ್ 57 ಕೆ.ಜಿ. ವಿಭಾಗದಲ್ಲಿ ತೃತೀಯ, ಕೆ.ಎನ್. ಅಭಿಷೇಕ್ 57 ಕೆ.ಜಿ. ವಿಭಾಗದಲ್ಲಿ ತೃತೀಯ, ಸಿ. ಕಿರಣ್ 65 ಕೆ.ಜಿ. ವಿಭಾಗದಲ್ಲಿ ತೃತೀಯ, ಎಂ.ಎಸ್. ಸಂಜೆ 84 ಕೆ.ಜಿ. ವಿಭಾಗದಲ್ಲಿ ತೃತೀಯ, ಸಂಜಯ್ 84 ಕೆ.ಜಿ. ವಿಭಾಗದಲ್ಲಿ ತೃತೀಯ, ಮದನ್‌ಕುಮಾರ್ 84 ಕೆ.ಜಿ. ವಿಭಾಗದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ಮಹಿಳೆಯರ ಕಿಕ್ ಬಾಕ್ಸಿಂಗ್‌ನಲ್ಲಿ ಆರ್. ಚೇತನ 50 ಕೆ.ಜಿ. ವಿಭಾಗದಲ್ಲಿ ತೃತೀಯ, ಪಿ. ಅಮೂಲ್ಯ 55 ಕೆ.ಜಿ. ವಿಭಾಗದಲ್ಲಿ ತೃತೀಯ, ನಿಸರ್ಗ 55 ಕೆ.ಜಿ. ವಿಭಾಗದಲ್ಲಿ ತೃತೀಯ, ವಿದ್ಯಾ ಶರ್ಮಾ 60 ಕೆ.ಜಿ. ವಿಭಾಗದಲ್ಲಿ ದ್ವಿತೀಯ, ಎಸ್. ಚಂದನ 60 ಕೆ.ಜಿ. ವಿಭಾಗದಲ್ಲಿ ದ್ವಿತೀಯ, ಪಲ್ಲವಿ 70 ಕೆ.ಜಿ. ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಪುರುಷರ ಕರಾಟೆಯ 84 ಕೆ.ಜಿ. ವಿಭಾಗದಲ್ಲಿ ಎನ್.ಎಸ್. ಸಂಜಯ್ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಮಹಿಳೆಯರ ಕರಾಟೆಯ 61 ಕೆ.ಜಿ. ವಿಭಾಗದಲ್ಲಿ ವಿದ್ಯಾ ಶರ್ಮಾ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಪ್ರಾಂಶುಪಾಲರಾದ ಡಾ. ಎನ್. ಮಹಾದೇವಸ್ವಾಮಿ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಪಿ.ಎಂ. ವಿಕ್ರಂ, ತರಬೇತುದಾರರಾದ ಶ್ರೀ ಸಿ.ಎಸ್. ನಿರಂಜನ್ ಹಾಗೂ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕ್ರೀಡಾಪಟುಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಅಂಧರ ಬಾಳಿಗೆ ಬೆಳಕಾಗಲು ಕರೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ನೇತ್ರವಿಜ್ಞಾನ ವಿಭಾಗದ ವತಿಯಿಂದ ದಿನಾಂಕ 5.9.2026 ರಂದು ಆಯೋಜಿಸಿದ್ದ ನೇತ್ರದಾನ ಜಾಗೃತಿ ನಡಿಗೆ ಆಂದೋಲನಕ್ಕೆ ಎನ್‌ಜೆಎಸ್ ಟ್ರಸ್ಟ್‌ನ ಅಧ್ಯಕ್ಷರಾದ ಲಯನ್ ಶ್ರೀ ಎಂ.ಎನ್. ಜೈ ಪ್ರಕಾಶ್‌ರವರು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ಕುಲಪತಿಗಳಾದ ಡಾ. ಹೆಚ್. ಬಸವನಗೌಡಪ್ಪ, ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧು, ಜೆಎಸ್‌ಎಸ್ ಎಹೆಚ್‌ಇಆರ್ ಕುಲಸಚಿವರಾದ ಡಾ. ಬಿ. ಮಂಜುನಾಥ್‌ರವರುಗಳು ಚಾಲನೆ ನೀಡಿದರು.

ನೇತ್ರದಾನದ ಮಹತ್ವದ ಕುರಿತು ಅರಿವು ಮೂಡಿಸುವುದು, ಅದಕ್ಕೆ ಸಂಬಂಧಿಸಿದ ತಪ್ಪು ಕಲ್ಪನೆಗಳನ್ನು ನಿವಾರಿಸುವುದು ಹಾಗೂ ಸಾರ್ವಜನಿಕರನ್ನು ನೇತ್ರದಾನಕ್ಕೆ ಸಂಕಲ್ಪ ಮಾಡುವಂತೆ ಪ್ರೇರೇಪಿಸುವುದು ಈ ನಡಿಗೆಯ ಉದ್ದೇಶವಾಗಿದೆ. ನೇತ್ರದಾನವು ಕಾರ್ನಿಯಾ ಸಂಬಂಧಿತ ಅಂಧತ್ವದಿಂದ ಬಳಲುತ್ತಿರುವವರಿಗೆ ದೃಷ್ಟಿಯನ್ನು ಮರಳಿ ನೀಡಬಲ್ಲ ಅಮೂಲ್ಯ ಕೊಡುಗೆಯಾಗಿದೆ. ಆ ಹಿನ್ನೆಲೆಯಲ್ಲಿ ನಮ್ಮ ಬದುಕು ಕೊನೆಗೊಂಡರೂ ನಾವು ನೀಡಿದ ದೃಷ್ಟಿಯ ಕೊಡುಗೆ ಮತ್ತೊಬ್ಬರ ಬದುಕಿನಲ್ಲಿ ಬೆಳಕಾಗಿ ಮುಂದುವರಿಯಬಹುದು ಎಂಬ ಸಂದೇಶವನ್ನು ಈ ನಡಿಗೆ ಸಾರಿತು.

'ಬದುಕಿನಾಚೆಗೂ ದೃಷ್ಟಿ – ಅತ್ಯುನ್ನತ ಪರಂಪರೆ' ಎಂಬ ಘೋಷವಾಕ್ಯದ ಅಡಿಯಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ಸಲುವಾಗಿ ಜೆಎಸ್‌ಎಸ್ ಆಸ್ಪತ್ರೆಯು ಆಯೋಜಿಸಿದ್ದ ಜಾಗೃತಿ ನಡಿಗೆಯಲ್ಲಿ ಆಸ್ಪತ್ರೆ ಸಿಬ್ಬಂದಿಗಳು, ಜೆಎಸ್‌ಎಸ್ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು, ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ಮತ್ತು ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು ಸೇರಿ ಸುಮಾರು 250 ಜನರು ಈ ನಡಿಗೆಯಲ್ಲಿ ಭಾಗವಹಿಸಿ ಘೋಷವಾಕ್ಯಗಳ ಭಿತ್ತಿಪತ್ರ ಹಾಗೂ ಪೋಸ್ಟರ್‌ಗಳನ್ನು ಪ್ರದರ್ಶಿಸುತ್ತಾ ಜಾಥಾ ನಡೆಸಿದರು. ಈ ನಡಿಗೆ ಅಭಿಯಾನವು ಜೆಎಸ್‌ಎಸ್ ಆಸ್ಪತ್ರೆಯಿಂದ ಹೊರಟು ಜೆಎಸ್‌ಎಸ್ ಮಹಾವಿದ್ಯಾಪೀಠ ವೃತ್ತ, ಅಗ್ರಹಾರ ವೃತ್ತ ಮೂಲಕ ಆಸ್ಪತ್ರೆಗೆ ಮರಳಿತು.

ಜಾಗೃತಿ ಜಾಥಾದಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ಸ್ಥಾನೀಯ ವೈದ್ಯಾಧಿಕಾರಿಗಳಾದ ಡಾ. ಶಾಂತಮಲ್ಲಪ್ಪ, ನೇತ್ರಾ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ. ಸೌಮ್ಯ, ಸಹ ಪ್ರಾಧ್ಯಾಪಕರಾದ ಡಾ. ಪೂಜಾ, ಸಹಾಯಕ ಪ್ರಾಧ್ಯಾಪಕರಾದ ಡಾ. ಬಿಂದುಮಾಲಿನಿ, ಡಾ. ಪದ್ಮಶ್ರೀ, ಡಾ. ಪೂಜಶ್ರೀ ಪಾಲ್ಗೊಂಡಿದ್ದರು.

ಡಾ. ರಾಧಾಕೃಷ್ಣನ್‌ರವರ ಜೀವನ ಸಾಧನೆ ಸ್ಫೂರ್ತಿದಾಯಕ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಶಿಕ್ಷಕ ದಿನಾಚರಣೆಯಲ್ಲಿ ಪ್ರೊ. ಪ್ರಧಾನ್ ಗುರುದತ್ತರವರು ಮಾತನಾಡಿದರು. (5 ಸೆಪ್ಟೆಂಬರ್ 2026)

ಇಪ್ಪತ್ತನೆಯ ಶತಮಾನದ ಅತ್ಯಂತ ಪ್ರಭಾವಶಾಲಿ ಮತ್ತು ವಿಶಿಷ್ಟ ವಿದ್ವಾಂಸರಾದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಭಾರತ ಮತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಗುರುತಿಸಿಕೊಂಡ ಮಹನೀಯರು. ಬಡತನದ ಕುಟುಂಬದಿಂದ ಬಂದು ಉನ್ನತ ಶಿಕ್ಷಣ ಪಡೆದು ಅಧ್ಯಾಪಕರಾಗಿ ಗಮನ ಸೆಳೆದು ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದೆ ಭಾರತದ ಮೊದಲನೆಯ ಉಪರಾಷ್ಟ್ರಪತಿಯಾಗಿ ಹಾಗೂ ಎರಡನೆಯ ರಾಷ್ಟ್ರಪತಿಯಾಗಿ ಆಯ್ಕೆಯಾದರು. ಅವರ ಜೀವನ ಸಾಧನೆಗಳು ಶಿಕ್ಷಕರಿಗೆ ಸದಾ ಸ್ಫೂರ್ತಿದಾಯಕ ಎಂದು ಹಿರಿಯ ವಿದ್ವಾಂಸರು ಹಾಗೂ ಸಾಹಿತಿಗಳಾದ ಪ್ರೊ. ಪ್ರಧಾನ್ ಗುರುದತ್ತರವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 5.9.2026ರಂದು ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಭಾರತದ ಇತಿಹಾಸದಲ್ಲಿಯೇ ಅಧ್ಯಾಪಕರೊಬ್ಬರು ಈ ಮಟ್ಟದ ಸಾಧನೆ ಮಾಡಿ ಭಾರತರತ್ನ ಪ್ರಶಸ್ತಿಗೆ ಭಾಜನರಾಗಿರುವುದು ಅಪರೂಪದಲ್ಲಿ ಅಪರೂಪ. ಗುರುವಿನ ಗುರಿಗೆ ರಾಧಾಕೃಷ್ಣರ ಸಾಧನೆ ಪ್ರೇರಣಾದಾಯಕ. ಭಾರತದ ಆಧ್ಯಾತ್ಮಿಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಸ್ಥಾನಮಾನಗಳು ಉನ್ನತವಾಗಿವೆ. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ ಎನ್ನುವ ಮಾತೇ ಇದಕ್ಕೆ ಸಾಕ್ಷಿ. ಶಿಕ್ಷಕ ತನ್ನ ವೃತ್ತಿಯೊಂದಿಗೆ ಅನುಸಂಧಾನ ಮಾಡಿಕೊಂಡು ವಿದ್ವತ್ತಿನ ಹಾದಿಯಲ್ಲಿ ಸಾಗಿ ಉನ್ನತ ಆಶಯಗಳನ್ನು ಬೆಳೆಸಿಕೊಂಡಾಗ ಮಾತ್ರವೇ ಇಂತಹ ಮಹಾನ್ ಸಾಧನೆಯನ್ನು ಮಾಡಲು ಸಾಧ್ಯ. ರಾಧಾಕೃಷ್ಣನ್‌ರವರು ಅಂತಹ ಸಾಧಕರು. ಸ್ವಾಮಿ ವಿವೇಕಾನಂದರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡ ರಾಧಾಕೃಷ್ಣರು ಅಂತಾರಾಷ್ಟ್ರೀಯ ಮಟ್ಟದ ಸಾಧಕರು. ಜಗತ್ತಿನ ಸರ್ವಶ್ರೇಷ್ಠ ತತ್ವಶಾಸ್ತ್ರಜ್ಞರು, ವಿದ್ವಾಂಸರು. ಪಾಶ್ಚಾತ್ಯ ವಿಮರ್ಶಕರಾದ ರಾಬರ್ಟ್ ನೀಲ್‌ರಂತಹವರಿಂದಲೇ

ಪ್ರಶಂಸೆ ಪಡೆದುಕೊಂಡವರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇವರು ಅಧ್ಯಾಪಕ ವೃತ್ತಿಯನ್ನು ನಿರ್ವಹಿಸಿದ್ದರು ಎನ್ನುವುದೇ ನಮಗೆ ಹೆಮ್ಮೆಯ ವಿಷಯ. ಸಾಹಿತ್ಯದಲ್ಲಿ ಇಪ್ಪತ್ತೊಂಬತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಇವರ ಸಾಹಿತ್ಯಕ ಸಾಧನೆಯೂ ಕೂಡ ಸ್ಮರಣಾರ್ಹವಾದುದು. ಇವರ ಜನ್ಮ ದಿನವನ್ನು ನಾವು ಶಿಕ್ಷಕರ ದಿನವಾಗಿ ಆಚರಣೆ ಮಾಡುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾದ ವಿಚಾರವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಜೆಎಸ್ಎಸ್ ಸಂಸ್ಥೆ ಸಲ್ಲಿಸುತ್ತಿರುವ ಸೇವೆ ಅವಿಸ್ಮರಣೀಯ. ಇಲ್ಲಿನ ಅಧ್ಯಾಪಕರು ಪೂಜ್ಯ ಶ್ರೀಗಳವರ ದಿವ್ಯ ಆಶೀರ್ವಾದದೊಂದಿಗೆ ವಿದ್ಯಾರ್ಥಿಗಳ ಕನಸಿಗೆ ಮಾರ್ಗದರ್ಶಕರಾಗಿದ್ದಾರೆ ಎಂದು ಹೇಳಿದರು.

ಪ್ರಾಂಶುಪಾಲರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ವಿದ್ಯಾರ್ಥಿಗಳ ಬದುಕಿನಲ್ಲಿ ಮಹತ್ವದ ಹಾಗೂ ಶಾಶ್ವತ ಬದಲಾವಣೆ ತಂದು ಬದುಕಿನ ದಾರಿಯಲ್ಲಿ ಅವರು ಸರಿಯಾದ ದಿಕ್ಕಿನಲ್ಲಿ ಸಾಗಲು ದಾರಿ ತೋರುವ ಗುರುವಿನ ಸ್ಥಾನ ದೊಡ್ಡದು. ತಮ್ಮ ಜೀವನದ ಬಹುಪಾಲು ಭಾಗವನ್ನೇ ಮುಡಿಪಾಗಿಟ್ಟು ಮಾರ್ಗದರ್ಶನ ಮಾಡುವ ಗುರುಗಳ ಸ್ಮರಣೆ ಅರ್ಥಪೂರ್ಣವಾದುದು. ಆದರೆ ಗುರುವಿಗೆ ಗೌರವ ನೀಡಲು ಶಿಕ್ಷಕರ ದಿನವೇ ಬೇಕೆಂದಿಲ್ಲ. ನಮ್ಮನ್ನು ಸತ್ಪಥದಲ್ಲಿ ಮುನ್ನಡೆಯುವಂತೆ ಮಾರ್ಗ ತೋರುವ ಗುರುವಿನ ಸ್ಮರಣೆ ಸದಾಕಾಲ ಇರಬೇಕು. ಅಧ್ಯಾಪಕರಾಗಿ ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಗುರುತಿಸಿಕೊಂಡ ಡಾ. ಸರ್ವಪಲ್ಲಿ ರಾಧಾಕೃಷ್ಣರವರ ಜೀವನ ಮತ್ತು ಸಾಧನೆಗಳು ನಮಗೆ ಸ್ಮರಣೀಯವಾದುದು ಎಂದರು.

ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿ ಉಪಸ್ಥಿತರಿದ್ದರು. ಅಧ್ಯಾಪಕರಾದ ಶ್ರೀಮತಿ ಮಂಜುಳಾ ಪ್ರಾರ್ಥಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಹೆಚ್.ಪಿ. ಮಹಾದೇವಸ್ವಾಮಿ ವಂದಿಸಿದರು. ಅಧ್ಯಾಪಕರಾದ ಡಾ. ಹೆಚ್.ಆರ್. ಮಮತ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕರ ದಿನಾಚರಣೆಯ ಅಂಗವಾಗಿ ಕಾಲೇಜಿನಲ್ಲಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಗೆದ್ದ ಅಧ್ಯಾಪಕರು ಮತ್ತು ಅಧ್ಯಾಪಕೇತರರಿಗೆ ಬಹುಮಾನ ವಿತರಿಸಲಾಯಿತು.

ಬೆಳೆಗಳ ಸಂಸ್ಕರಣೆ ಹಾಗೂ ಉದ್ಯಮಶೀಲತಾ ಅವಕಾಶಗಳ ತರಬೇತಿ

ಸುತ್ತೂರಿನ ಐಸಿಎಆರ್–ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಾವಿಕ್ ಕೃಷಿ ನವೋದ್ಯಮ ಪೋಷಣಾ ಕೇಂದ್ರ ಮತ್ತು ಐಸಿಎಆರ್–ರಾಷ್ಟ್ರೀಯ ಪಶುರೋಗ ಸೋಂಕು ಶಾಸ್ತ್ರ ಮತ್ತು ಮಾಹಿತಿ ವಿಜ್ಞಾನ ಸಂಸ್ಥೆಗಳ ಸಹಯೋಗದಲ್ಲಿ ರೈತರಿಗೆ ಉದ್ಯಮಶೀಲತಾ ಅವಕಾಶಗಳು ಹಾಗೂ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಸಂಸ್ಕರಣೆ ತರಬೇತಿಯನ್ನು ದಿನಾಂಕ 3.9.2026 ರಿಂದ 3 ದಿನಗಳ ಕಾಲ ಆಯೋಜಿಸಲಾಗಿತ್ತು.

ಬೆಂಗಳೂರಿನ ನಾವಿಕ್ ಕೃಷಿ ನವೋದ್ಯಮ ಪೋಷಣಾ ಕೇಂದ್ರದ ಸಹಾಯಕ ವ್ಯವಸ್ಥಾಪಕರಾದ ಡಾ. ಕೆ.ಎಂ. ಸುಮನ್‌ರವರು, ನಮ್ಮ ಕೇಂದ್ರದಿಂದ ಸ್ವಸಹಾಯ ಸಂಘಗಳಿಗೆ, ರೈತ ಮಹಿಳೆಯರಿಗೆ ಹಾಗೂ ಗ್ರಾಮೀಣ ಉದ್ಯಮಿಗಳಿಗೆ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಉದ್ಯಮಶೀಲತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಗತ್ಯ ಮಾರ್ಗದರ್ಶನ ಮತ್ತು ಸಹಕಾರದ ಮಾಹಿತಿ ನೀಡಲಾಗುವುದು. ಕೃಷಿ ಉತ್ಪನ್ನಗಳನ್ನು ಆಧರಿಸಿ ಸಣ್ಣ ಪ್ರಮಾಣದ ಉದ್ಯಮಗಳನ್ನು ಸ್ಥಾಪಿಸಲು ಅಗತ್ಯವಿರುವ ತಾಂತ್ರಿಕ ಜ್ಞಾನ, ಉತ್ಪನ್ನ ಅಭಿವೃದ್ಧಿ, ಗುಣಮಟ್ಟದ ನಿರ್ವಹಣೆ, ಪ್ಯಾಕೇಜಿಂಗ್, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆ ಸಂಪರ್ಕದ ಬಗ್ಗೆ



ತಿಳಿದುಕೊಂಡರೆ ಯಶಸ್ಸು ಕಾಣಬಹುದು ಎಂದರು.

ಮೈಸೂರು ತೋಟಗಾರಿಕೆ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ. ಎಚ್.ಬಿ. ರಶ್ಮಿಯವರು, ಕೊಯ್ಲೋತ್ತರ ನಷ್ಟವನ್ನು ಕಡಿಮೆ ಮಾಡಲು ಸರಿಯಾದ ಕೊಯ್ಲು ಹಂತ, ವೈಜ್ಞಾನಿಕ ವಿಂಗಡಣೆ, ಶ್ರೇಣೀಕರಣ, ಸ್ವಚ್ಛತೆ, ಸೂಕ್ತ ಪ್ಯಾಕೇಜಿಂಗ್, ಶೀತ ಸರಪಳಿ ವ್ಯವಸ್ಥೆ, ವೈಜ್ಞಾನಿಕ ಸಂಗ್ರಹಣೆ ಮತ್ತು ಉತ್ತಮ ಸಾರಿಗೆ ವ್ಯವಸ್ಥೆಗಳನ್ನು ಅನುಸರಿಸುವುದು ಅಗತ್ಯವಾಗಿದೆ. ಇದಲ್ಲದೆ, ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾದ ಸಂದರ್ಭದಲ್ಲಿ ಹೆಚ್ಚುವರಿ ಉತ್ಪನ್ನಗಳನ್ನು ಸಂಸ್ಕರಿಸಿ ಮೌಲ್ಯವರ್ಧಿತ ಉತ್ಪನ್ನಗಳಾಗಿ ಪರಿವರ್ತಿಸುವುದು ಪರಿಣಾಮಕಾರಿ ಮಾರ್ಗವಾಗಿದೆ ಎಂದರು.

ಐಸಿಎಆರ್–ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಬಿ.ಎನ್. ಜ್ಞಾನೇಶ್ವರವರು ಮಾತನಾಡಿ ಕೃಷಿ ಮತ್ತು ತೋಟಗಾರಿಕಾ ಬೆಳೆಗಳು ರೈತರ ಜೀವನೋಪಾಯ ಹಾಗೂ ಗ್ರಾಮೀಣ ಆರ್ಥಿಕತೆಯ ಪ್ರಮುಖ ಆಧಾರವಾಗಿವೆ. ಹಣ್ಣು, ತರಕಾರಿ, ಧಾನ್ಯ, ಬೇಳೆ, ಸಾಂಬಾರ ಪದಾರ್ಥಗಳು ಹಾಗೂ ಇತರೆ ಕೃಷಿ ಉತ್ಪನ್ನಗಳನ್ನು ಕೇವಲ ಕಚ್ಚಾ ಉತ್ಪನ್ನಗಳಾಗಿ ಮಾರಾಟ ಮಾಡುವುದಕ್ಕಿಂತ ಅವುಗಳನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಮೌಲ್ಯವರ್ಧಿತ ಉತ್ಪನ್ನಗಳಾಗಿ ಪರಿವರ್ತಿಸುವುದರಿಂದ ರೈತರಿಗೆ ಹೆಚ್ಚಿನ ಆದಾಯವನ್ನು ಗಳಿಸುವ ಅವಕಾಶಗಳಿವೆ ಎಂದರು.

ನಾವಿಕ್ ಕೃಷಿ ನವೋದ್ಯಮ ಪೋಷಣಾ ಕೇಂದ್ರದ ಡಾ. ಪೂಜಾರವರು, ಮಹಿಳೆಯರು ಉದ್ಯಮಶೀಲತೆಯ ಮೂಲಕ ಸ್ವಾವಲಂಬಿಗಳಾಗಿ ಆರ್ಥಿಕವಾಗಿ ಸಬಲರಾಗಬೇಕು ಹಾಗೂ ಸಂಜೀವಿನಿ ಯೋಜನೆಯಡಿಯಲ್ಲಿ ಲಭ್ಯವಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ತರಬೇತಿಯ ಅಂಗವಾಗಿ ಕೃಷಿ ವಿಜ್ಞಾನ ಕೇಂದ್ರದ ಆಹಾರ ಸಂಸ್ಕರಣಾ ಘಟಕದಲ್ಲಿ ವಿವಿಧ ಮೌಲ್ಯವರ್ಧಿತ ಆಹಾರ ಉತ್ಪನ್ನಗಳ ಪ್ರಾಯೋಗಿಕ ತಯಾರಿಕಾ ತರಬೇತಿ ನೀಡಲಾಯಿತು. ಸಪೋಟಾ ಜಾಮ್, ಬಾಳೆಕಾಯಿ ಹಿಟ್ಟು, ಬೀಟ್‌ರೂಟ್ ಹಲ್ವಾ, ರಾಗಿ ಲಡ್ಡು, ಟೊಮ್ಯಾಟೊ ಸಾಸ್, ವಿವಿಧ ಬೇಕರಿ ಉತ್ಪನ್ನಗಳು ಹಾಗೂ ಇತರೆ ತಿಂಡಿಗಳ ತಯಾರಿಕೆಯ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು.

ಡಾ. ದೀಪಕ್ ಸ್ವಾಗತಿಸಿದರು. ಶ್ರೀಮತಿ ಎಚ್.ವಿ. ದಿವ್ಯಾ ಕಾರ್ಯಕ್ರಮ ನಿರೂಪಿಸಿದರು. ಡಾ. ವಿನಯ್ ವಂದಿಸಿದರು. ತರಬೇತಿ ಕಾರ್ಯಕ್ರಮದಲ್ಲಿ ರೈತ ಮಹಿಳೆಯರು ಹಾಗೂ ಸ್ವಸಹಾಯ ಸಂಘಗಳ ಸದಸ್ಯರು ಭಾಗವಹಿಸಿ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಸಂಸ್ಕರಣೆ ಹಾಗೂ ಉದ್ಯಮಶೀಲತಾ ಅವಕಾಶಗಳ ಕುರಿತು ಪ್ರಾಯೋಗಿಕ ಜ್ಞಾನವನ್ನು ಪಡೆದುಕೊಂಡರು.

□

ನರ್ಸಿಂಗ್ ವಿದ್ಯಾರ್ಥಿಗಳು ಕೌಶಲ್ಯ ರೂಢಿಸಿಕೊಳ್ಳಬೇಕು



ನರ್ಸಿಂಗ್ ವಿದ್ಯಾರ್ಥಿಗಳು ಉತ್ತಮ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದು ಚಾಮರಾಜನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಎಂ.ಎಸ್. ರಾಜೇಶ್‌ಕುಮಾರ್‌ರವರು ಹೇಳಿದರು.

ಚಾಮರಾಜನಗರ ಜೆಎಸ್ಎಸ್ ನರ್ಸಿಂಗ್ ಶಾಲೆಯಲ್ಲಿ ದಿನಾಂಕ 4.9.2026ರಂದು ನಡೆದ 2026–27ನೇ ಸಾಲಿನ 23ನೇ ಬ್ಯಾಚಿನ ಜಿಎನ್ಎಂ ವಿದ್ಯಾರ್ಥಿಗಳ ದೀಕ್ಷಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ಅವರು ತಿಳಿಸಿದರು. ವಿದ್ಯಾರ್ಥಿಗಳು ಉತ್ತಮ ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಶಿಸ್ತು, ಸಮಯಪಾಲನೆ, ಜವಾಬ್ದಾರಿ, ಸೇವಾ ಮನೋಭಾವ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಜೆಎಸ್ಎಸ್ ಆಸ್ಪತ್ರೆಯ ಉಪ ವೈದ್ಯಕೀಯ ಅಧೀಕ್ಷಕರಾದ ಡಾ. ಎನ್. ನವೀನ್‌ರವರು ನರ್ಸಿಂಗ್ ವೃತ್ತಿಯಲ್ಲಿ ಪ್ರಾಯೋಗಿಕ ಜ್ಞಾನ ಮತ್ತು ಕ್ಲಿನಿಕಲ್ ಕೌಶಲ್ಯಗಳ ಮಹತ್ವವನ್ನು ವಿವರಿಸಿ ರೋಗಿಗಳೊಂದಿಗೆ ಪ್ರೀತಿ ಕಾಳಜಿ ಸಹಾನುಭೂತಿ ಮತ್ತು ಗೌರವದಿಂದ ವರ್ತಿಸಬೇಕು.

ಉತ್ತಮ ನರ್ಸ್ ಆಗಲು ಸದಾ ಕಲಿಯುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಪ್ರಾಂಶುಪಾಲರಾದ ಶ್ರೀ ಜಿ. ವಿನಯ್‌ಕುಮಾರ್, ಸಂಸ್ಥೆಯ ನಿಯಮಗಳನ್ನು ಪಾಲಿಸುವುದು, ನಿಯಮಿತವಾಗಿ ತರಗತಿಗಳಿಗೆ ಹಾಜರಾಗುವುದು ಹಾಗೂ ವಿದ್ಯಾಭ್ಯಾಸದಲ್ಲಿ ಆಸಕ್ತಿ ವಹಿಸುವುದು ಮುಖ್ಯವಾದುದು. ಗುರಿಯನ್ನು ನಿಗದಿಪಡಿಸಿಕೊಂಡು ಆತ್ಮವಿಶ್ವಾಸದಿಂದ ಮುನ್ನಡೆಯಬೇಕು ಎಂದರು.

ಕು. ಸಂಧ್ಯಾ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಶ್ರೀಮತಿ ಎಸ್. ಮಧು ಸ್ವಾಗತಿಸಿದರು. ಕು. ಹೆಚ್.ಎಸ್. ಸುಶ್ಮಿತಾ ವಂದಿಸಿದರು. ಕಾರ್ಯಕ್ರಮದಲ್ಲಿ ಪೋಷಕರು, ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

□

ಶಿಕ್ಷಕರ ದಿನಾಚರಣೆ



ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 5.9.2026ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ಪ್ರಾಚಾರ್ಯರಾದ ಶ್ರೀ ಬಿ. ಮಧುಕುಮಾರ್‌ರವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಒಬ್ಬ ಗುರು ತನ್ನ ಬಾಳನ್ನು ಮೇಣದಬತ್ತಿಯ ರೀತಿಯಲ್ಲಿ ಸುಟ್ಟುಕೊಂಡು ಮಕ್ಕಳ ಬಾಳಿಗೆ ಬೆಳಕು ನೀಡುವನು. ಅಗೋಚರವಾದ ಗುರುವಿನ ಆಶೀರ್ವಾದದೊಂದಿಗೆ ಜಗತ್ತನ್ನು ಗೆಲ್ಲಬಹುದು. ಸಾಧಕರ ಸಾಧನೆಗೆ ಶಿಕ್ಷಕರ ನೆರಳು ಅತ್ಯಗತ್ಯ. ಶಿಕ್ಷಕರು ಇಲ್ಲದೆ ಹೋಗಿದ್ದರೆ ಜಗತ್ತು ಅಜ್ಞಾನದ ಕತ್ತಲೆಯಲ್ಲಿ ಮುಳುಗುತ್ತಿತ್ತು. ಸುಂದರ ಜಗತ್ತಿನ ನಿರ್ಮಾತೃಗಳೇ ಶಿಕ್ಷಕರು ಎಂದರೆ ತಪ್ಪಾಗಲಾರದು. ತತ್ವಜ್ಞಾನಿ, ದೇಶದ ದ್ವಿತೀಯ ರಾಷ್ಟ್ರಪತಿ ಮತ್ತು ಆದರ್ಶ ಶಿಕ್ಷಕರಾಗಿದ್ದ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನವನ್ನು ನಾವು ಶಿಕ್ಷಕರ ದಿನವನ್ನಾಗಿ

ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಕನ್ನಡ ಶಿಕ್ಷಕರಾದ ಶ್ರೀಮತಿ ಎಂ. ರಜನಿಯವರು ಮಾತನಾಡಿ, ಶಿಕ್ಷಕರು ಮಕ್ಕಳಿಗೆ ತುಂಬುವ ಧೈರ್ಯ, ಸ್ಫೂರ್ತಿ, ಉತ್ಸಾಹ, ಪ್ರೇರಣೆಗಳಿಂದ ಎಂತಹ ಸನ್ನಿವೇಶಗಳನ್ನಾದರೂ ಎದುರಿಸಬಹುದು. ನಾವು ಸೆಪ್ಟೆಂಬರ್ 5 ರಂದು ಆಚರಿಸುವ ಈ ಶಿಕ್ಷಕರ ದಿನಾಚರಣೆಯು ಕೇವಲ ಆಚರಣೆಯಲ್ಲ, ಅದು ಅಜ್ಞಾನದ ಕತ್ತಲೆಯನ್ನು ಓಡಿಸಿ, ಜ್ಞಾನದ ಬೆಳಕು ಚೆಲ್ಲುವ ಗುರುವಂದನಾ ಪರ್ವ. ಮಗುವಿನ ಮನಸ್ಸಿನಲ್ಲಿ ಜ್ಞಾನದ ಬೀಜ ಬಿತ್ತಿ, ಸಂಸ್ಕಾರದ ನೀರೆರೆದು, ಮೌಲ್ಯಗಳ ಕೊಂಬೆಗಳನ್ನು ಬೆಳೆಸಿ, ಉತ್ತಮ ಪ್ರಜೆಯನ್ನಾಗಿ ರೂಪಿಸುವ ಶಿಲ್ಪಿ ಶಿಕ್ಷಕ ಎಂದರು.

10ನೇ ತರಗತಿಯ ವಿದ್ಯಾರ್ಥಿಗಳು ಶಿಕ್ಷಕರಿಗೆ ವಿವಿಧ ಕ್ರೀಡೆಗಳನ್ನು ಆಯೋಜಿಸಿದ್ದರು. ಕು. ಯುಕ್ತಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಕು. ಅಚಿಂತ್ಯ ಸ್ವಾಗತಿಸಿದರು. ಕು. ಜಿಷ್ಣು ವಂದಿಸಿದರು. ಕು. ದಿಶಾಂತ್ ಮತ್ತು ಕು. ಬೆಳಕು ಕಾರ್ಯಕ್ರಮ ನಿರೂಪಿಸಿದರು.

□

ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಗೆ ಕ್ರೀಡಾ ಸಮಗ್ರ ಪ್ರಶಸ್ತಿ

ನಂಜನಗೂಡು ತಾಲ್ಲೂಕಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ನಗರ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹಯೋಗದಲ್ಲಿ ಸುತ್ತೂರಿನಲ್ಲಿ ಆಯೋಜಿಸಿದ್ದ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಪಟುಗಳು ಆಟ–ಮೇಲಾಟಗಳಲ್ಲಿ ಭಾಗವಹಿಸಿ 196 ಅಂಕಗಳಿಸುವುದರೊಂದಿಗೆ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ.

ಬಾಲಕರ ವಿಭಾಗದ ಖೋಖೋ, ಕಬಡ್ಡಿ, ವಾಲಿಬಾಲ್ ಪಂದ್ಯಾವಳಿಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಖೋಖೋ, ಥ್ರೋಬಾಲ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಬಾಲಕಿಯರ ವಿಭಾಗದ ಖೋಖೋ, ಥ್ರೋಬಾಲ್ ಪಂದ್ಯಾವಳಿಗಳಲ್ಲಿ ಪ್ರಥಮ ಸ್ಥಾನ, ವಾಲಿಬಾಲ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಬಾಲಕರ ವಿಭಾಗದಲ್ಲಿ ಬೀಟಾ ರಾಜ್–100 ಮೀ. ಓಟದಲ್ಲಿ ಪ್ರಥಮ, ಲಂಬಾ ಸಲಾಮ್ 200 ಮೀ. ಓಟದಲ್ಲಿ ಪ್ರಥಮ, ರಾಘವೇಂದ್ರ ದ್ವಿತೀಯ ಸ್ಥಾನ, 400 ಮೀ. ಓಟದಲ್ಲಿ ಜಾನ್‌ಥೋ ಪ್ರಥಮ, ಸುಭಾಷ್ ದ್ವಿತೀಯ, 600 ಮೀ. ಓಟದಲ್ಲಿ ಅಪ್ಪಾವಡಾಂಗ್ ಪ್ರಥಮ, ಬಸವರಾಜು ದ್ವಿತೀಯ ಸ್ಥಾನ, ಗುಂಡು ಎಸೆತದಲ್ಲಿ ನನ್‌ಸಮ್ ಪ್ರಥಮ, ಯಶ್ವಂತ್ ದ್ವಿತೀಯ ಸ್ಥಾನ, ತಟ್ಟೆ ಎಸೆತದಲ್ಲಿ ನನ್‌ಸಮ್ ಪ್ರಥಮ ಸ್ಥಾನ, ಉದ್ದಜಿಗಿತದಲ್ಲಿ ಗಿರೀಶ್ ಪ್ರಥಮ, ಎತ್ತರಜಿಗಿತದಲ್ಲಿ ಪವಾಂಗ್ ದ್ವಿತೀಯ, ಗಿರೀಶ್ ತೃತಿಯ, 4x100 ಮೀ ರಿಲೇಯಲ್ಲಿ ಬೀಟಾರಾಜ್ ಮತ್ತು ತಂಡ ಪ್ರಥಮ, ಸಂಗಮೇಶ್ ಮತ್ತು ತಂಡ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ನನ್‌ಸವಮ್ ಬಾಲಕರ ವಿಭಾಗದ ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಬಾಲಕಿಯರ ವಿಭಾಗದಲ್ಲಿ 100 ಮೀ. ಓಟದಲ್ಲಿ ಕೃತಿಕಾ ಪ್ರಥಮ, ಅಮೃತಾ ದ್ವಿತೀಯ, 200 ಮೀ. ಓಟದಲ್ಲಿ ಹೇಮಾವತಿ ಪ್ರಥಮ, 400 ಮೀ. ಓಟದಲ್ಲಿ ಕೃತಿಕಾ ಪ್ರಥಮ, 600 ಮೀ ಓಟದಲ್ಲಿ ಅಮೃತಾ ಪ್ರಥಮ, ತನ್ವಿತ ದ್ವಿತೀಯ ಸ್ಥಾನ ಪಡೆದಿದ್ದಾರೆ. ಗುಂಡು ಎಸೆತದಲ್ಲಿ ಹೇಮಾ



ನಂಜನಗೂಡಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ನಗರ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹಯೋಗದಲ್ಲಿ ಸುತ್ತೂರಿನಲ್ಲಿ ಆಯೋಜಿಸಿದ್ದ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸುತ್ತೂರು ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಪಟುಗಳು, ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಸಮಗ್ರ ಪ್ರಶಸ್ತಿ ಪಡೆದಿರುತ್ತಾರೆ. ಚಿತ್ರದಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ಜಿ. ಶಿವಸ್ವಾಮಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರುಗಳಿದ್ದಾರೆ.

ದ್ವಿತೀಯ, ಎತ್ತರಜಿಗಿತದಲ್ಲಿ ಪೂಜಾ ಪ್ರಥಮ, 4x100 ಮೀ ರಿಲೇಯಲ್ಲಿ ಅಮೃತಾ ಮತ್ತು ತಂಡ ಪ್ರಥಮ, ಕೃತಿಕಾ ಮತ್ತು ತಂಡ ದ್ವಿತೀಯ. ಅಬನಾ ಲಿಂಗ್ಡೋ ಗುಂಡು ಎಸೆತ, ತಟ್ಟೆಎಸೆತ ಮತ್ತು ಎತ್ತರಜಿಗಿತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ವಿಜೇತ ಕ್ರೀಡಾಪಟುಗಳನ್ನು ಸಂಸ್ಥೆಯ ಆಡಳಿತಾಧಿಕಾರಿಗಳು, ಮುಖ್ಯಸ್ಥರುಗಳು, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

□

ಸುತ್ತೂರು ಜೆಎಸ್‌ಎಸ್ ಶಾಲೆಗೆ ಸಮಗ್ರ ಕ್ರೀಡಾ ಪ್ರಶಸ್ತಿ

ಸುತ್ತೂರಿನಲ್ಲಿ ನಂಜನಗೂಡು ತಾಲ್ಲೂಕಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ತಾಯೂರಿನ ಟಿಎಸ್‌ಎಸ್ ಪ್ರೌಢಶಾಲೆ ಇವರ ಸಹಯೋಗದಲ್ಲಿ ಏರ್ಪಡಿಸಿದ್ದ ಬಿಳಿಗೆರೆ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳು ಆಟ–ಮೇಲಾಟಗಳಲ್ಲಿ ಭಾಗವಹಿಸಿ ಸಮಗ್ರ ಪ್ರಶಸ್ತಿ ಗಳಿಸಿದ್ದಾರೆ.

ಬಾಲಕರ ವಿಭಾಗದಲ್ಲಿ ಖೋಖೋ ಪ್ರಥಮ ಮತ್ತು ದ್ವಿತೀಯ, ಕಬಡ್ಡಿ ಪ್ರಥಮ ಮತ್ತು ದ್ವಿತೀಯ, ಥ್ರೋಬಾಲ್ ಪ್ರಥಮ, ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಗಳಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ಕಬಡ್ಡಿ ಪ್ರಥಮ ಮತ್ತು ದ್ವಿತೀಯ; ಖೋಖೋ ಪ್ರಥಮ ಮತ್ತು ದ್ವಿತೀಯ; ವಾಲಿಬಾಲ್, ಬಾಲ್ ಬ್ಯಾಡ್ಮಿಂಟನ್, ಥ್ರೋಬಾಲ್



ಸುತ್ತೂರಿನ ಜೆಎಸ್ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳು ನಂಜನಗೂಡು ತಾಲ್ಲೂಕು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು ತಾಯೂರಿನ ಟಿಎಸ್ಎಸ್ ಪ್ರೌಢಶಾಲೆಯ ಸಹಯೋಗದಲ್ಲಿ ಸುತ್ತೂರಿನಲ್ಲಿ ಆಯೋಜಿಸಿದ್ದ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಸಮಗ್ರ ಪ್ರಶಸ್ತಿ ಪಡೆದಿರುತ್ತಾರೆ. ಚಿತ್ರದಲ್ಲಿ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್, ಮುಖ್ಯಸ್ಥರುಗಳು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರುಗಳಿದ್ದಾರೆ.

ಪಂದ್ಯಾವಳಿಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಅಥ್ಲೆಟಿಕ್ಸ್ – ಬಾಲಕರ ವಿಭಾಗದಲ್ಲಿ ಶರತ್ ಪ್ರಸಾದ್– 100 ಮೀ. ಓಟದಲ್ಲಿ ಪ್ರಥಮ; ಮಹಾಂತೇಶ್ ನಾಯಕ್ ದ್ವಿತೀಯ ಸ್ಥಾನ, 200 ಮೀ. ಓಟದಲ್ಲಿ ಶರತ್ ಪ್ರಸಾದ್ ಪ್ರಥಮ, ಈರಣ್ಣ ದ್ವಿತೀಯ; 400 ಮೀ. ಓಟ ಗುಣಶೀತಲ್ ಪ್ರಥಮ, ಈರಣ್ಣ ದ್ವಿತೀಯ; 800 ಮೀ. ಓಟದಲ್ಲಿ ಸುಪ್ರೀತ್ ಪ್ರಥಮ, 1500 ಮೀ. ಓಟ ಬಿ. ಸಂಜು ದ್ವಿತೀಯ; ಡಿ. ದಿಗಂತ್ ತೃತೀಯ; 3000 ಮೀ. ಓಟದಲ್ಲಿ ಬಸವರಾಜು ಪ್ರಥಮ, ಲೋಹಿತ್ ದ್ವಿತೀಯ; 5000 ಮೀ. ನಡಿಗೆ ಸ್ಪರ್ಧೆಯಲ್ಲಿ ಪವನ್ ಮರಿಗೌಡ ಪ್ರಥಮ, ಬಿ. ಸಂಜು ದ್ವಿತೀಯ; 4x100 ಮೀ ರಿಲೇಯಲ್ಲಿ ಬಿಪ್ಲಪ್ ಮತ್ತು ತಂಡ ಪ್ರಥಮ, ನವೀನ್ ಮತ್ತು ತಂಡ ದ್ವಿತೀಯ 4x400 ಮೀ. ರಿಲೇಯಲ್ಲಿ ಗುಣಶೀತಲ್ ಮತ್ತು ತಂಡ ಪ್ರಥಮ, ವಿಜಯಕುಮಾರ್ ಮತ್ತು ತಂಡ ದ್ವಿತೀಯ ಸ್ಥಾನ ಪಡೆದಿದ್ದಾರೆ. ಉದ್ದಜಿಗಿತದಲ್ಲಿ ಮಹಾಂತೇಶ್ ನಾಯಕ ಪ್ರಥಮ, ಎತ್ತರ ಜಿಗಿತದಲ್ಲಿ ಮಡಿವಾಳ ದ್ವಿತೀಯ, ತ್ರಿವಿಧ ಜಿಗಿತದಲ್ಲಿ ವಿಜಯ್ ಕುಮಾರ್ ತೃತೀಯ, ಗುಂಡು ಎಸೆತದಲ್ಲಿ ಮಲ್ಲಿಕಾರ್ಜುನ್ ದ್ವಿತೀಯ, ದೀಪು ತೃತೀಯ, ಚಕ್ರ ಎಸೆತದಲ್ಲಿ ಮಲ್ಲಿಕಾರ್ಜುನ್ ದ್ವಿತೀಯ, ಭರ್ಜಿ ಎಸೆತದಲ್ಲಿ ಈರಣ್ಣ ದ್ವಿತೀಯ ಸ್ಥಾನ ಗಳಿಸಿ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಶರತ್ ಪ್ರಸಾದ್ ಬಾಲಕರ ವಿಭಾಗದ ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಅಥ್ಲೆಟಿಕ್ಸ್ – ಬಾಲಕಿಯರ ವಿಭಾಗದಲ್ಲಿ ಯೋಗಿನಿ ಗಿರೀಶ್ ಹೊಸಮನಿ – 100 ಮೀ. ಓಟದಲ್ಲಿ ಪ್ರಥಮ, ಅಮೃತ ದ್ವಿತೀಯ, 200ಮೀ ಓಟದಲ್ಲಿ ಲಕ್ಷ್ಮಿ ಪ್ರಥಮ,

ಸಿ. ಶ್ವೇತಾ ದ್ವಿತೀಯ; 400 ಮೀ. ಓಟದಲ್ಲಿ ಶುಭಶ್ರೀ ಪ್ರಥಮ, ಸಂಜನಾ ದ್ವಿತೀಯ; 800 ಮೀ. ಓಟದಲ್ಲಿ ಶುಭಶ್ರೀ ಪ್ರಥಮ, ಚಿನ್ಮಯಿ ದ್ವಿತೀಯ; 1500 ಮೀ. ಶುಭಶ್ರೀ ಪ್ರಥಮ, ಭೂಮಿಕಾ ದ್ವಿತೀಯ; 3000 ಮೀ. ಓಟದಲ್ಲಿ ಮನ್ವಿತಾ ಪ್ರಥಮ, ರೂಪ ತೃತೀಯ, 3000 ಮೀ. ನಡಿಗೆ ಸ್ಪರ್ಧೆಯಲ್ಲಿ ಚಂದನ ಪ್ರಥಮ, ಪ್ರಾರ್ಥನಾ ತೃತೀಯ; 4x100 ಮೀ. ರಿಲೇಯಲ್ಲಿ ಶುಭಶ್ರೀ ಮತ್ತು ತಂಡ ಪ್ರಥಮ ಸ್ಥಾನ, ಯೋಗಿನಿ ಮತ್ತು ತಂಡ ದ್ವಿತೀಯ; 4x400 ಮೀ. ರಿಲೇಯಲ್ಲಿ ರಕ್ಷಿತಾ ಮತ್ತು ತಂಡ ಪ್ರಥಮ, ಲಕ್ಷ್ಮಿ ಮತ್ತು ತಂಡ ದ್ವಿತೀಯ ಸ್ಥಾನ ಪಡೆದಿದ್ದಾರೆ. ಉದ್ದ ಜಿಗಿತದಲ್ಲಿ ಶ್ವೇತಾ ಪ್ರಥಮ, ಜಿನಲಕ್ಷ್ಮಿ ದ್ವಿತೀಯ; ಎತ್ತರ ಜಿಗಿತದಲ್ಲಿ ಯೋಗಿನಿ ಗಿರೀಶ್ ಹೊಸಮನಿ ಪ್ರಥಮ, ಚೈತ್ರಾ ದ್ವಿತೀಯ; ತ್ರಿವಿಧ ಜಿಗಿತದಲ್ಲಿ ರಕ್ಷಿತಾ ಪ್ರಥಮ; ಚಿನ್ಮಯಿ ಗುಂಡು ಎಸೆತದಲ್ಲಿ ಜಿನಲಕ್ಷ್ಮಿ ಪ್ರಥಮ; ಚಕ್ರ ಎಸೆತದಲ್ಲಿ ಸತ್ಯಪ್ರಿಯ ಪ್ರಥಮ; ಪಲ್ಲವಿ ದ್ವಿತಿಯ, ಭರ್ಜಿ ಎಸೆತದಲ್ಲಿ ಜಿನಲಕ್ಷ್ಮಿ ಪ್ರಥಮ ಸ್ಥಾನ ಗಳಿಸಿ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಶುಭಶ್ರೀ ಬಾಲಕಿಯರ ವಿಭಾಗದ ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

□

ಜಿಲ್ಲಾ ಮಟ್ಟಕ್ಕೆ ಸುತ್ತೂರು ಜೆಎಸ್ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳು



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ನಂಜನಗೂಡಿನ ತಾಲ್ಲೂಕು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಬಾಲಕ ಮತ್ತು ಬಾಲಕಿಯರ ವಿಭಾಗದ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿ ಸುತ್ತೂರು ಜೆಎಸ್ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಬಾಲಕಿಯರ ವಿಭಾಗದ ಖೋಖೋ ಹಾಗೂ ಥ್ರೋಬಾಲ್‌ನಲ್ಲಿ ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿಭಾಗೀಯ ಮಟ್ಟಕ್ಕೆ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳು



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ ಹಾಗೂ ಯೋಗಾಸನ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳೊಂದಿಗೆ ಮುಖ್ಯೋಪಾಧ್ಯಾಯರುಗಳು ಮತ್ತು ದೈಹಿಕ ಶಿಕ್ಷಣ ಶಿಕ್ಷಕರುಗಳಿದ್ದಾರೆ.

ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ ಕ್ರೀಡಾಪಟುಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಮೈಸೂರಿನ ವಿಶ್ವವಿದ್ಯಾನಿಲಯದ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಮೈಸೂರಿನ ವಿಜಯವಿಠಲ ಶಾಲೆಯಲ್ಲಿ ಆಯೋಜಿಸಿದ್ದ ತಾಳಬದ್ಧ ಯೋಗಾಸನ ಸ್ಪರ್ಧೆಯಲ್ಲಿ ಮನೋಜ್ ಮತ್ತು ಸೃಜನ್, ಕಲಾತ್ಮಕ ಯೋಗಾಸನ ಸ್ಪರ್ಧೆಯಲ್ಲಿ ಸ್ಫೂರ್ತಿ ಮತ್ತು ಸನ್ಮಾ ಪ್ರಥಮ ಸ್ಥಾನ ಪಡೆದು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಜೆಎಸ್‌ಎಸ್ ವಾರ್ತಾಪತ್ರಕ್ಕೆ ಕಳುಹಿಸುವ
ವರದಿಗಳು ಮತ್ತು ಛಾಯಾಚಿತ್ರಗಳನ್ನು ಕಡ್ಡಾಯವಾಗಿ
varthapathra@jssonline.org ಗೆ ಮಾತ್ರ ಕಳುಹಿಸುವುದು.
ಬೇರೆ ಯಾವುದೇ ಇಮೇಲ್‌ಗೆ ಕಳುಹಿಸಬಾರದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
ದೂರವಾಣಿ : 9663151846, 9480771995
8861654566, 9964161363

ಜೆಎಸ್ಎಸ್ ಸಂಸ್ಥೆಗಳಲ್ಲಿ ಶ್ರೀ ರಾಜೇಂದ್ರ ಶ್ರೀಗಳವರ 111ನೇ ಜಯಂತಿ
ರಾಜೇಂದ್ರ ಶ್ರೀಗಳು ನಾಡಿನ ಸರ್ವತೋಮುಖ ಏಳಿಗೆಗೆ ಶ್ರಮಿಸಿದವರು



ಮೈಸೂರಿನ ಜೆಎಸ್ಎಸ್ ಮಹಾವಿದ್ಯಾಪೀಠದಲ್ಲಿ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಲಾಯಿತು. ಶ್ರೀ ಕೆ.ಆರ್. ಸಂತಾನಂ, ಶ್ರೀ ಜಯರಾಜೇಂದ್ರರು, ಶ್ರೀ ಎಸ್.ಪಿ. ಮಂಜುನಾಥ್, ಡಾ. ಸಿ.ಜಿ. ಬೆಟಸೂರಮಠ, ಡಾ. ಕೆ. ಅನಂತರಾಮು, ಶ್ರೀ ಶಂಕರಪ್ಪ, ಶ್ರೀ ರೇವಣ್ಣಸ್ವಾಮಿ ಮೊದಲಾದವರುಗಳಿದ್ದಾರೆ. (26 ಸೆಪ್ಟೆಂಬರ್ 2026)

ರಾಜೇಂದ್ರ ಶ್ರೀಗಳು ನಾಡಿನ ಸರ್ವತೋಮುಖ ಏಳಿಗೆಗೆ ಶ್ರಮಿಸಿದವರು ಎಂದು ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಹೇಳಿದರು.

ಮೈಸೂರಿನ ಜೆಎಸ್ಎಸ್ ಮಹಾವಿದ್ಯಾಪೀಠದಲ್ಲಿ ದಿನಾಂಕ 26.9.2026 ರಂದು ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿಯಲ್ಲಿ ಮಾತನಾಡುತ್ತ ಅವರು ತಿಳಿಸಿದರು. ರಾಜೇಂದ್ರ ಶ್ರೀಗಳು ಶಿವಾಂಶ ಸಂಭೂತರು ಹಾಗೂ ಸಿದ್ಧಿಪುರುಷರು. ಸಹನಶೀಲತೆ, ದೂರದರ್ಶಿತ್ವ, ವಿಶಾಲ ಮನೋಧರ್ಮ ಮತ್ತು ರಾಷ್ಟ್ರಪ್ರೇಮದಂತಹ ಸದ್ಗುಣಗಳು ಅವರಿಗೆ ಬಾಲ್ಯದಿಂದಲೇ ಸಿದ್ಧಿಸಿದ್ದವು. ಅವರೊಬ್ಬ ಶ್ರೇಷ್ಠ ಕರ್ಮಯೋಗಿಗಳು. ಮಾಡಿಯೂ ಮಾಡದ ಭಾವ ಅವರಲ್ಲಿತ್ತು. ಎಲೆಮರೆಯ ಕಾಯಿಯಂತೆ ಅವರು ಅನೇಕ ಕಾರ್ಯಗಳನ್ನು ಮಾಡಿದರು. ಶ್ರೀಮಠಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿದರು. ಅವರ ವಿಚಾರಗಳು ದೇಶೋವಿಶಾಲವಾದುವು. ಅನ್ನ, ಜ್ಞಾನ, ಆರೋಗ್ಯ, ಧರ್ಮ ಮತ್ತು ಆತ್ಮದಾಸೋಹಗಳ ಮೂಲಕ ಅವರು ಪಂಚ ದಾಸೋಹಗಳಿಗೆ ಹೆಚ್ಚಿನ ಒತ್ತು ನೀಡಿದ್ದರು.

ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಸಹಸ್ರಾರು ಜನರು ಬದುಕು ಕಟ್ಟಿಕೊಳ್ಳಲು ನೆರವಾದರು. ಜಗತ್ತಿನ ಭೂಪಟದಲ್ಲಿ ಸುತ್ತೂರಿಗೆ ಸ್ಥಾನ ಸಿಗುವಂತೆ ಮಾಡಿದರು. ಇವನಾರವ ಇವನಾರವ ಎನ್ನದೆ ಇವ ನಮ್ಮವ ಇವ ನಮ್ಮವನೆಂದು ಸರ್ವರ ಉದ್ಧಾರಕ್ಕೆ ಕಾರಣರಾದರು. ಇವೆ ಪರಮಪೂಜ್ಯ ದೇಶಿಕೇಂದ್ರ ಶ್ರೀಗಳು ಅವರ ಕಾರ್ಯಗಳನ್ನು ಸಾವಿರ ಪಟ್ಟು ಹೆಚ್ಚಿಸಿದ್ದಾರೆ ಎಂದು ಹೇಳಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು, ರಾಜೇಂದ್ರ ಶ್ರೀಗಳು ಅಪರೂಪದ ಜೀವನ ನಡೆಸಿದ ಸಿದ್ಧಿಪುರುಷರು. ಅವರ ಸಿದ್ಧಿಸಾಧನೆಗಳು ಉನ್ನತವಾದುವು. 1954ರಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠವನ್ನು ಸ್ಥಾಪಿಸಿ ಅದರ ಸೇವಾಕಾರ್ಯಗಳನ್ನು ವಿಸ್ತರಿಸಿ ಸಂಸ್ಥೆಯು ಬೃಹದಾಕಾರವಾಗಿ ಬೆಳೆಯಲು ಕಾರಣಕರ್ತರಾದರು. ಮಾನವನಾಗಿ ಹುಟ್ಟುವುದೇ ಒಂದು ಪುಣ್ಯ, ಅದರಲ್ಲಿಯೂ ಮಾನವನಾಗಿ ಹುಟ್ಟಿದ ಮೇಲೆ ಸೇವೆಯನ್ನು ಮಾಡುವ ಅವಕಾಶ ದೊರಕುವುದು ಸೌಭಾಗ್ಯ ಎಂದು ರಾಜೇಂದ್ರ ಶ್ರೀಗಳು ಹೇಳುತ್ತಿದ್ದರು ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರನ್ನು ಸನ್ಮಾನಿಸಲಾಯಿತು.

ಡಾ. ಶ್ರೀ ಜಯರಾಜೇಂದ್ರರು, ಶ್ರೀ ಎಸ್.ಪಿ. ಮಂಜುನಾಥ್‌ರವರು, ಶ್ರೀ ಎಸ್. ಶಿವಕುಮಾರಸ್ವಾಮಿಯವರು ಹಾಗೂ ಮಹಾವಿದ್ಯಾಪೀಠದ ವಿವಿಧ ವಿಭಾಗಗಳ ಮುಖ್ಯಸ್ಥರು ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. ಶ್ರೀ ಶಂಕರಪ್ಪನವರು ಸ್ವಾಗತಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನರವರು ಅತಿಥಿಗಳನ್ನು ಪರಿಚಯಿಸಿದರು. ಶ್ರೀಮತಿ ಗೀತಾ ಮತ್ತು ತಂಡದವರು ಪ್ರಾರ್ಥನೆ ಮಾಡಿದರು. ಶ್ರೀ ಬಿ. ನಿರಂಜನಮೂರ್ತಿ ವಂದಿಸಿದರು.

ಜೆಎಸ್ಎಸ್ ಜನಶಿಕ್ಷಣ ಸಂಸ್ಥೆ, ಬೆಂಗಳೂರು

ಬೆಂಗಳೂರಿನ ಜೆಎಸ್ಎಸ್ ಜನಶಿಕ್ಷಣ ಸಂಸ್ಥೆಯ ವತಿಯಿಂದ ದಿನಾಂಕ 26.9.2026ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು. ಜೆಎಸ್ಎಸ್ ಜನ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಎ.ಸಿ. ಷಡಾಕ್ಷರಿಯವರು ಕಾರ್ಯಕ್ರಮ ಉದ್ಘಾಟಿಸಿ, ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವದಲ್ಲಿ ಉದ್ಘಾಟಕನಾಗಿ ಭಾಗವಹಿಸಿರುವುದು ನನ್ನ ಪುಣ್ಯವೇ ಸರಿ. ಸಮಾಜಕ್ಕೆ ಶ್ರೀಗಳು ನೀಡಿರುವ ಕೊಡುಗೆ ಅಪಾರ. ಶ್ರೀಗಳು ನಮ್ಮೊಡನೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಇದ್ದಾರೆ ಎಂಬುದು ನನ್ನ ಅಚಲವಾದ ನಂಬಿಕೆ. ಮಾತೃಹೃದಯಿಗಳಾದ ಶ್ರೀಗಳವರು ಗ್ರಾಮಾಂತರ ವಿದ್ಯಾರ್ಥಿಗಳಿಗೆ ತೋರಿಸಿದ ಪ್ರೀತಿ, ಕರುಣೆ, ಮಮಕಾರ ಪ್ರತಿ ಪ್ರಜೆಯು ಕಲಿಯಬೇಕಾಗಿರುತ್ತದೆ. 1954ರಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠವನ್ನು ಮೈಸೂರಿನಲ್ಲಿ ಪ್ರಾರಂಭಿಸಿ, ರಾಷ್ಟ್ರದ ಕೀರ್ತಿಯನ್ನು ಭಾನೆತ್ತರಕ್ಕೆ ಏರಿಸಿದ ಕೀರ್ತಿ ಪರಮಪೂಜ್ಯರಿಗೆ ಸಲ್ಲಬೇಕು. ಇಂದಿನ ಗುರುಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ರಾಜೇಂದ್ರ ಶ್ರೀಗಳ ಕರಕಮಲ ಸಂಜಾತರಾಗಿರುವವರು, ಪೂಜ್ಯ ರಾಜೇಂದ್ರ ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿ ಇಂದು ಜೆಎಸ್ಎಸ್ ಶಿಕ್ಷಣ ಸಂಸ್ಥೆಯನ್ನು ಪ್ರಪಂಚ ತಿರುಗಿ ನೋಡುವಂತೆ ಬೆಳೆಸಿದ್ದಾರೆ. ಜೆಎಸ್ಎಸ್ ಜನಶಿಕ್ಷಣ ಸಂಸ್ಥೆ ಇಲ್ಲಿ ನಡೆಯುವ ಪ್ರತಿಯೊಂದು ವೃತ್ತಿ ತರಬೇತಿಯಲ್ಲೂ



ಅನಕ್ಷರಸ್ಥರು, ಅವಕಾಶ ವಂಚಿತರು, ಅದರಲ್ಲೂ ಮಹಿಳೆಯರಿಗೆ ಅವರ ಕುಟುಂಬಕ್ಕೆ ಆಸರೆಯಾಗಲು ಅನುವು ಮಾಡಿಕೊಟ್ಟಿದೆ. 'ಕೌಶಲ್ ಭಾರತ್ ಕುಶಲ್ ಭಾರತ್' ಎಂಬಂತೆ ಕೌಶಲ್ಯವು ಎಂದೂ ವ್ಯರ್ಥವಾಗುವುದಿಲ್ಲ, ಮನುಷ್ಯರು ಸಮಾಜದಲ್ಲಿ ಆರ್ಥಿಕ ಸಾಮಾಜಿಕ ನೆಲೆಗಟ್ಟನ್ನು ಕಾಣಲು ಈ ಕೌಶಲ್ಯಗಳು ಬಹಳ ಉಪಯೋಗಕಾರಿ, ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೇಳಿಕೊಳ್ಳುತ್ತೇನೆ ಎಂದರು.

ಶೈಕ್ಷಣಿಕ ಸಮನ್ವಯಾಧಿಕಾರಿಗಳಾದ ಶ್ರೀ ಹೆಚ್.ಎಸ್ ನಾಗರಾಜುರವರು, ಪೂಜ್ಯ ರಾಜೇಂದ್ರ ಶ್ರೀಗಳವರು ಶರಣ ದಂಪತಿಗಳಾದ ಶ್ರೀಮತಿ ಮರಮ್ಮಣ್ಣಿ ಮತ್ತು ಶ್ರೀ ಮಲ್ಲಿಕಾರ್ಜುನ ಸ್ವಾಮಿರವರ ಕಾರಣಿಕ ಪುತ್ರರಾಗಿ 29 ಆಗಸ್ಟ್ 1916 ರಲ್ಲಿ ಜನಿಸಿದರು. ಪೂಜ್ಯ ಶ್ರೀಗಳು ತಮ್ಮ ಪ್ರೀತಿ ವಾತ್ಸಲ್ಯದಿಂದ ನಾಸ್ತಿಕರನ್ನೂ ಆಸ್ತಿಕರನ್ನಾಗಿಸುವ ಅದ್ಭುತ ದಿವ್ಯ ಶಕ್ತಿಯನ್ನು ಹೊಂದಿದ್ದರು. ಚರಾಚರ ವಸ್ತುಗಳಲ್ಲಿಯೂ ಕೂಡ ಮಾನವೀಯತೆಯನ್ನು ಕಂಡುಕೊಂಡವರು ಹಾಗೂ ಎಲ್ಲ ಶಿಷ್ಯರ ನಡೆನುಡಿಗಳನ್ನೂ ಮೌನವಾಗಿ ತಿದ್ದುವಂತಹ ಮಹಾ ಕುಶಲಮತಿಗಳಾಗಿದ್ದರು. ಇಂತಹ ಹತ್ತು ಹಲವಾರು ನಿತ್ಯಸತ್ಯ ಘಟನೆಗಳನ್ನು ರಾಜೇಂದ್ರ ಶ್ರೀಗಳ ಬದುಕಿನ ಹಾದಿಯಲ್ಲಿ ಕಾಣಬಹುದಾಗಿದೆ ಎಂದರು.

ಬೆಂಗಳೂರಿನ ಪರಿಕ್ರಮ ಶಾಲೆಯ ಶೈಕ್ಷಣಿಕ ಸಮನ್ವಯ ಅಧಿಕಾರಿಗಳಾದ ಶ್ರೀಮತಿ ಕಲ್ಪನಾಂಗ್‌ರವರು ಪರಿಕ್ರಮ ಶಾಲೆ ಆರಂಭಿಸುವ ಮೊದಲು ಜೆಎಸ್ಎಸ್ ಶಿಕ್ಷಣಸಂಸ್ಥೆಗೆ ಭೇಟಿ ನೀಡಲಾಗಿತ್ತು. ಅಲ್ಲಿ ವೃತ್ತಿ ತರಬೇತಿ ಆಯೋಜಿಸುತ್ತಿರುವುದನ್ನು ನೋಡಿ ಈ ಸಂಸ್ಥೆಯ ಬಗ್ಗೆ ಬಹಳ ಹೆಮ್ಮೆ ಎನಿಸಿತು. ಇದೀಗ ಜೆಎಸ್ಎಸ್ ಜನಶಿಕ್ಷಣ ಸಂಸ್ಥೆಯೊಡನೆ ವೃತ್ತಿತರಬೇತಿಯ ಸಹಭಾಗಿತ್ವ ಹೊಂದಿ ಅವಶ್ಯಕತೆ ಇರುವ ಮಹಿಳೆಯರಿಗೆ ವೃತ್ತಿ ತರಬೇತಿ ನೀಡುತ್ತಿದ್ದೇವೆ. ಪೂಜ್ಯ ರಾಜೇಂದ್ರ ಶ್ರೀಗಳರವರ ಸಾಧನೆ ನಮಗೆ ಸ್ಫೂರ್ತಿದಾಯಕ ಎಂದರು.

ಶ್ರೀಮತಿ ಪ್ರಮೀಳ ಗರಡಿಯವರು ಪೂಜ್ಯ ರಾಜೇಂದ್ರ ಶ್ರೀಗಳವರ ಮಾರ್ಗದರ್ಶನದಂತೆ ಇಂದಿಗೂ ನಾವೆಲ್ಲರೂ ನಡೆಯುತ್ತಿದ್ದೇವೆ. ಜೆಎಸ್‌ಎಸ್ ಜನಶಿಕ್ಷಣ ಸಂಸ್ಥೆಯು ಆಯೋಜಿಸಿರುವ ಅನೇಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಎಲ್ಲಾ ಕಾರ್ಯಕ್ರಮದಲ್ಲಿ ಸೃಜನಶೀಲತೆ ಇರುವುದು ಹೆಮ್ಮೆಯ ವಿಚಾರ. ಪ್ರತಿಯೊಬ್ಬರು ಇದರ ಸದುಪಯೋಗ ಪಡೆಯಬೇಕು. ಪೂಜ್ಯ ರಾಜೇಂದ್ರ ಶ್ರೀಗಳವರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯಬೇಕು ಎಂದರು.

ಬೆಂಗಳೂರಿನ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಶ್ರೀಮತಿ ಡಿ.ಎಂ. ಶಶಿಕಲಾರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಸ್ಥೆಯ ತರಬೇತಿ ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಶ್ರೀಮತಿ ಎಸ್.ಎಸ್. ಅರುಣಾ ಸ್ವಾಗತಿಸಿದರು. ಶ್ರೀಮತಿ ಸವಿತಾ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಮುಖ್ಯಸ್ಥರು, ಸಿಬ್ಬಂದಿ ವರ್ಗದವರು, ಫಲಾನುಭವಿಗಳು ಭಾಗವಹಿಸಿದ್ದರು.

ಅನ್ನ ಮತ್ತು ಅಕ್ಷರ ದಾಸೋಹದ ಹರಿಕಾರರು ರಾಜೇಂದ್ರ ಶ್ರೀಗಳು

'ಅನ್ನ ಮತ್ತು ಅಕ್ಷರ ದಾಸೋಹದ ಹರಿಕಾರರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು' ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಡಿ.ಎ. ಶಂಕರ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದಿನಾಂಕ 26.9.2026 ರಂದು ನಡೆದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದಲ್ಲಿ ಅವರು ನುಡಿನಮನ ಸಲ್ಲಿಸಿದರು. ರಾಜೇಂದ್ರ ಶ್ರೀಗಳು ಜನರ ಬಡತನ ಮತ್ತು ಆಹಾರದ ಕೊರತೆಯನ್ನು ಅರಿತಿದ್ದರು. ಪೌಷ್ಟಿಕಾಂಶದ ಕೊರತೆ ಇದ್ದರೆ ಯಾವ ವೈದ್ಯರು ಸಹ ಏನು ಮಾಡಲು ಸಾಧ್ಯವಿಲ್ಲ, ಹಾಗಾಗಿ ಬಡವರು ವಿದ್ಯಾವಂತರಾಗಬೇಕು ಅವರ ಹಸಿವನ್ನು ನೀಗಿಸಬೇಕು ಎಂದು ಅರಿತು ವಿದ್ಯಾರ್ಥಿನಿಲಯಗಳು ಮತ್ತು ಪ್ರಸಾದ ನಿಲಯಗಳನ್ನು ಸ್ಥಾಪಿಸಿ ಗ್ರಾಮೀಣ ಭಾಗದ ಜನರಿಗೆ ದಾರಿದೀಪವಾಗಿದ್ದರು. ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಅನ್ನ ದಾಸೋಹ ಅಕ್ಷರ ದಾಸೋಹ ನೀಡಿದ ಪೂಜ್ಯರ ಸಮಾಜ ಸೇವೆಯನ್ನು ಮನಗಂಡು ಇಂತಹ ಯಾವ ಕಾರ್ಯಕ್ರಮಕ್ಕೂ ಹೋಗದಿದ್ದ ರಾಷ್ಟ್ರಕವಿ ಕುವೆಂಪುರವರು ಶ್ರೀಗಳ ಜಯಂತಿಗೆ ಒಮ್ಮೆ ಬಂದಿದ್ದರು. ಪೂಜ್ಯ ರಾಜೇಂದ್ರ ಶ್ರೀಗಳು ಹಾಕಿದ ಅಡಿಪಾಯದಿಂದ ಇಂದು ಜೆಎಸ್‌ಎಸ್ ಸಂಸ್ಥೆ ಜಗದಗಲ ಮುಗಿದಗಲಗಳವರೆಗೆ ವಿಸ್ತರಿಸಿದೆ ಎಂದರು.

ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಎಸ್. ಚಿದಂಬರರವರು, ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ಶಿಕ್ಷಣದ ಜೊತೆಗೆ ದಾಸೋಹವನ್ನು ಉಣಬಡಿಸಿದ ಮಹಾನ್ ಪುರುಷ ರಾಜೇಂದ್ರ ಶ್ರೀಗಳು. ಕೇವಲ ಒಂದು ಸಮುದಾಯಕ್ಕೆ ಮಾತ್ರ ಶಿಕ್ಷಣ ಮತ್ತು ವಸತಿನಿಲಯಗಳನ್ನು ನೀಡದೇ ಸರ್ವರಿಗೂ ಸೌಲಭ್ಯವನ್ನು ನೀಡಿ ಸಮಸಮಾಜದ ನಿರ್ಮಾಣಕ್ಕೆ ಕಾರಣರಾದರು. ಅಂದು ಅವರು ಮಾಡಿದ ಸೇವೆ ಮತ್ತು ಕಾಯಕದಿಂದ ಇಂದು ಜೆಎಸ್‌ಎಸ್ ಸಂಸ್ಥೆ ದೊಡ್ಡ ಆಲದ ಮರವಾಗಿ ಬೆಳೆದು ಲಕ್ಷಾಂತರ ಜನರ ಬದುಕಿಗೆ ಆಶ್ರಯವಾಗಿದೆ. ರಾಜೇಂದ್ರ ಶ್ರೀಗಳು ಮಾಡಿದ ಕಾಯಕ ಮತ್ತು ಸಮಾಜಸೇವೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡು ಅವರ ಆದರ್ಶಗಳನ್ನು ಮತ್ತು ಅವರ



ಕಾಯಕನಿಷ್ಠೆಯನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಾವು ನೆಮ್ಮದಿಯಿಂದ ಬದುಕಬಹುದು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು, ಮಠ ಮಾನ್ಯಗಳು ಪೂಜೆ ಪುನಸ್ಕಾರಗಳಿಗೆ ಸೀಮಿತವಾಗದೆ ಸಮಾಜ ಮತ್ತು ಧಾರ್ಮಿಕ ಸುಧಾರಣೆಗೆ ತಮ್ಮನ್ನು ಸಮರ್ಪಿಸಿಕೊಂಡಿವೆ. ಕಷ್ಟದಲ್ಲಿ ಬೆಳೆದು ಸಾಧನೆಗೈದ ಮಹಾನ್ ತ್ಯಾಗಿಗಳು ರಾಜೇಂದ್ರ ಶ್ರೀಗಳು. ಏನು ಇಲ್ಲದ ಸಂದರ್ಭದಲ್ಲಿ ವಿದ್ಯಾಸಂಸ್ಥೆಗಳನ್ನು ಕಟ್ಟಿದರು. ಅಂದು ಅವರು ಮಾಡಿದ ಸೇವೆ ಮತ್ತು ಕಾಯಕದಿಂದ ಇಂದು ಜೆಎಸ್ಎಸ್ ಸಂಸ್ಥೆ ದೇಶವಿದೇಶಗಳಲ್ಲಿ 386 ಸಂಸ್ಥೆಗಳನ್ನು ಹೊಂದಿ ದೊಡ್ಡ ಆಲದಮರವಾಗಿ ಬೆಳೆದು ಲಕ್ಷಾಂತರ ಜನರ ಬದುಕಿಗೆ ಆಶ್ರಯವಾಗಿದೆ. ಅಷ್ಟೆ ಅಲ್ಲ ಅವರ ಸೇವೆ ಆರೋಗ್ಯ ಕ್ಷೇತ್ರಕ್ಕೂ ವಿಸ್ತರಿಸಿದ್ದು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪ್ರಾರಂಭವಾದ ಆಸ್ಪತ್ರೆ ಇಂದು ಹೆಮ್ಮರವಾಗಿ ಬೆಳೆದು ರೋಗಿಗಳ ಸೇವೆಗೆ ಮುಡಿಪಾಗಿದೆ. ಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರ ತ್ಯಾಗ, ಕರುಣೆ ಮತ್ತು ಸಮಾಜ ಸೇವೆ ಇಂದಿಗೂ ಕೋಟ್ಯಂತರ ಜನರಿಗೆ ಪ್ರೇರಣೆಯಾಗಿದೆ ಎಂದರು.

ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು, ಪೂಜ್ಯ ರಾಜೇಂದ್ರ ಶ್ರೀಗಳು ಲೋಕ ಕಲ್ಯಾಣಕ್ಕಾಗಿ ತಮ್ಮ ತಪಶ್ಶಕ್ತಿಯನ್ನು ಧಾರೆ ಎರೆದು ಲಕ್ಷಾಂತರ ಜನರಿಗೆ ಜ್ಞಾನಾನ್ನ ದಾಸೋಹ ನೀಡಿದವರು. ಶ್ರೀಗಳು ತಮ್ಮ ಜೀವಿತಾವಧಿಯನ್ನು ಶ್ರೀಗಂಧದಂತೆ ಸಮಾಜಕ್ಕೆ ಬಳಸಿದರು ಎಂದರು.

ಜಯಂತಿಯ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಆಸರೆ ಗ್ರೂಪ್ ವತಿಯಿಂದ ವಿಶೇಷಚೇತನರಿಗೆ ಉಚಿತವಾಗಿ ಕೃತಕ ಅಂಗಗಳನ್ನು ವಿತರಿಸಲಾಯಿತು. ಆಸರೆ ಗ್ರೂಪ್‌ನ ಶ್ರೀ ಜಿ.ಸಿ. ನಿತಿನ್, ಆಸ್ಪತ್ರೆಯ ಸಂದರ್ಶಕ ಸಮಿತಿ ಸದಸ್ಯರುಗಳಾದ ಲಯನ್ ಶ್ರೀ ಎಂ.ಎನ್. ಜೈಪ್ರಕಾಶ್, ದುಗ್ಗಹಟ್ಟಿ ಶ್ರೀ ಮಲ್ಲಿಕಾರ್ಜುನಸ್ವಾಮಿ, ಜೆಎಸ್ಎಸ್ ಸಂಸ್ಥೆಗಳ ಅಧಿಕಾರಿಗಳು, ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರುಗಳು ಹಾಗೂ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು.

ಜೆಎಸ್ಎಸ್ ಸಂಸ್ಥೆಗಳು, ಸುತ್ತೂರು



ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಜೆಎಸ್ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಬಿ.ಜಿ. ಸಂಗಮೇಶ್ವರರವರು ಮಾತನಾಡಿದರು. ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್‌ರವರು, ಶ್ರೀ ಪಿ. ನಿರಂಜನ್, ಶ್ರೀ ಕೆ.ಪಿ. ಸಿದ್ದಪ್ಪಾಜಿ, ಸಂಸ್ಥೆಯ ಮುಖ್ಯಸ್ಥರುಗಳು, ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳಿದ್ದಾರೆ. (12.9.2026)

ಪರಮಪೂಜ್ಯ ಜಗದ್ಗುರು ಡಾ. ಶ್ರೀ ರಾಜೇಂದ್ರ ಶ್ರೀಗಳವರ ಅನನ್ಯ ಸೇವೆಗೆ ರಾಷ್ಟ್ರೀಯ ಪುರಸ್ಕಾರ ಸಲ್ಲಬೇಕು ಎಂದು ಜೆಎಸ್ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಬಿ.ಜಿ. ಸಂಗಮೇಶ್ವರರವರು ಹೇಳಿದರು.

ಸುತ್ತೂರಿನ ಜೆಎಸ್ಎಸ್ ಸಂಸ್ಥೆಗಳ ವತಿಯಿಂದ ದಿನಾಂಕ 12.9.2026ರಂದು ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆಯಲ್ಲಿ ಅವರು ನುಡಿನಮನ ಸಲ್ಲಿಸಿದರು. ಪೂಜ್ಯ ರಾಜೇಂದ್ರ ಶ್ರೀಗಳು ಮಾತೃ ಹೃದಯಿಗಳು, ದೀನ ದುರ್ಬಲರ ಏಳಿಗೆಗಾಗಿ ತಮ್ಮಜೀವನವನ್ನೇ ಮುಡುಪಾಗಿಟ್ಟವರು. ಅನೇಕ ಗ್ರಾಮೀಣ ಪ್ರತಿಭೆಗಳು ಅನಾವರಣಗೊಳ್ಳಲು ಕಾರಣೀಭೂತರಾದವರು. ನಾಡಿನಾದ್ಯಂತ ಶಿಕ್ಷಣಸಂಸ್ಥೆಗಳನ್ನು ತೆರೆದು ಜ್ಞಾನಾನ್ನದಾಸೋಹವನ್ನು ನೀಡಿ ಸಮಸಮಾಜವನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ವಿದ್ಯಾರ್ಥಿಗಳಿಗೆ ಜ್ಞಾನ ತಿಳುವಳಿಕೆಗಳನ್ನು ನೀಡುವುದರ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಸಬೇಕು. ಅದು ಶಿಕ್ಷಕರಿಂದ ಮಾತ್ರ ಸಾಧ್ಯ ಎಂದು ನುಡಿದರು.

ಚನ್ನಗಿರಿಯ ಪ್ರಧಾನ ದಿವಾನಿ ನ್ಯಾಯಾಧೀಶರು ಹಾಗೂ ಸುತ್ತೂರು ಜೆಎಸ್ಎಸ್ ವಸತಿ ಶಾಲೆಯ ಹಿರಿಯ ವಿದ್ಯಾರ್ಥಿಗಳಾದ ಆದ ಶ್ರೀ ಕೆ.ಪಿ. ಸಿದ್ದಪ್ಪಾಜಿರವರು, ವಿದ್ಯೆ, ವಿನಯ, ಸನ್ನಡತೆಗಳು ವಿದ್ಯಾರ್ಥಿ ದೆಸೆಯಲ್ಲಿಯೇ ಮೈಗೂಡಬೇಕು. ಕಲಿತ ವಿದ್ಯೆಯು ಸಮಾಜದ ಏಳಿಗೆಗೆ

ಸದುಪಯೋಗವಾಗಬೇಕು. ಆಗ ಬೋಧಿಸಿದ ಶಿಕ್ಷಕರ ಶ್ರಮ ಸಾರ್ಥಕವಾಗುತ್ತದೆ. ಶಿಕ್ಷಕ ವೃತ್ತಿಯು ಅತ್ಯಂತ ಗೌರವಯುತ ವೃತ್ತಿಯಾಗಿದ್ದು, ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಅಪಾರವಾಗಿದೆ ಎಂದು ತಿಳಿಸಿದರು.

ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಸುತ್ತೂರು ಶ್ರೀಮಠಕ್ಕೆ ರಾಷ್ಟ್ರದ ಅನೇಕ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ಸಾಹಿತಿಗಳು, ವಿಜ್ಞಾನಿಗಳು ಸೇರಿದಂತೆ ಅನೇಕ ಗಣ್ಯರು ಭೇಟಿ ನೀಡಿದ್ದಾರೆ. ಋಷಿಮುನಿಗಳು, ಮಠಾಧಿಪತಿಗಳು ನಡೆದಾಡಿದ ಪುಣ್ಯಭೂಮಿ ಇದು. ಶ್ರೀಮಠದ ಕಾರ್ಯವ್ಯಾಪ್ತಿಯು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಅಷ್ಟೇ ಅಲ್ಲದೇ ದೇಶವಿದೇಶಗಳಲ್ಲಿಯೂ ವ್ಯಾಪಿಸಿರುವುದು ಪ್ರಶಂಶನೀಯ. ಜೆಎಸ್ಎಸ್ ಸಂಸ್ಥೆಗಳು ಆಧುನಿಕ ಶಿಕ್ಷಣದೊಂದಿಗೆ ಸಂಸ್ಕಾರಯುತ ಶಿಕ್ಷಣವನ್ನೂ ನೀಡಿ ರಾಷ್ಟ್ರ ನಿರ್ಮಾಣಕ್ಕೆ ಸತ್ಪ್ರಜೆಗಳನ್ನು ರೂಪಿಸುತ್ತಿವೆ ಎಂದು ನುಡಿದರು.

ಪ್ರಾತಃಕಾಲ ಗದ್ದುಗೆಯಲ್ಲಿ ಪೂಜೆಸಲ್ಲಿಸಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳವರ ಮೂರ್ತಿಯನ್ನು ಶಾಲಾ ಆವರಣದಲ್ಲಿ ವಿವಿಧ ಕಲಾತಂಡಗಳೊಂದಿಗೆ ವಿಜೃಂಭಣೆಯಿಂದ ಮೆರವಣಿಗೆಯನ್ನು ನೆರವೇರಿಸಲಾಯಿತು. ಇದರಲ್ಲಿ ಆಡಳಿತಾಧಿಕಾರಿಗಳು, ಮುಖ್ಯಸ್ಥರುಗಳು ಹಾಗೂ ಸಂಸ್ಥೆಯಎಲ್ಲಾ ಸಿಬ್ಬಂದಿ ವರ್ಗದವರು ಶ್ರದ್ಧಾಭಕ್ತಿ, ಉತ್ಸಾಹದಿಂದ ಪಾಲ್ಗೊಂಡಿದ್ದರು.

ತಾಲ್ಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಶ್ರೀ ಜಿ.ಎಂ. ಷಡಕ್ಷರಿ ಹಾಗೂ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ರವಿಚಂದ್ರರವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸಂಸ್ಥೆಯ ಉದ್ಯೋಗಿಗಳಗಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಉತ್ತಮ ಸಾಧನೆಗೈದ ಶಾಲಾ ವಿದ್ಯಾರ್ಥಿಗಳಿಗೆ ವಿವಿಧ ದತ್ತಿಗಳ ವತಿಯಿಂದ ಬಹುಮಾನಗಳನ್ನು ವಿತರಿಸಲಾಯಿತು.

ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಉದ್ಯಮಿಗಳಾದ ಶ್ರೀ ಪಿ. ನಿರಂಜನ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ. ನವೀನ್ ನಿರಂಜನ್‌ರವರು ಉಪಸ್ಥಿತರಿದ್ದರು. ಮುಖ್ಯಸ್ಥರುಗಳಾದ ಶ್ರೀ ವೀರಭದ್ರಯ್ಯ, ಡಾ. ಜ್ಞಾನೇಶ್, ಶ್ರೀ ಜಿ. ಶಿವಮಲ್ಲು, ಶ್ರೀ ಮ.ಗು. ಬಸವಣ್ಣ, ಶ್ರೀ ಜಿ.ಎಂ. ಷಡಕ್ಷರಿ, ಶ್ರೀ ಜಿ. ಶಿವಸ್ವಾಮಿ, ಶ್ರೀ ಮಹದೇವಪ್ರಸಾದ್ ಮೊದಲಾದವರು ಉಪಸ್ಥಿತರಿದ್ದರು.

ಬಿ.ಇಡಿ. ಪ್ರಶಿಕ್ಷಣಾರ್ಥಿಗಳು ಪ್ರಾರ್ಥಿಸಿದರು. ಡಾ. ಹೆಚ್.ಎಂ. ಮಹೇಶ್ ಸ್ವಾಗತಿಸಿದರು. ಶ್ರೀ ಎಂ. ರಾಜಶೇಖರಮೂರ್ತಿಯವರು ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀಮತಿ ಕೆ.ಎಸ್. ಮಮತ ವಂದಿಸಿದರು. ಶ್ರೀ ಜಿ.ಎನ್. ಮಂಜುನಾಥ್ ನಿರೂಪಿಸಿದರು.

ಆದಿಯ ಲಿಂಗ ನಿನ್ನಿಂದ ಎನಗಾಯಿತ್ತು
ಅನಾದಿಯ ಜ್ಞಾನ ನಿನ್ನ ನೆನೆದಡೆ ಎನಗಾಯಿತ್ತು
ನಿನ್ನ ಕೃಪೆಯಿಂದ ಪ್ರಾಣಲಿಂಗವೆಂದರಿದೆನೆಂಬುದ
ನಿಮ್ಮ ಪ್ರಮಥರೇ ಬಲ್ಲರು
ಗುಹೇಶ್ವರ ಸಾಕ್ಷಿಯಾಗಿ ಸಂಗನಬಸವಣ್ಣ
ನಿನ್ನ ಪ್ರಸಾದದ ಶಿಶು ನಾನು ನೋಡಯ್ಯಾ

– ಅಲ್ಲಮಪ್ರಭುದೇವರು

ಜೆಎಸ್ಎಸ್ ಪಬ್ಲಿಕ್ ಶಾಲೆ, ಬಾಗೆ



ಬಾಗೆಯ ಜೆಎಸ್ಎಸ್ ಪಬ್ಲಿಕ್ ಶಾಲೆಯಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ 111ನೇ ಜಯಂತಿ ಮಹೋತ್ಸವವನ್ನು ದಿನಾಂಕ 5.9.2026ರಂದು ಆಚರಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಶಾಲೆಯ ಪ್ರಾಚಾರ್ಯರಾದ ಶ್ರೀ ಬಿ. ಮಧುಕುಮಾರ್‌ರವರು ಮಾತನಾಡಿ ಪೂಜ್ಯ ಶ್ರೀಗಳು ಬಸವಣ್ಣನವರ ಕಾಯಕವೇ ಕೈಲಾಸ ಎನ್ನುವ ಘೋಷವಾಕ್ಯವನ್ನು ಮೈಗೂಡಿಸಿಕೊಂಡು ಬದುಕಿದವರು. ದೇವರ ಪೂಜೆಯೊಂದಿಗೆ ಕಾಯಕದಲ್ಲಿ ನಿಷ್ಠೆ ಇದ್ದರೆ ಬದುಕು ಸಾರ್ಥಕ ಎಂಬುದನ್ನು ದೈವಾಂಶಸಂಭೂತರಾದ ಶ್ರೀಗಳಿಂದ ಕಲಿಯಬಹುದು ಎಂದು ಹೇಳಿದರು.

ಕನ್ನಡ ಶಿಕ್ಷಕರಾದ ಶ್ರೀಮತಿ ಎಂ. ರಜನಿಯವರು ಮಾತನಾಡಿ ರಾಜೇಂದ್ರ ಶ್ರೀಗಳು ಸಮಾಜದ ಏಳಿಗೆಗೆ ತಮ್ಮಜೀವನವನ್ನೇ ಮುಡುಪಾಗಿಟ್ಟಿದ್ದರು. ಸ್ನೇಹಿತರ ಜೊತೆ ಆಟವಾಡಿ ಕಾಲ ಕಳೆಯಬೇಕಾದ ಕಾಲದಲ್ಲಿ ಮಠದ ಪೀಠಾಧ್ಯಕ್ಷರಾದರು. ಓದಲಿಕ್ಕಾಗದ ಬಡತನದ ಸ್ಥಿತಿಯಲ್ಲಿದ್ದ ಹತ್ತಾರು ಮಕ್ಕಳ ಶಿಕ್ಷಣಕ್ಕೆ, ವಸತಿಗೆ ವ್ಯವಸ್ಥೆ ಕಲ್ಪಿಸಲು ಮುಂದಾಗಿ 1936 ರಲ್ಲಿ ವಸತಿ ನಿಲಯ ಸ್ಥಾಪಿಸಿದರು. ತಮ್ಮ ವಿದ್ಯಾಭ್ಯಾಸಕ್ಕೆ ಅಷ್ಟಾಗಿ ಗಮನ ಕೊಡದ ಶ್ರೀಗಳು ಓದಲು ಆಸಕ್ತರಾದವರಿಗೆ ಅನ್ನ, ಆಶ್ರಯ, ಬಟ್ಟೆ ಇತ್ಯಾದಿಗಳನ್ನು ಒದಗಿಸಿಕೊಟ್ಟರು. ಅವರ ನೆರಳಲ್ಲಿ ಬೆಳೆದ ಲಕ್ಷಾಂತರ ಮಂದಿಯ ಬಾಳು ಬೆಳಕಾಗಿದೆ. ಶ್ರೀಗಳ ದೂರದೃಷ್ಟಿಯಿಂದ 1954 ರಲ್ಲಿ ಸುತ್ತೂರಿನಲ್ಲಿ ಶಾಲೆ ಪ್ರಾರಂಭವಾಯಿತು. ಇಂದು ಶ್ರೀಮಠವು ರಾಜ್ಯ, ರಾಷ್ಟ್ರ ಮತ್ತು ವಿದೇಶಗಳಲ್ಲಿ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಿದೆ. ಇವೆಲ್ಲವೂ ಪೂಜ್ಯ ರಾಜೇಂದ್ರ ಶ್ರೀಗಳವರ ತಪಸ್ಸಿನ ಫಲ. ಶ್ರೀಗಳ ಕೆಲವು ಗುಣಗಳನ್ನಾದರೂ ನಾವೆಲ್ಲರೂ ರೂಢಿಸಿಕೊಳ್ಳೋಣ ಎಂದರು.

10ನೇ ತರಗತಿಯ ವಿದ್ಯಾರ್ಥಿಗಳಾದ ಕು. ಶೋಭಿತ ಹಾಗೂ ಕು. ಕಿಶನ್ ರಾಜೇಂದ್ರ ಶ್ರೀಗಳನ್ನು ಕುರಿತು ಮಾತನಾಡಿದರು. ಶಿಕ್ಷಕವೃಂದದವರು ಭಜನಾ ಕಾರ್ಯಕ್ರಮ ನೀಡಿದರು. ಕು. ಜಿಯಾ ಮತ್ತು ತಂಡದವರು ಭರತನಾಟ್ಯ ಪ್ರಸ್ತುತಿ ಪಡಿಸಿದರು.

ಕು. ನಿಶ್ಚಲ್ ಮತ್ತು ಕು. ಅದಿತಿ ಬರ್ತೂರ್ ಕಾರ್ಯಕ್ರಮ ನಿರೂಪಿಸಿದರು, ಕು. ಯುಕ್ತಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಕು. ಅಚಿಂತ್ಯ ಸ್ವಾಗತಿಸಿದರು ಮತ್ತು ಕು. ಜಿಷ್ಣು ವಂದಿಸಿದರು.

ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳು, ಮಾಲೂರು



ಮಾಲೂರಿನ ಜೆಎಸ್ಎಸ್ ಶಿಕ್ಷಣಸಂಸ್ಥೆಗಳಲ್ಲಿ ದಿನಾಂಕ 11.9.2026ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು.

ಗುಂಡ್ಲುಪೇಟೆಯ ಜೆಎಸ್ಎಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಹೆಚ್.ಎಸ್. ಸಿದ್ಧಮಲ್ಲಿಕಾರ್ಜುನ ಸ್ವಾಮಿಯವರು ನುಡಿನಮನ ಸಲ್ಲಿಸುತ್ತಾ ಮಾನವನಿರ್ಮಿತ ಪ್ರಪಂಚದ ಅದ್ಭುತಗಳಿಗಿಂತ ಪರಮಪೂಜ್ಯರು ನಿರ್ಮಿಸಿರುವ ಸಾಧನೆಗಳು ಅದ್ಭುತ. ಇವರ ಬದುಕಿನ ಸಂದೇಶದಿಂದ ಬೆಳಕನ್ನು ಕಂಡವರು ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಸಾವಿರಾರು ಕುಟುಂಬಗಳು. ಶ್ರೀಗಳವರ ಪಾಲಿಗೆ ವೈಯಕ್ತಿಕ ಹಾಗೂ ಸಾರ್ವಜನಿಕ ಬದುಕು ಭಿನ್ನವಾಗಿರಲಿಲ್ಲ, ಇವರಿಗೆ ಪೂರ್ವಾಶ್ರಮದಲ್ಲಿ ಬೇರೆ ಹೆಸರಿರಲಿಲ್ಲ. ಇವರು ಸರ್ವರಿಗೂ ಸಮಾನ ಸ್ಥಾನಮಾನ ನೀಡಿದರು. ಪರರಿಗಾಗಿ ಬದುಕುವುದೇ ಧರ್ಮ ಎಂಬುದನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದವರು. ಇಂತಹ ಹಿರಿಯರ ಮೌಲ್ಯಗಳನ್ನು ನಾವು ತಿಳಿಯುವುದಷ್ಟೇ ಅಲ್ಲ ಅನುಸರಿಸಿ ಅಳವಡಿಸಿಕೊಂಡರೆ ಬದುಕು ಸಾರ್ಥಕ. ಬದುಕಿನಲ್ಲಿ ಸಾಧಿಸಬೇಕೆಂದರೆ ತಾಳ್ಮೆ ಇರಬೇಕು. ಪಾಪಪ್ರಜ್ಞೆಯೇ ಪ್ರಾಯಶ್ಚಿತ್ತ ಎಂಬುದು ಶ್ರೀಗಳವರ ನಿಲುವಾಗಿತ್ತು. ಸಾಮರಸ್ಯವಿದ್ದಾಗ ಮಾತ್ರ ಯಶಸ್ಸು ಎಂಬ ದಿವ್ಯ ಸಂದೇಶವನ್ನು ನೀಡಿದರು. ಶ್ರೀಗಳವರು ಮಾನವೀಯತೆ, ಪ್ರೀತಿ, ಅನುಕಂಪಗಳ ತ್ರಿವೇಣೀ ಸಂಗಮದಂತಿದ್ದರು ಎಂದರು.

ನಗರಸಭೆ ಪೌರಾಯುಕ್ತರಾದ ಶ್ರೀ ಎಂ.ಎಸ್. ಮಹದೇವರವರು ಮಾತನಾಡುತ್ತಾ, ನಾನು ಮೈಸೂರಿನವನು, ನಾನು ಸಹ ಜೆಎಸ್ಎಸ್ ಸಂಸ್ಥೆಯ ವಿದ್ಯಾರ್ಥಿಯಾಗಿದ್ದೆ. ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಸೇವೆ ಮಾಡುವ ಅವಕಾಶ ನನಗೆ ದೊರೆತಿತ್ತು. ಈಗ ಮಾಲೂರಿಗೆ ಬಂದರೂ ಸಹ ಜೆಎಸ್ಎಸ್

ಸಂಸ್ಥೆಯಲ್ಲಿ ಭಾಗವಹಿಸುವ ಭಾಗ್ಯ ನನ್ನದಾಗಿದೆ. ಇದು ನನ್ನ ಪುಣ್ಯ. ನೀವೆಲ್ಲರೂ ಈ ಸಂಸ್ಥೆಯ ವಿದ್ಯಾರ್ಥಿಗಳಾಗಿದ್ದೀರಿ, ಕೇವಲ ವಿದ್ಯೆ ಮಾತ್ರವಲ್ಲದೆ ಶಿಸ್ತು, ಸಂಯಮ, ಸಂಸ್ಕಾರಗಳನ್ನು ಪಡೆದು, ನಿಮ್ಮೊಳಗಿನ ಅದಮ್ಯ ಚೈತನ್ಯವನ್ನು ಗುರುತಿಸಿ ಬೆಳೆಸಿಕೊಳ್ಳಬೇಕು. ಟಿವಿ ಮತ್ತು ಮೊಬೈಲ್ ಗೀಳಿನ ಕ್ಷಣಿಕ ಆನಂದದಿಂದ ಹೊರಬಂದು, ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಂಡು, ಉತ್ತಮ ಅಂಕಗಳನ್ನು ಪಡೆಯುವುದರ ಜೊತೆಗೆ ಜೀವನಕೌಶಲ್ಯಗಳನ್ನು, ನೈತಿಕ ಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು ಎಂದರು.

ದಿವ್ಯ ಸಮ್ಮುಖ ವಹಿಸಿದ್ದ ಶ್ರೀ ನಾಗಲಾಪುರ ಸಂಸ್ಥಾನಮಠದ ಶ್ರೀ ತೇಜೇಶಲಿಂಗ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮೀಜಿಯವರು ಒಬ್ಬ ವ್ಯಕ್ತಿಯಾಗಿರಲಿಲ್ಲ, ಸಮಾಜದ ಒಂದು ಶಕ್ತಿಯಾಗಿದ್ದರು. ಈ ಭೂಮಿಗೆ ಬಹಳಷ್ಟು ಜನ ಬರುತ್ತಾರೆ ಹೋಗುತ್ತಾರೆ. ಆದರೆ ಸೇವಾಮನೋಭಾವ ಹೊಂದಿರುವವರು ಬಹಳ ಕಡಿಮೆ. ಅಂತಹ ಸೇವಾಭಾಗ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅನ್ನ, ಅಕ್ಷರ, ಆಶ್ರಯ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಸಾಹಿತ್ಯ, ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳನ್ನು ಸಮಾಜಕ್ಕೆ ಕೊಟ್ಟ ಪುಣ್ಯಪುರುಷರು ಪೂಜ್ಯ ಶ್ರೀಗಳು. ಈ ಜಗತ್ತಿನಲ್ಲಿ ಅಜ್ಞಾನವನ್ನು ಹೋಗಲಾಡಿಸಿ ಜ್ಞಾನವನ್ನು ಕೊಟ್ಟು ಸಮಾಜದಲ್ಲಿ ಎಲ್ಲರನ್ನೂ ಸರಿದಾರಿಗೆ ತರುವ ಕೆಲಸವನ್ನು ಒಬ್ಬ ಗುರು ಮಾಡುತ್ತಾನೆ. ಅಂತಹ ಕೆಲಸವನ್ನು ಶ್ರೀಗಳು ಮಾಡಿದ್ದಾರೆ. ಈ ಜಗತ್ತಿನಲ್ಲಿ ಗುರುವಿನ ಸ್ಥಾನಕ್ಕೆ ಸಂಪೂರ್ಣವಾಗಿ ಅರ್ಥ ನೀಡಿ ಸಮಾಜಕ್ಕೆ, ದೇಶಕ್ಕೆ ವಿಶೇಷ ಸೇವೆಯನ್ನು ಸಲ್ಲಿಸಿರುವವರು ಶ್ರೀಗಳು. ಮೈಸೂರಿನಲ್ಲಿ ಅರಮನೆ ಎಷ್ಟು ಪ್ರಸಿದ್ಧವೋ ಅದೇ ರೀತಿ ಗುರುಮನೆಯಾದ ಸುತ್ತೂರು ಶ್ರೀಕ್ಷೇತ್ರವೂ ಕೂಡ ಸುಪ್ರಸಿದ್ಧಿಯಾಗಿದೆ. ಇಂದು ಸುತ್ತೂರು ಮಠವು 370ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಗ್ರಾಮೀಣ, ನಗರ, ರಾಜ್ಯ, ದೇಶ–ವಿದೇಶಗಳಲ್ಲಿ ನಡೆಸುತ್ತಾ ಶಿಕ್ಷಣಸೇವೆಯ ಮೂಲಕ ಸಮಾಜದಲ್ಲಿ ಎಲ್ಲರ ಗಮನ ಸೆಳೆದಿದೆ. ಸೂರ್ಯಚಂದ್ರರಿರುವವರೆಗೂ ಜಗತ್ತು ಸ್ಮರಣೆ ಮಾಡುವಂತೆ ಸಮಾಜ ಸೇವೆಗೆ ತಮ್ಮನ್ನು ತಾವು ಸಮರ್ಪಣೆ ಮಾಡಿಕೊಂಡ ಮಹಾಪುರುಷರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಜೀಯವರು. ಪೋಷಕರು ತಮ್ಮ ಮಕ್ಕಳಿಗೆ ಕಷ್ಟದ ಅನುಭವವನ್ನು ಮಾಡಿಕೊಟ್ಟು, ಅವರಿಗೆ ಸುಖದ ಬೆಲೆಯನ್ನು ಅರ್ಥ ಮಾಡಿಸಬೇಕು. ಸಿನಿಮಾ, ಮಾಲ್‌ಗಳಿಗೆ ಹೋಗುವ ಬದಲು ಧಾರ್ಮಿಕ ಕ್ಷೇತ್ರಗಳಿಗೆ ಕರೆದುಕೊಂಡು ಹೋಗಿ ಸಂಸ್ಕಾರವಂತರನ್ನಾಗಿ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪರೀಕ್ಷೆಗಳಲ್ಲಿ ಅತಿಹೆಚ್ಚು ಅಂಕಗಳಿಸಿದ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪಬ್ಲಿಕ್ ಶಾಲೆಗಳ ವಿದ್ಯಾರ್ಥಿಗಳಿಗೆ ದತ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು. ಪ್ರಭಾರ ಸಂಯೋಜನಾಧಿಕಾರಿಗಳು ಹಾಗೂ ಜೆಎಸ್ಎಸ್ ಪದವಿಪೂರ್ವ ಕಾಲೇಜು ಪ್ರಾಂಶುಪಾಲರಾದ ಶ್ರೀ ಬಿ.ಎನ್. ಚಂದ್ರಶೇಖರ್, ಜೆಎಸ್ಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಯು. ರಮ್ಯಾ, ಜೆಎಸ್ಎಸ್ ಗಾಯತ್ರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ರೆಹಾನಾ ಬೇಗಂ, ಜೆಎಸ್ಎಸ್ ಗಾಯತ್ರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಿ. ರಾಜಪ್ಪ ಮೊದಲಾದವರು ಉಪಸ್ಥಿತರಿದ್ದರು. ಸಂಗೀತ ಶಿಕ್ಷಕರಾದ ಶ್ರೀಮತಿ ವಿನೋದ ಹಾಗೂ ಪಬ್ಲಿಕ್ ಶಾಲಾ ಮಕ್ಕಳು ವಚನಗಾಯನ ನಡೆಸಿಕೊಟ್ಟರು. ಪಬ್ಲಿಕ್ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು, ಶ್ರೀ ಬಸವರಾಜಪ್ಪನವರು ಸ್ವಾಗತಿಸಿದದರು. ಶ್ರೀ ವಿಜಯಕುಮಾರ್ ವಂದಿಸಿದರು. ಶ್ರೀಮತಿ ಮಂಜುಳ ಮತ್ತು ಶ್ರೀಮತಿ ರಾಣಿ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ರಾಜೇಂದ್ರ ಶ್ರೀಗಳು ಸಮಾಜಕ್ಕೆ ಎಂದೆಂದಿಗೂ ಅರಿವಿನ ಬೆಳಕಾದವರು



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಹಾಗೂ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು ಸಂಯುಕ್ತವಾಗಿ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111 ನೆಯ ಜಯಂತಿ ಮಹೋತ್ಸವದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎ.ಪಿ. ಜ್ಞಾನಪ್ರಕಾಶ್‌ರವರು ಪೂಜ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. (17 ಸೆಪ್ಟೆಂಬರ್ 2026)

ಪರಮಪೂಜ್ಯ ರಾಜೇಂದ್ರ ಶ್ರೀಗಳು ಸಮಾಜಕ್ಕೆ ಎಂದೆಂದಿಗೂ ಅರಿವಿನ ಬೆಳಕಾದವರು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎ.ಪಿ. ಜ್ಞಾನಪ್ರಕಾಶ್‌ರವರು ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಹಾಗೂ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು ಸಂಯುಕ್ತವಾಗಿ ದಿನಾಂಕ 17.9.2026ರಂದು ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111 ನೆಯ ಜಯಂತಿ ಮಹೋತ್ಸವದಲ್ಲಿ ಅವರು ಮಾತನಾಡಿದರು. ರಾಜೇಂದ್ರ ಶ್ರೀಗಳವರು ಜನಮಾನಸದಲ್ಲಿ ಎಂದೆಂದೂ ಹಸಿರಾದವರು. ಗ್ರಾಮೀಣ ಪ್ರದೇಶದ ಬಡಮಕ್ಕಳಿಗಾಗಿ ಪ್ರಸಾದನಿಲಯಗಳನ್ನು ತೆರೆದು ಅಕ್ಷರ, ಆರೋಗ್ಯ ಮತ್ತು ಅನ್ನದಾಸೋಹ ನೀಡಿದ ಮಾನವತೆಯ ಮೂರ್ತಿಗಳು. ಜಾಗತಿಕ ಮಟ್ಟದಲ್ಲಿ ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರಕ್ಕೆ ಸುತ್ತೂರು ಶ್ರೀಮಠ ಅಪಾರವಾದ ಕೊಡುಗೆಯನ್ನು ನೀಡುತ್ತಿದೆ. ಇದೆಲ್ಲದರ ಹಿಂದಿನ ಧೀಶಕ್ತಿಯಾಗಿದ್ದವರು ಪೂಜ್ಯ ರಾಜೇಂದ್ರ ಶ್ರೀಗಳವರು ಎಂದು ಸ್ಮರಿಸಿದರು.

ಮೈಸೂರು ಮಹಾನಗರಪಾಲಿಕೆಯ ಹೆಚ್ಚುವರಿ ಆಯುಕ್ತರಾದ ಶ್ರೀಮತಿ ಬಿ.ಎನ್. ವೀಣಾರವರು, ಸಮಾಜದ ಶ್ರೇಯೋಭಿವೃದ್ಧಿಗೆ ಶ್ರಮಿಸಿದವರು ರಾಜೇಂದ್ರ ಶ್ರೀಗಳವರು. ಪರಮಪೂಜ್ಯರು ಬಸವಣ್ಣನವರ ಆಶಯದಂತೆ ಆರೋಗ್ಯಕರ ಸಮಾಜವನ್ನು ರೂಪಿಸಲು ದುಡಿದವರು. ವೃತ್ತಿಯನ್ನು ಪ್ರವೃತ್ತಿಯನ್ನಾಗಿಸಿಕೊಂಡು ದುಡಿಮೆ ಮಾಡಿದಾಗ ಸಾಧಕರಾಗುವುದಕ್ಕೆ ಸಾಧ್ಯ. ಜ್ಞಾನದ ಜೊತೆಗೆ

ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ನುಡಿನಮನ ಸಲ್ಲಿಸಿದ ಮೈಸೂರಿನ ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಕುಮಾರ ಬೆಳಲೆಯವರು, ಪರಮಪೂಜ್ಯರು ಜ್ಞಾನವನ್ನು ಪಸರಿಸಿದ ದಿವ್ಯ ಮಹಾನುಭಾವರು. ಸುತ್ತೂರು ಸಂಸ್ಥಾನ ನಾಡಿಗೆ ಕಾರುಣ್ಯವನ್ನು ದಯಪಾಲಿಸಿ, ಅಹಿಂಸೆಯನ್ನು ಕಾಪಾಡಿಕೊಂಡು ಬರುತ್ತಿದೆ. ಪರಮಪೂಜ್ಯರು ತಾಯಿ ಹೃದಯದ ತಂದೆ. ಇವ ನಮ್ಮವ ಇವ ನಮ್ಮವ ಎಂಬಂತೆ ದುರ್ಬಲರ ಬದುಕಿಗೆ ಬೆಳಕಾದವರು. ಕಾಯವನ್ನು ಸವೆಸಿ ಶಿಕ್ಷಣ ಕೇಂದ್ರಗಳು ಮತ್ತು ಪ್ರಸಾದ ನಿಲಯಗಳನ್ನು ಸ್ಥಾಪಿಸಿ ಲೋಕಕಲ್ಯಾಣಕ್ಕಾಗಿ ಶ್ರಮಿಸಿದವರು ಎಂದು ಸ್ಮರಿಸಿದರು.

ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಆರ್.ಹೆಚ್. ಪವಿತ್ರರವರು, ಶ್ರೀಗಳವರ ಜಯಂತಿ ಇಂದು ನಮಗೆಲ್ಲ ಹಬ್ಬದ ಸಡಗರವನ್ನು ತಂದಿದೆ. ಶಿಲೆ ನೂರಾರು ಪೆಟ್ಟುಗಳನ್ನು ತಿಂದ ಕಲ್ಲು ಕೊನೆಗೆ ಮೂರ್ತಿಯಾಗುವಂತೆ ವಿದ್ಯಾರ್ಥಿನಿಯರು ಎದುರಾಗುವ ಕಷ್ಟಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ ಶಿಕ್ಷಣವನ್ನು ಪಡೆದು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಹಾಗೂ ಎನ್ಎಸ್ಎಸ್, ಎನ್ಸಿಸಿಯಲ್ಲಿ ತೊಡಗಿಸಿಕೊಂಡಾಗ ಉತ್ತಮ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನೂ ಬೆಳೆಸಿಕೊಳ್ಳಬೇಕು ಎಂದರು.

ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ದತ್ತಿ ಪುರಸ್ಕಾರ ಹಾಗೂ ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು. ಪ್ರಾಚಾರ್ಯರಾದ ಡಾ. ರೇಚಣ್ಣ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಟಿ. ಗುರುಪಾದಸ್ವಾಮಿ ಉಪಸ್ಥಿತರಿದ್ದರು. ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಹಾಗೂ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಆರ್.ಎಸ್. ಕುಮಾರ್ ಸ್ವಾಗತಿಸಿದರು. ಪದವಿಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ಟಿ.ಎಸ್. ಗಿರೀಶ್ ವಂದಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.

ಜ್ಞಾನಾನ್ನಕ್ಕೆ ದಾರಿದೀಪವಾದವರು ರಾಜೇಂದ್ರ ಶ್ರೀಗಳು

ರಾಜೇಂದ್ರ ಶ್ರೀಗಳು ಬಾಲ್ಯದಿಂದಲೂ ವೈರಾಗ್ಯದ ಅಂತಃಕರಣವನ್ನು ರೂಢಿಸಿಕೊಂಡಿದ್ದರು. ತಮ್ಮ ಹನ್ನೆರಡನೆಯ ವಯಸ್ಸಿಗೆ ಹಲವು ಸಾಮಾಜಿಕ ಜವಾಬ್ದಾರಿಗಳನ್ನು ಹೊತ್ತಿದ್ದರು. ಹಸಿವು, ಬಡತನ, ಮೌಢ್ಯ ತಾಂಡವವಾಡುತ್ತಿದ್ದ ಕಾಲಘಟ್ಟದಲ್ಲಿ ಅವರು ಮಠಾಧಿಪತಿಗಳಾದರು. ಆಗ ಅವರ ಕಣ್ಣಮುಂದೆ ಇದ್ದದ್ದು ಮಕ್ಕಳ ಹೊಟ್ಟೆಯ ಮತ್ತು ಜ್ಞಾನದ ಹಸಿವನ್ನು ನೀಗಿಸುವ ಗುರಿ. ಅದನ್ನು ಅವರು ಹಲವು ನೆಲೆಗಳಲ್ಲಿ ಪರಿಹರಿಸಿ ಓದುವ ಮಕ್ಕಳ ಜ್ಞಾನಾನ್ನಕ್ಕೆ ದಾರಿದೀಪವಾದರು ಎಂದು ಸಂಸ್ಕೃತಿ ಚಿಂತಕರು ಮತ್ತು ವಿಶ್ರಾಂತ ಮುಖ್ಯ ಅಭಿಯಂತರರಾದ ಶ್ರೀ ಶಂಕರ ದೇವನೂರುರವರು ಹೇಳಿದರು.

ಮೈಸೂರು ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಆಚರಣೆಯಲ್ಲಿ ಅವರು ನುಡಿನಮನ ಸಲ್ಲಿಸುತ್ತಾ ತಿಳಿಸಿದರು. ಪೂಜ್ಯ ಡಾ.



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಆಚರಣೆಯಲ್ಲಿ ಶ್ರೀ ಶಂಕರ ದೇವನೂರುರವರು ಪೂಜ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. (19 ಸೆಪ್ಟೆಂಬರ್ 2026)

ರಾಜೇಂದ್ರ ಶ್ರೀಗಳವರ ದೂರದೃಷ್ಟಿತ್ವ ಅಪೂರ್ವವಾದದ್ದು. ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆ ಸದಾ ಕಾಲ ಸ್ಮರಣೀಯವಾದದ್ದು. ರಾಜೇಂದ್ರ ಶ್ರೀಗಳವರಿಗೆ ಪರಂಪರೆಯ ಪ್ರಜ್ಞೆ ವಿಸ್ತಾರವಾಗಿತ್ತು. ಆದ್ದರಿಂದ ಅವರ ಅಂತಃಕರಣ ಮಾತೃತ್ವದ ಶಕ್ತಿಯಿಂದ ರೂಪುಗೊಂಡಿತ್ತು. ಅಜ್ಞಾನದ ಕತ್ತಲೆಯನ್ನು ಶಿಕ್ಷಣ ಎಂಬ ಜ್ಯೋತಿಯಿಂದ ಬೆಳಗಬೇಕು ಎಂದು ಅರಿತಿದ್ದರು. ಅದಕ್ಕೆ ಪೂರ್ವದಲ್ಲಿ ಶಿಕ್ಷಣ ಪಡೆಯುವ ಜೊತೆಗೆ ಅನ್ನದ ಹಸಿವನ್ನು ನೀಗಿಸುವ ಸವಾಲು ರಾಜೇಂದ್ರ ಶ್ರೀಗಳವರಿಗಿತ್ತು. ಆದ್ದರಿಂದ ಅವರು ಎಂತಹ ತ್ಯಾಗಕ್ಕೂ ಸಿದ್ಧರಾಗಿದ್ದರು. ಸಂಪತ್ತಿಗಿಂತ ಸೇವೆ ಮುಖ್ಯ, ಅಧಿಕಾರಕ್ಕಿಂತ ಅಂತಃಕರಣ ಮುಖ್ಯ ಎಂಬುದನ್ನು ತಮ್ಮ ಬದುಕಿನ ಧ್ಯೇಯವಾಗಿಸಿಕೊಂಡಿದ್ದರು. ಎಲ್ಲವನ್ನು ಒಳಗು ಮಾಡಿಕೊಂಡು ತಾರತಮ್ಯ ರಹಿತ ಸಮಾಜವನ್ನು ಕಟ್ಟುವ ಬಯಕೆ ಅವರಿಗಿತ್ತು. ಅದಕ್ಕಾಗಿ ಎಲ್ಲರಿಗೂ ಮುಕ್ತವಾದ ಅವಕಾಶವನ್ನು ನೀಡಿ ಏಳಿಗೆಗೆ ಪ್ರೋತ್ಸಾಹಿಸಿದರು. ಈ ಮೂಲಕ ಶರಣ ಪರಂಪರೆಯಲ್ಲಿ ಶಿವಚಿಂತಕ, ಶಿವಭಕ್ತ, ಶಿವಜ್ಞಾನಿ ಎಂಬುದಕ್ಕೆ ಪ್ರತೀಕವಾದರು ಎಂದರು.

ಪ್ರಾಂಶುಪಾಲರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು, ಡಾ. ರಾಜೇಂದ್ರ ಶ್ರೀಗಳವರು ಈ ನಾಡನ್ನು ಉದ್ಧರಿಸುವುದಕ್ಕಾಗಿಯೇ ಜನ್ಮ ತಾಳಿದವರು. ಧರ್ಮ ಎಂದರೆ ಜನಸೇವೆ ಎಂಬುದು ಪೂಜ್ಯ ಡಾ. ರಾಜೇಂದ್ರ ಶ್ರೀಗಳವರ ಜೀವನದ ದೊಡ್ಡ ಸಂದೇಶವಾಗಿತ್ತು. ಬಡತನ, ಅಜ್ಞಾನ ಮತ್ತು ಅಸಮಾನತೆಗಳು ಸಮಾಜದ ಪ್ರಗತಿಗೆ ಅಡ್ಡಿಯಾಗಿದೆ ಎಂದು ಅರಿತಿದ್ದರು. ಅದಕ್ಕಾಗಿಯೇ ಧಾರ್ಮಿಕ ಸೇವೆಯನ್ನು ಶಿಕ್ಷಣ, ಅನ್ನ ದಾಸೋಹ ಮತ್ತು ಆರೋಗ್ಯ ಸೇವೆಯೊಂದಿಗೆ ಜೋಡಿಸಿದರು. ಅಕ್ಷರ ದಾಸೋಹ ಸಮಾಜಕ್ಕೆ ನೀಡಿದ ಅವರ ವಿಶೇಷ ಕೊಡುಗೆ. ಜನಸಾಮಾನ್ಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಜ್ಞಾನದ ಕೊರತೆಯೇ ಕಾರಣ ಎಂಬುದನ್ನು ಗುರುತಿಸಿದ್ದರು. ಅದಕ್ಕಾಗಿ ಅವರು ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಿ ವಿಸ್ತರಿಸಿದರು.

ಗ್ರಾಮೀಣ ಮಕ್ಕಳು ಇದರ ಅನುಕೂಲ ಪಡೆಯುವಂತೆ ಹಲವು ಬಗೆಯಲ್ಲಿ ಅವಕಾಶ ಕಲ್ಪಿಸಿದರು. ಬಡ ವಿದ್ಯಾರ್ಥಿಗಳಿಗೆ ವಸತಿ ಮತ್ತು ಆಹಾರದ ವ್ಯವಸ್ಥೆ ಕಲ್ಪಿಸುವ ಮೂಲಕ ಅವರು ಜ್ಞಾನ ದಾಸೋಹದ ಜೊತೆಗೆ ಅನ್ನ ದಾಸೋಹವನ್ನು ಕಾರ್ಯರೂಪಕ್ಕೆ ತಂದರು. ಡಾ. ರಾಜೇಂದ್ರ ಶ್ರೀಗಳವರು ಪರಂಪರೆ ಮತ್ತು ಆಧುನಿಕತೆಯ ಸಮನ್ವಯಕಾರರು ಎಂದರು.

ಡಾ. ಬಿ. ಪ್ರಭುಸ್ವಾಮಿಯವರು ಸ್ವಾಗತಿಸಿದರು. ಕು. ಗುರುಪ್ರಸಾದ್ ಮತ್ತು ಕು. ಎಸ್.ಎಸ್. ಅನು ಪ್ರಾರ್ಥಿಸಿದರು. ಜೆಎಸ್ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಹೆಚ್.ಪಿ. ಮಹಾದೇವಸ್ವಾಮಿ ವಂದಿಸಿದರು. ಡಾ. ಹೆಚ್.ಆರ್. ಮಮತಾ ಕಾರ್ಯಕ್ರಮ ನಿರೂಪಿಸಿದರು. ದತ್ತಿ ಬಹುಮಾನಗಳನ್ನು ಪಡೆದವರಿಗೆ ಮತ್ತು ಡಾ. ರಾಜೇಂದ್ರ ಶ್ರೀಗಳವರ ಸ್ಮರಣಾರ್ಥ ನಡೆದ ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 296ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಪಂ. ಅನಿರುದ್ಧ್ ಐತಾಳ್‌ರವರು ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯದಲ್ಲಿ ಪಂ. ರವೀಂದ್ರ ಯಾವಗಲ್, ಕು. ಪಂಚಮಿ, ಕು. ಆದಿತ್ಯ ಭಾಸ್ಕರ್ ಹಾಗೂ ಪಂ. ವೀರಭದ್ರಯ್ಯ ಹಿರೇಮಠರವರುಗಳಿದ್ದಾರೆ. (26 ಸೆಪ್ಟೆಂಬರ್ 2026)

ರಾಜೇಂದ್ರ ಶ್ರೀಗಳವರ ಬದುಕು ಇಡೀ ಜಗತ್ತಿಗೇ ಪ್ರೇರಣೆ



ಯಳಂದೂರಿನ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳು ಹಾಗೂ ಅಕ್ಷರದಾಸೋಹ ಕೇಂದ್ರದ ವತಿಯಿಂದ ದಿನಾಂಕ 18.9.2026ರಂದು ರಾಜಗುರುತಿಲಕ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಬೆಳಗ್ಗೆ 9 ಗಂಟೆಗೆ ಪೂಜ್ಯರಾಜೇಂದ್ರ ಶ್ರೀಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ವೈದ್ಯರಾದ ಶ್ರೀ ಶ್ರೀಕಂಠಮೂರ್ತಿಯವರು ಮತ್ತು ಯಳಂದೂರು ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗಳಾದ ಶ್ರೀ ಎಂ.ಪಿ. ಮಹೇಶ್‌ಕುಮಾರ್‌ರವರು ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು 111 ಕಳಶಗಳನ್ನು ಹಿಡಿದ ವಿದ್ಯಾರ್ಥಿನಿಯರೊಂದಿಗೆ ಮಂಗಳವಾದ್ಯ, ಬ್ಯಾಂಡ್‌ಸೆಟ್, ವೀರಗಾಸೆ ತಂಡಗಳೊಂದಿಗೆ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಆವರಣದಿಂದ ಹೊರಟು ಬಳೆಮಂಟಪದ ಮುಂಭಾಗದಿಂದ ಬಳೇಪೇಟೆಯವರೆಗೆ ಸಾಗಿ ಅನಂತರ ಯಳಂದೂರು ಬಸ್ ನಿಲ್ದಾಣದ ಮೂಲಕ ಕಾಲೇಜನ್ನು ತಲುಪಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜೆಎಸ್ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ವಿಷಯ ಪರಿವೀಕ್ಷಕರಾದ ಶ್ರೀ ಎಸ್.ಸಿ. ಚೆನ್ನಬಸಪ್ಪನವರು ಪೂಜ್ಯ ರಾಜೇಂದ್ರ ಶ್ರೀಗಳವರು ತಮ್ಮ 12ನೇ ವಯಸ್ಸಿನಲ್ಲಿಯೇ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿ, ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಆಗಮಿಸಿದಾಗ, ನಾಡಿನ ವಿವಿಧ ಭಾಗಗಳಿಂದ ಸಾವಿರಾರು ವಿದ್ಯಾರ್ಥಿಗಳು ಮೈಸೂರಿಗೆ ಬರುತ್ತಿದ್ದರು. ಅವರಿಗೆ ಸಮರ್ಪಕ ವಸತಿ ಮತ್ತು ಊಟದ ಸೌಲಭ್ಯಗಳಿರಲಿಲ್ಲ. ಇದನ್ನು ಮನಗಂಡ ಶ್ರೀಗಳವರು ನಾನು ಒಬ್ಬ ವಿದ್ಯಾವಂತನಾದರೆ ಅದರ ಪ್ರಯೋಜನ ನನಗಷ್ಟೇ, ನನ್ನಂತಹ ಸಾವಿರಾರು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದರೆ ಅವರು ವಿದ್ಯಾವಂತರಾಗಿ ಸಮಾಜ ಮತ್ತು ದೇಶದ ಪ್ರಗತಿಗೆಕೊಡುಗೆ ನೀಡುತ್ತಾರೆ ಎಂಬ ದೂರ ದೃಷ್ಟಿಯಿಂದ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಅನಂತರ ಚಾಮರಾಜನಗರ ಸೇರಿದಂತೆ ಅನೇಕ ಕಡೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ಯಾವುದೇ ತಾರತಮ್ಯವಿಲ್ಲದೆ ಬಡ ಮತ್ತು ಪ್ರತಿಭಾವಂತ

ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ ಮತ್ತು ಊಟದ ಸೌಲಭ್ಯ ಕಲ್ಪಿಸಿದರು. ಹೀಗೆ ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ಬೆಳಕಾದರು.ಶಿಕ್ಷಣವೇ ಸಮಾಜದ ಪರಿವರ್ತನೆಯ ಸಾಧನವೆಂಬುದನ್ನು ಅರಿತ ಶ್ರೀಗಳವರು 1954ರಲ್ಲಿ ಪ್ರೌಢಶಾಲೆಯನ್ನು ಆರಂಭಿಸುವ ಮೂಲಕ ಶಿಕ್ಷಣಕ್ಷೇತ್ರದಲ್ಲಿ ಮಹತ್ತರ ಹೆಜ್ಜೆಯಿಟ್ಟರು. ಅವರ ದೂರದೃಷ್ಟಿ ಮತ್ತು ನಿರಂತರ ಸೇವೆಯ ಫಲವಾಗಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಇಂದು ದೇಶ–ವಿದೇಶಗಳಲ್ಲಿ ವಿಸ್ತರಿಸಿಕೊಂಡು ಬೃಹತ್ ಶೈಕ್ಷಣಿಕ ಸಂಸ್ಥೆಯಾಗಿ ಬೆಳೆದಿದೆ. ಮಾನವ ಸೇವೆಯೇ ದೇವರ ಸೇವೆ ಎಂಬ ಆಶಯದೊಂದಿಗೆ ಬದುಕಿದ ರಾಜೇಂದ್ರ ಶ್ರೀಗಳವರು ಸಮಾಜದ ಏಳಿಗೆ ಮತ್ತು ದೇಶದ ಪ್ರಗತಿಗೆ ಅಪಾರ ಕೊಡುಗೆ ನೀಡಿದ ಮಹನೀಯರು ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಎನ್. ಮಹದೇವಸ್ವಾಮಿ ಅವರು ನುಡಿನಮನವನ್ನು ಸಲ್ಲಿಸುತ್ತಾ, ರಾಜೇಂದ್ರ ಶ್ರೀಗಳವರು ಸಮಾಜಕ್ಕೆ, ಶಿಕ್ಷಣ ಕ್ಷೇತ್ರಕ್ಕೆ ಹಾಗೂ ದಾಸೋಹ ಪರಂಪರೆಗೆ ಸಲ್ಲಿಸಿದ ಅಪಾರ ಕೊಡುಗೆಯನ್ನು ಪರಿಗಣಿಸಿ, ಮೈಸೂರು ಸಂಸ್ಥಾನದ ಅಂದಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು 'ರಾಜಗುರುತಿಲಕ' ಎಂಬ ಗೌರವಪೂರ್ವಕ ಬಿರುದನ್ನು ನೀಡಿ ಸನ್ಮಾನಿಸಿದರು. ಶ್ರೀಗಳವರ ನಿಸ್ವಾರ್ಥ ಸೇವಾ ಕಾರ್ಯಗಳಿಗೆ ರಾಷ್ಟ್ರಕವಿ ಕುವೆಂಪು ಅವರು ಸಹ ಗೌರವ ಸಲ್ಲಿಸಿರುವುದು, ಶ್ರೀಗಳವರ ಸೇವಾಸಾಧನೆ ಮತ್ತು ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಶ್ರೀಗಳವರು ಕಾಯಕದ ಮೂಲಕವೇ ಮೋಕ್ಷ ಎಂದು ನಂಬಿ ಬದುಕಿದವರು. ಅವರ ಸಾಧನೆ ಆಕಸ್ಮಿಕವಲ್ಲ, ದೈವ ಸಂಕಲ್ಪವಾಗಿದೆ. ರಾಜೇಂದ್ರ ಶ್ರೀಗಳವರು ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಪ್ರಸಾದ ನಿಲಯಗಳನ್ನು ಸ್ಥಾಪಿಸಿದರು. ಜೆಎಸ್‌ಎಸ್ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕರು ಸಾಹಿತಿಗಳಾಗಿ, ಉಪಕುಲಪತಿಗಳಾಗಿ ಹಾಗೂ ರಾಜಕಾರಣಿಗಳಾಗಿ ಸೇವೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಗೌಡಹಳ್ಳಿ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರಾದ ಶ್ರೀ ಜಿ. ಬಸವಣ್ಣನವರು, ಪರಮಪೂಜ್ಯ ರಾಜೇಂದ್ರ ಶ್ರೀಗಳವರು ಮಹಾತ್ಮರು. ಅಂತಹ ಮಹನೀಯರನ್ನು ಸ್ಮರಿಸುವುದು ನಮ್ಮೆಲ್ಲರಿಗೂ ಪುಣ್ಯದ ಕಾರ್ಯವಾಗಿದೆ. ಅವರ ಆದರ್ಶಮಯ ಜೀವನವನ್ನು ನೆನೆಯುವುದು ಜೀವನದ ಸಾರ್ಥಕತೆಯಾಗಿದೆ. ರಾಜೇಂದ್ರ ಶ್ರೀಗಳವರ ಶೈಕ್ಷಣಿಕ ಸೇವೆ ಅಪಾರವಾದದ್ದು. ವಿಶೇಷವಾಗಿ ಚಾಮರಾಜನಗರ, ಯಳಂದೂರು ಹಾಗೂ ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಹೆಣ್ಣುಮಕ್ಕಳಿಗಾಗಿ ಶಾಲಾ–ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡಿದರು. ಶಿಕ್ಷಣದಿಂದಲೇ ಸಮಾಜದ ಪ್ರಗತಿ ಸಾಧ್ಯ ಎಂಬುದನ್ನು ಅರಿತು, ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳಿಗೂ ಶಿಕ್ಷಣದ ಅವಕಾಶಗಳು ದೊರೆಯುವಂತೆ ಮಾಡಿದ ಅವರ ಸೇವೆ ಸ್ಮರಣೀಯವಾದುದು ಎಂದರು.

ಕಾರಾಪುರದ ಶ್ರೀ ವಿರಕ್ತಮಠದ ಶ್ರೀ ಬಸವರಾಜಸ್ವಾಮಿಗಳು ಒಡೆಯರುರವರು ಆಶೀರ್ವಚನವನ್ನು ನೀಡಿ, ಪರಮಪೂಜ್ಯ ರಾಜೇಂದ್ರ ಶ್ರೀಗಳವರು ತಮ್ಮ ಬದುಕನ್ನು ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರೋಗ್ಯ ಕ್ಷೇತ್ರಗಳ ಅಭಿವೃದ್ಧಿಗೆ ಸಮರ್ಪಿಸಿ, ಸಮಾಜಕ್ಕೆ ಅಪೂರ್ವವಾದ ಸೇವೆಯನ್ನು ಸಲ್ಲಿಸಿದ್ದಾರೆ. ರಾಜೇಂದ್ರ ಶ್ರೀಗಳವರ ದೂರದೃಷ್ಟಿ, ಸಮಾಜಮುಖಿ ಚಿಂತನೆ ಹಾಗೂ ಸೇವಾ ಮನೋಭಾವದ ಫಲವಾಗಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಕೇವಲ ವಿದ್ಯಾವಂತರಾಗಿ ಹೊರಬರುವುದಲ್ಲದೆ, ವಿನಯಶೀಲರು, ಸುಸಂಸ್ಕೃತರು, ಮೌಲ್ಯನಿಷ್ಠರು ಹಾಗೂ ಸಮಾಜದ ಬಗ್ಗೆ ಕಾಳಜಿಯುಳ್ಳ ಜವಾಬ್ದಾರಿಯುತ ನಾಗರಿಕರಾಗಿ

ರೂಪುಗೊಳ್ಳುತ್ತಿದ್ದಾರೆ. ಜ್ಞಾನ ಮತ್ತು ಸಂಸ್ಕಾರವನ್ನು ಸಮನ್ವಯಗೊಳಿಸುವಂತಹ ಶ್ರೇಷ್ಠ ವಾತಾವರಣವನ್ನು ಸಂಸ್ಥೆ ನಿರ್ಮಿಸಿದೆ ಎಂದು ತಿಳಿಸಿದರು.

ಕು. ಮೈತ್ರಿ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ಶ್ರೀಮತಿ ವಿ. ಚಂದ್ರಕಲಾ ಸ್ವಾಗತಿಸಿದರು. ಪ್ರಾಂಶುಪಾಲರಾದ ಶ್ರೀ ಎಚ್.ಎಸ್. ಚಂದ್ರಶೇಖರ ವಂದಿಸಿದರು. ಉಪನ್ಯಾಸಕರಾದ ಶ್ರೀ ಆರ್. ಉಮೇಶ್ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು–ಅಧ್ಯಾಪಕೇತರರು, ವಿದ್ಯಾರ್ಥಿನಿಯರು, ಶ್ರೀಮಠದ ಭಕ್ತರು, ಸಾರ್ವಜನಿಕರು, ಮಾಧ್ಯಮ ಮಿತ್ರರು ಹಾಗೂ ಆರಕ್ಷಕಠಾಣೆಯ ಸಿಬ್ಬಂದಿ ವರ್ಗದವರು ಭಾಗವಹಿಸಿ ಶ್ರೀಗಳವರ ಕೃಪೆಗೆ ಪಾತ್ರರಾದರು.


ಜಯಂತಿ ಮಹೋತ್ಸವದ ಅಂಗವಾಗಿ ಪ್ರೌಢಶಾಲೆ ಮತ್ತು ಪದವಿಪೂರ್ವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ದತ್ತಿ ಬಹುಮಾನಗಳನ್ನು ನೀಡಲಾಯಿತು. ಹಿರಿಯ ವಿದ್ಯಾರ್ಥಿನಿಯರಾದ ಯಳಂದೂರಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಬಿ. ಹೆಚ್. ಮಂಜುಳ, ಯಳಂದೂರಿನ ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ವಲಯ ಸಂಪನ್ಮೂಲ ವ್ಯಕ್ತಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಶಶಿರೇಖಾ, ಸಂಶೋಧಕರಾದ ಡಾ. ಬಿ.ಎಸ್. ಚಂದನ ಹಾಗೂ ಮಾರ್ಗದರ್ಶಿ ವಿಕಲಚೇತನ ಸ್ವಯಂಸೇವಾ ಸಂಸ್ಥೆಯಲ್ಲಿ ತಾಲ್ಲೂಕು ಸಂಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಕಲಾರವರುಗಳನ್ನು ಸನ್ಮಾನಿಸಲಾಯಿತು.

ಜೆಎಸ್ಎಸ್ ಬಾಲಜಗತ್, ಮೈಸೂರು



ಮೈಸೂರಿನ ಜೆಎಸ್ಎಸ್ ಬಾಲಜಗತ್‌ನಲ್ಲಿ ನಡೆದ ಪೂಜ್ಯ ರಾಜೇಂದ್ರ ಶ್ರೀಗಳವರ ಜಯಂತಿ ಮಹೋತ್ಸವ ಸಂದರ್ಭದಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮುಖ್ಯ ಶಿಕ್ಷಕರಾದ ಶ್ರೀಮತಿ ಹೆಚ್.ಜಿ. ಮಂಜುಳ ಮತ್ತು ನುಡಿ ನಮನ ಸಲ್ಲಿಸಿದ ಸಾಹಿತಿ ಶ್ರೀ ನಗರ್ಲೆ ಶಿವಕುಮಾರರವರಿದ್ದಾರೆ. (17 ಸೆಪ್ಟೆಂಬರ್ 2026)

ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳು, ದೊಡ್ಡಕಾಡನೂರು



ದೊಡ್ಡಕಾಡನೂರಿನ ಜೆಎಸ್ಎಸ್ ಸಂಸ್ಥೆಯಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದಲ್ಲಿ ತೇಜೂರಿನ ಶ್ರೀ ಸಿದ್ಧರಾಮೇಶ್ವರ ಮಠದ ಪೀಠಾಧ್ಯಕ್ಷರಾದ ಷ.ಬ್ರ. ಶ್ರೀ ಕಲ್ಯಾಣ ಸ್ವಾಮಿಗಳವರು, ಪ್ರಾಂಶುಪಾಲರು, ಮುಖ್ಯ ಶಿಕ್ಷಕರು, ಸಿಬ್ಬಂದಿವರ್ಗದವರು, ಶ್ರೀಮಠದ ಭಕ್ತರು ಹಾಗೂ ಇತರ ಗಣ್ಯರುಗಳಿದ್ದಾರೆ. (22 ಸೆಪ್ಟೆಂಬರ್ 2026)

ಜೆಎಸ್ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು, ದೇವಲಾಪುರ



ದೇವಲಾಪುರದ ಜೆಎಸ್ಎಸ್ ಸಂಸ್ಥೆಯಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದಲ್ಲಿ ಶ್ರೀ ಬಿ. ಪಂಚಾಕ್ಷರಿಸ್ವಾಮಿಯವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಪೂಜ್ಯ ಶ್ರೀ ಜಡೇಸ್ವಾಮಿಗಳು, ಪ್ರಾಂಶುಪಾಲರು, ಮುಖ್ಯ ಶಿಕ್ಷಕರು, ಸಿಬ್ಬಂದಿವರ್ಗದವರಿದ್ದಾರೆ. (18 ಸೆಪ್ಟೆಂಬರ್ 2026)

ಜೆಎಸ್ಎಸ್ ಶಿಕ್ಷಣಸಂಸ್ಥೆ, ಕೋಣನಕುಂಟೆ



ಕೋಣನಕುಂಟೆ ಜೆಎಸ್ಎಸ್ ಸಂಸ್ಥೆಯಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದಲ್ಲಿ ಬೆಂಗಳೂರಿನ ಸರ್ಪಭೂಷಣ ಮಠದ ಪೀಠಾಧ್ಯಕ್ಷರಾದ ನಿ.ಪ್ರ.ಸ್ವ. ಶ್ರೀ ಮಲ್ಲಿಕಾರ್ಜುನಸ್ವಾಮಿಗಳು, ಪ್ರಾಂಶುಪಾಲರು, ಮುಖ್ಯ ಶಿಕ್ಷಕರು, ಸಿಬ್ಬಂದಿವರ್ಗ, ಶ್ರೀಮಠದ ಭಕ್ತರು ಹಾಗೂ ಗಣ್ಯರುಗಳಿದ್ದಾರೆ. (9 ಸೆಪ್ಟೆಂಬರ್ 2026)

ಜೆಎಸ್ಎಸ್ ಶ್ರೀ ಮಹದೇಶ್ವರ ಪ್ರೌಢಶಾಲೆ, ಕಾಮಗೆರೆ



ಕಾಮಗೆರೆಯಲ್ಲಿರುವ ಜೆಎಸ್ಎಸ್ ಶ್ರೀ ಮಹದೇಶ್ವರ ಪ್ರೌಢಶಾಲೆಯಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದಲ್ಲಿ ಮುಡಿಗುಂಡ ವಿರಕ್ತಮಠದ ಶ್ರೀ ಶ್ರೀಕಂಠಸ್ವಾಮಿಗಳು ಮಾತನಾಡುತ್ತಿರುವುದು. ಚಿತ್ರದಲ್ಲಿ ಅತಿಥಿಗಳು, ಮುಖ್ಯಶಿಕ್ಷಕರು ಹಾಗೂ ಸಿಬ್ಬಂದಿವರ್ಗದವರಿದ್ದಾರೆ. (21 ಸೆಪ್ಟೆಂಬರ್ 2026)

ಜೆಎಸ್ಎಸ್ ಶಿಕ್ಷಣಸಂಸ್ಥೆ, ಸಂತೇಮರಹಳ್ಳಿ



ಸಂತೇಮರಹಳ್ಳಿ ಜೆಎಸ್ಎಸ್ ಸಂಸ್ಥೆಯಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದಲ್ಲಿ ದಿವ್ಯ ಸಮ್ಮುಖ ವಹಿಸಿದ್ದ ಷ.ಬ್ರ. ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರು, ಮುಖ್ಯಶಿಕ್ಷಕರು, ಸಿಬ್ಬಂದಿವರ್ಗ, ಶ್ರೀಮಠದ ಭಕ್ತರು ಹಾಗೂ ಗಣ್ಯರುಗಳು. (30 ಸೆಪ್ಟೆಂಬರ್ 2026)

ಜೆಎಸ್ಎಸ್ ಶಿಕ್ಷಣಸಂಸ್ಥೆಗಳು, ಹುಲ್ಲಹಳ್ಳಿ



ಹುಲ್ಲಹಳ್ಳಿ ಜೆಎಸ್ಎಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಉತ್ಸವದಲ್ಲಿ ಶ್ರೀ ಇಮ್ಮಡಿ ಚೆನ್ನಮಲ್ಲ ದೇಶಿಕೇಂದ್ರ ಸ್ವಾಮಿಗಳು, ಅತಿಥಿಗಳು, ಮುಖ್ಯಶಿಕ್ಷಕರು ಹಾಗೂ ಸಿಬ್ಬಂದಿವರ್ಗದವರು. (21 ಸೆಪ್ಟೆಂಬರ್ 2026)

ಶರಣರ ಚಿಂತನೆ ಎಲ್ಲಾ ಕಾಲಕ್ಕೂ ಪ್ರಸ್ತುತ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ದತ್ತಿ ಕಾರ್ಯಕ್ರಮದಲ್ಲಿ ಪ್ರೊ. ಬಿ.ವಿ. ವಸಂತಕುಮಾರ್‌ರವರು ಮಾತನಾಡುತ್ತಿರುವುದು. (19 ಸೆಪ್ಟೆಂಬರ್ 2026)

ಶರಣರ ಚಿಂತನೆ ಎಲ್ಲಾ ಕಾಲಕ್ಕೂ ಪ್ರಸ್ತುತವಾಗಿದೆ ಎಂದು ಹುಣಸೂರಿನ ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಬಿ.ವಿ. ವಸಂತಕುಮಾರ್‌ರವರು ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 19.9.2026ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರಿನ ನಗರ ಘಟಕದ ಸಹಯೋಗದಲ್ಲಿ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ 'ವಚನಕಾರರ ಬದುಕು ಬರೆಹಗಳ ಪ್ರಸ್ತುತತೆ : ಒಂದು ಸಂವಾದ' ವಿಷಯ ಕುರಿತಾದ ದತ್ತಿ ಕಾರ್ಯಕ್ರಮದಲ್ಲಿ ಅವರು ಸಂವಾದ ಗೋಷ್ಠಿಯನ್ನು ನಡೆಸಿಕೊಟ್ಟು ಮಾತನಾಡಿದರು. ವರ್ತಮಾನದಲ್ಲಿ ನಮ್ಮೊಳಗಿನ ಅರಿವನ್ನು ಕಂಡುಕೊಳ್ಳುವುದಕ್ಕೆ ವಚನ ಸಾಹಿತ್ಯದ ಅಧ್ಯಯನ ಮುಖ್ಯ ಅಂತರಂಗವನ್ನು ತಿದ್ದುಕೊಳ್ಳುವುದಕ್ಕೆ ಮತ್ತು ಬದುಕಿನ ಸ್ಥಿತ್ಯಂತರಗಳನ್ನು ತಿಳಿಯುವುದಕ್ಕೆ ಶರಣರೇ ನಮಗೆ ಮಾರ್ಗದರ್ಶಿಗಳಾಗಿದ್ದಾರೆ. ಶರಣರ ವಚನಗಳು ಧರ್ಮದ ಮತ್ತು ಸತ್ಯದ ಮಾತುಗಳಾಗಿವೆ. ನಾವು ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳೆಲ್ಲವನ್ನು ಕಾಯಕ ತತ್ವದಲ್ಲಿ ತಂದಾಗ ನಮ್ಮ ವ್ಯಕ್ತಿತ್ವ ಅರಳುತ್ತದೆ. ಜಗತ್ತಿಗೆ ಆತ್ಮವಿಶ್ವಾಸದಿಂದ ಬದುಕುವುದನ್ನು ಕಲಿಸಿದವರು ಶರಣರು, ಇಷ್ಟಲಿಂಗಪೂಜೆ ಎಂಬುದು ವರ್ತಮಾನದಲ್ಲಿ ಅಧ್ಯಾತ್ಮ, ವಿಜ್ಞಾನ ಮತ್ತು

ಯೋಗವಿಜ್ಞಾನಗಳ ಸಂಗಮವಾಗಿದೆ. ಶರಣರ ಆಲೋಚನೆಗಳನ್ನು ಅನುಷ್ಠಾನಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ದತ್ತಿ ದಾನಿಗಳಾದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು, ಇಂದಿನ ವರ್ತಮಾನದಲ್ಲಿ ಸತತವಾಗಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ನಾವು ಶರಣರ ದಾರಿಯನ್ನು ಅನುಸರಿಸಿದಾಗ ವ್ಯಕ್ತಿತ್ವ ವಿಕಸನವಾಗುತ್ತದೆ. ವಿದ್ಯಾರ್ಥಿಗಳು ನಮ್ಮ ಭವ್ಯ ಪರಂಪರೆಯನ್ನು ಗೌರವಿಸಿದಾಗ ಜೀವನದ ಸಾರ್ಥಕತೆ ಲಭಿಸುತ್ತದೆ. ಮನುಷ್ಯನ ಸಮಾಜವು ದೌರ್ಜನ್ಯದ ಬೀಡಾಗಿದೆ. ಇದರಿಂದ ಹೊರಬರಲು ಶರಣರ ಸಂದೇಶವನ್ನು ಅನುಸರಿಸಬೇಕಾಗಿದೆ. ಇಂದಿನ ಯುವಜನತೆ ಅವಮಾನ, ಸೋಲಿನಿಂದ ಕುಗ್ಗದೆ ಶರಣರ ವಿಚಾರಗಳನ್ನು ಮೈಗೂಡಿಸಿಕೊಂಡು ಬದುಕಿದಾಗ ಸಾರ್ಥಕತೆಯನ್ನು ಕಾಣುವುದಕ್ಕೆ ಸಾಧ್ಯ ಎಂದರು.

ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷರಾದ ಡಾ. ಜಯಪ್ಪ ಹೊನ್ನಾಳಿಯವರು ಶರಣರ ವಿಚಾರಗಳು ಸದಾಕಾಲಕ್ಕೂ ದಾರಿದೀಪವಾಗಿದ್ದು, ಇಂದಿನ ಸಂವಾದಗೋಷ್ಠಿಯು ಅಮೃತಪಾನ ಉಂಡಷ್ಟೇ ಅನುಭವವನ್ನು ನೀಡಿತು. ಶರಣರ ವಿಚಾರಗಳು ಪ್ರಸ್ತುತ ಸಮಾಜಕ್ಕೆ ಅಗತ್ಯ ಎಂದು ತಿಳಿಸಿದರು.

ಸಂವಾದದಲ್ಲಿ ಭಾಗಿಯಾದ ಅಧ್ಯಾಪಕರು, ಸಂಶೋಧನಾರ್ಥಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಗಣ್ಯರು ಪ್ರಮಾಣಪತ್ರವನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಪ್ರಾಂಶುಪಾಲರಾದ ಡಾ. ರೇಚಣ್ಣ ಉಪಸ್ಥಿತರಿದ್ದರು. ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶ್ರೀ ಮ.ಗು. ಸದಾನಂದಯ್ಯ, ಡಾ. ಎಚ್.ಎಸ್. ಲೋಕೇಶಪ್ಪ ಅವರುಗಳು ಅತಿಥಿಗಳನ್ನು ಪರಿಚಯಿಸಿದರು. ಕು. ಧಾತ್ರಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಡಾ. ಶೈಲಾ ನಾಗರಾಜ್ ಸ್ವಾಗತಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಹೊನ್ನಶೆಟ್ಟಿಯವರು ವಂದನಾರ್ಪಣೆ ಮಾಡಿದರು. ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಜೆ. ಪುಷ್ಪಲತಾ ಕಾರ್ಯಕ್ರಮ ನಿರೂಪಿಸಿದರು.

ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆಗಳಿಗೆ 50% ರಿಯಾಯಿತಿ

ಜೆಎಸ್‌ಎಸ್ ಗ್ರಂಥಮಾಲೆಯ ಎಲ್ಲಾ ಪ್ರಕಟಣೆಗಳಿಗೆ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನವೆಂಬರ್ ತಿಂಗಳಿನಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಆವರಣದಲ್ಲಿರುವ ಜೆಎಸ್‌ಎಸ್ ಬುಕ್ ಹೌಸ್, ಮೈಸೂರು ಶ್ರೀಮಠದ ಆವರಣದಲ್ಲಿರುವ ಪುಸ್ತಕ ಮಳಿಗೆ, ಸುತ್ತೂರು ಶ್ರೀಕ್ಷೇತ್ರದ ಶ್ರೀಮಠ ಹಾಗೂ ಕರ್ತೃಗದ್ದುಗೆ, ಬೆಂಗಳೂರಿನ ಜಯನಗರದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮಳಿಗೆ ಮತ್ತು ಜೆಎಸ್‌ಎಸ್ ಸಂಚಾರಿ ಪುಸ್ತಕ ಮಾರಾಟ ವಾಹನದಲ್ಲಿ ಪುಸ್ತಕಗಳನ್ನು ಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ **9900953152, 8904838909, 9964161363** ಮೊಬೈಲ್ ಸಂಖ್ಯೆಗಳಲ್ಲಿ ಸಂಪರ್ಕಿಸಲು ಕೋರಿದೆ.

"Teach to Reach" Held



"Teach to Reach", a Special Community Initiative was conducted on 1.9.2026 at **JSS Public School, JSS TIS' Campus, Mysuru.** The motto of the initiative was "Create, Connect and Inspire". The parents were invited to share their knowledge, hobbies and talents to enrich students' learning experiences and build happy minds for a brighter tomorrow.

The parents were warmly welcomed who had an interactive session. The initiative aimed beyond the textbook and conveyed that anybody can 'Teach to Reach' and motivate others through real-life skills. Activities were planned for parents and they did Cooking: Demonstration of healthy and easy recipes; Dancing: Classical and folk-dance performances; Singing: Musical and vocal sessions; Art & Craft: Painting, craft-making and creative art; Gardening: Planting, caring the plants and develop environmental awareness. This has successfully been done since three consecutive years. Students actively participated and gained knowledge about Banking to Sign Language that included all areas of life skills. The programme successfully strengthened the bond between the school and the community at large.

These kinds of events prove to be very important for the holistic development of students.

KAPCON 2026 Held



KAPCON 2026, 52nd Annual State Conference of the Karnataka Chapter of the Indian Association of Pathologists and Microbiologists, was hosted by the Dept. of Pathology, **JSS Medical College, JSS Academy of Higher Education & Research, Mysuru**, between 3rd-5th July 2026, under the aegis of the KCIAPM.

The conference was inaugurated by Dr. Suresh Hanagavadi, a Padmashri Awardee, who was also the Chief Guest, in the presence of Dr. B. Suresh, Pro-Chancellor, JSS AHER; Dr. H. Basavanagowdappa, Vice-Chancellor, JSS AHER; Dr. D. Narayanappa, Principal, JSS Medical College, Dr. C.P. Madhu, Director, JSS Hospital and KCIAPM Office Bearers including Dr. K.V. Santosh, President, Dr. Aditya Agnihotri, Hon. Secretary, Dr. Thejaswi Krishnamurthy, Treasurer, and Dr. T.A. Sushma, KMC Observer, Dr. M. Asha, Organizing Co-chairperson and Dr. B.R. Rajalakshmi, Joint Organizing Secretary.

Dr. M.N. Suma, Vice-Principal, JSS Medical College and Sri S. Satish Chandra, Administrative Officer, JSS Medical College were also present.

The invocation was done by Dr. K. Vani, and, Dr. C.S. Sheela Devi, Organizing Chairperson, welcomed the delegates. After the ceremonial lighting the lamp, Dr. Suresh Hanagavadi was felicitated. Presiding over the function, Dr. B. Suresh emphasized the indispensable role of Pathologists in ensuring accurate diagnosis and quality patient care. Dr. K.V. Santosh addressed the gathering, while Dr. Aditya Agnihotri presented the Annual Report of KCIAPM.

